# ಕರ್ನಾಟಕ ವಿಧಾನ ಪರಿಷತ್ತು

(159ನೇ ಅಧಿವೇಶನ)

ಗುರುವಾರ, 13ನೇ ಆಗಸ್ಟ್ 2026

## ವಿಷಯಾನುಕ್ರಮಣಿಕೆ (INDEX)

1. ಪ್ರಕಟಣೆಗಳು

ಅ) ಡಾ: ಯತೀಂದ್ರ ಎಸ್, ಮಾನ್ಯ ನಗರಾಭಿವೃದ್ಧಿ ಸಚಿವರು, ಇವರನ್ನು ವಿಧಾನ ಪರಿಷತ್ತಿನ ಸಭಾನಾಯಕರನ್ನಾಗಿ ನಾಮನಿರ್ದೇಶನ ಮಾಡಿರುವ ಬಗ್ಗೆ.

ಆ) ಮಾನ್ಯ ಸಭಾಪತಿಯವರ ಗೈರುಹಾಜರಿಯಲ್ಲಿ ಸಭಾಪತಿಯವರ ಸ್ಥಾನದಲ್ಲಿ ಪದಧಾರಣ ಮಾಡಲು ಮಾನ್ಯ ಸಭಾಪತಿಯವರು ನಾಮನಿರ್ದೇಶನ ಮಾಡಿರುವ ಬಗ್ಗೆ.

2. ಭಾರತದ ಸಂವಿಧಾನದ ಪ್ರಸ್ತಾವನೆಯ ಬೋಧನೆ

3. ಸಂತಾಪ ಸೂಚನೆಗಳು

“ಮಾಜಿ ಸಚಿವರಾದ ಶ್ರೀ ರಾಮಚಂದ್ರಗೌಡ, ಹಾಲಿ ಸಚಿವರಾಗಿದ್ದ ಶ್ರೀ ಡಿ.ಸುಧಾಕರ್, ಮಾಜಿ ಸಚಿವರಾದ ಶ್ರೀ ವೆಂಕಟರಮಣಪ್ಪ, ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಉಪ ಸಭಾಧ್ಯಕ್ಷರಾಗಿದ್ದ ಶ್ರೀ ಸಿ. ವೀರಣ್ಣ, ಮಾಜಿ ಸಂಸದರಾದ ಶ್ರೀ ಎಚ್. ಹನುಮಂತಪ್ಪ, ಬರಹಗಾರರು, ಪತ್ರಕರ್ತರು ಹಾಗೂ ಪರಿಸರವಾದಿ ಡಾ॥ ಎಸ್.ಆರ್. ರಾಮಸ್ವಾಮಿ, ಭಾರತೀಯ ಖ್ಯಾತ ಹಿನ್ನೆಲೆ ಗಾಯಕಿ ಮತ್ತು ನಟಿ ಶ್ರೀಮತಿ ಆಶಾ ಭೋಂಸ್ಲೆ, ಸಾಹಿತಿ, ರಂಗಭೂಮಿ ಕಲಾವಿದರಾಗಿದ್ದ ಶ್ರೀ ರಾಮಚಂದರ್ ಬೈಕಂಪಾಡಿ, ತೂಗು ಸೇತುವೆಗಳ ಸರದಾರ ಮತ್ತು ಸಮಾಜ ಸೇವಕರಾಗಿದ್ದ ಶ್ರೀ ಗಿರೀಶ್ ಭಾರದ್ವಾಜ್, ಸಂಗೀತ ಲೋಕದ ಸ್ವರ ಸಾಮ್ರಾಜ್ಞಿ ಮತ್ತು ಹಿನ್ನೆಲೆ ಗಾಯಕಿಯಾದ ಶ್ರೀಮತಿ ಎಸ್. ಜಾನಕಿ, ಹಿರಿಯ ಲೇಖಕಿಯಾದ ಶ್ರೀಮತಿ ಸಿ.ಎನ್.ಮುಕ್ತಾ, ಪುರಾತತ್ವಶಾಸ್ತ್ರಜ್ಞರು, ನಾಣ್ಯಶಾಸ್ತ್ರ ತಜ್ಞರಾದ ಪ್ರೊ. ಎ.ವಿ. ನರಸಿಂಹಮೂರ್ತಿ ಹಾಗೂ ಸರಳತೆಯ ಸಾಕಾರ ಮೂರ್ತಿ ಹಾಗೂ ಅನ್ನಪೂರ್ಣೇಶ್ವರಿಯಾಗಿದ್ದ ಶ್ರೀಮತಿ ಚೆನ್ನಮ್ಮ” – ಇವರುಗಳ ನಿಧನದ ಬಗ್ಗೆ.

- ಡಾ: ಯತೀಂದ್ರ ಎಸ್. (ಸಭಾನಾಯಕರು)
- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಸಿ.ಟಿ.ರವಿ
- ಶ್ರೀ ಟಿ.ಎ.ಶರವಣ
- ಶ್ರೀಮತಿ ಬಲ್ಕೀಸ್ ಬಾನು
- ಶ್ರೀ ಐವನ್ ಡಿ’ಸೋಜಾ
- ಶ್ರೀ ಎಸ್.ಎಲ್.ಭೋಜೇಗೌಡ

- ಶ್ರೀ ತಿಪ್ಪಣ್ಣಪ್ಪ ಕಮಕನೂರ
- ಶ್ರೀ ಕೆ.ಎಸ್.ನವೀನ್
- ಡಾ: ಉಮಾಶ್ರೀ
- ಶ್ರೀ ಪಿ.ಹೆಚ್.ಪೂಜಾರ್
- ಶ್ರೀ ಕಿಶೋರ್ ಕುಮಾರ್ ಪುತ್ತೂರ್
- ಶ್ರೀ ಶಿವಣ್ಣ ಬಿ.ಎಸ್.
- ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್)

~ ~ ~ ~ ~ ~

(663) 13.08.2026/11.20/ಎಸ್‌ಕೆ-ಎಂಡಿ

# ಕರ್ನಾಟಕ ವಿಧಾನ ಪರಿಷತ್ತು

ಗುರುವಾರ, ದಿನಾಂಕ 13ನೇ ಆಗಸ್ಟ್ 2026

ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ
ಪೂರ್ವಾಹ್ನ 11 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು.

ಹಂಗಾಮಿ ಸಭಾಪತಿಯವರಾದ ಶ್ರೀ ಪುಟ್ಟಣ್ಣನವರು ಪೀಠದಲ್ಲಿ ಉಪಸ್ಥಿತರಾದರು.

(ಸದನದ ಕಲಾಪವು "ವಂದೇ ಮಾತರಂ" ರಾಷ್ಟ್ರೀಯ ಗೀತೆಯ ಗಾಯನದೊಂದಿಗೆ ಪ್ರಾರಂಭಗೊಂಡಿತು)

**1. ಪ್ರಕಟಣೆಗಳು**

**ಅ) ವಿಷಯ:- ಡಾ॥ ಯತೀಂದ್ರ ಎಸ್., ಮಾನ್ಯ ನಗರಾಭಿವೃದ್ಧಿ ಸಚಿವರು, ಇವರನ್ನು ವಿಧಾನ ಪರಿಷತ್ತಿನ ಸಭಾನಾಯಕರನ್ನಾಗಿ ನಾಮನಿರ್ದೇಶನ ಮಾಡಿರುವ ಬಗ್ಗೆ.**

- - - - -

**ಸಭಾಪತಿಯವರು:-** ಸನ್ಮಾನ್ಯ ಮುಖ್ಯಮಂತ್ರಿಯವರು ದಿನಾಂಕ 13.08.2026ರ ತಮ್ಮ ಪತ್ರದಲ್ಲಿ ತಿಳಿಸಿರುವ ರೀತ್ಯಾ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ನಿಯಮ 2(1)ರ ಪ್ರಕಾರ ಡಾ॥ ಯತೀಂದ್ರ ಎಸ್., ಮಾನ್ಯ ನಗರಾಭಿವೃದ್ಧಿ ಸಚಿವರು ಇವರನ್ನು ವಿಧಾನ ಪರಿಷತ್ತಿನ ಸಭಾನಾಯಕರನ್ನಾಗಿ ದಿನಾಂಕ 13.08.2026 ರಿಂದ ಜಾರಿಗೆ ಬರುವಂತೆ ನಾಮನಿರ್ದೇಶನ ಮಾಡಿರುತ್ತಾರೆಂಬ ವಿಷಯವನ್ನು ಸದನದ ಗಮನಕ್ಕೆ ತರಲಾಗಿದೆ.

**ಆ) ವಿಷಯ:- ಮಾನ್ಯ ಸಭಾಪತಿಯವರ ಗೈರು ಹಾಜರಿಯಲ್ಲಿ ಸಭಾಪತಿಯವರ ಸ್ಥಾನದಲ್ಲಿ ಪದಧಾರಣ ಮಾಡಲು ಮಾನ್ಯ ಸಭಾಪತಿಯವರು ನಾಮನಿರ್ದೇಶನ ಮಾಡಿರುವ ಬಗ್ಗೆ.**

- - - - -

**ಸಭಾಪತಿಯವರು:-** ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ನಿಯಮ 9ರ ಮೇರೆಗೆ ಮಾನ್ಯ ಸಭಾಪತಿಯವರ ಗೈರು ಹಾಜರಿಯಲ್ಲಿ ಸಭಾಪತಿಯವರ ಸ್ಥಾನದಲ್ಲಿ ಪದಧಾರಣ ಮಾಡಲು ಈ ಮುಂದಿನ ಸದಸ್ಯರುಗಳನ್ನು ಮಾನ್ಯ ಸಭಾಪತಿಯವರು ನಾಮನಿರ್ದೇಶನ ಮಾಡಿರುತ್ತಾರೆಂದು ಈ ಮೂಲಕ ತಿಳಿಸಲಾಗಿದೆ.

1. ಶ್ರೀ ಮಧು ಜಿ. ಮಾದೇಗೌಡ
2. ಶ್ರೀ ತಿಪ್ಪಣ್ಣಪ್ಪ ಕಮಕನೂರ
3. ಶ್ರೀ ಎಸ್.ಎಲ್. ಭೋಜೇಗೌಡ
4. ಶ್ರೀ ಎಸ್.ವ್ಹಿ. ಸಂಕನೂರ

## 2. ಭಾರತದ ಸಂವಿಧಾನದ ಪ್ರಸ್ತಾವನೆಯ ಬೋಧನೆ

**(ಸನ್ಮಾನ್ಯ ಸಭಾಪತಿಯವರು ಸದನದಲ್ಲಿ ಈ ಕೆಳಕಂಡಂತೆ ಭಾರತದ ಸಂವಿಧಾನದ ಪ್ರಸ್ತಾವನೆಯನ್ನು ಬೋಧಿಸಿದರು)**

ಭಾರತದ ಜನಗಳಾದ ನಾವು
ಭಾರತವನ್ನು ಒಂದು ಸಾರ್ವಭೌಮ ಸಮಾಜವಾದೀ
ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ
ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ;

**ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ;**
**ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು**
**ಉಪಾಸನಾ ಸ್ವಾತಂತ್ರ್ಯ;**
**ಸ್ಥಾನಮಾನ ಹಾಗೂ ಅವಕಾಶ ಸಮಾನತೆ**

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು
ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು ಸುನಿಶ್ಚಿತಗೊಳಿಸಿ ಅವರಲ್ಲಿ
**ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು
ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

**ನಮ್ಮ ಸಂವಿಧಾನ ಸಭೆಯಲ್ಲಿ**
1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಿನ ದಿವಸ
**ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ,**
**ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

## ೩. ಸಂತಾಪ ಸೂಚನೆಗಳು

**ವಿಷಯ: “ಮಾಜಿ ಸಚಿವರಾದ ಶ್ರೀ ರಾಮಚಂದ್ರಗೌಡ, ಹಾಲಿ ಸಚಿವರಾಗಿದ್ದ ಶ್ರೀ ಡಿ.ಸುಧಾಕರ್, ಮಾಜಿ ಸಚಿವರಾದ ಶ್ರೀ ವೆಂಕಟರಮಣಪ್ಪ, ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಉಪ ಸಭಾಧ್ಯಕ್ಷರಾಗಿದ್ದ ಶ್ರೀ ಸಿ. ವೀರಣ್ಣ, ಮಾಜಿ ಸಂಸದರಾದ ಶ್ರೀ ಎಚ್. ಹನುಮಂತಪ್ಪ, ಬರಹಗಾರರು, ಪತ್ರಕರ್ತರು ಹಾಗೂ ಪರಿಸರವಾದಿ ಡಾ॥ ಎಸ್.ಆರ್. ರಾಮಸ್ವಾಮಿ, ಭಾರತೀಯ ಖ್ಯಾತ ಹಿನ್ನೆಲೆ ಗಾಯಕಿ ಮತ್ತು ನಟಿ ಶ್ರೀಮತಿ ಆಶಾ ಭೋಂಸ್ಲೆ, ಸಾಹಿತಿ, ರಂಗಭೂಮಿ ಕಲಾವಿದರಾಗಿದ್ದ ಶ್ರೀ ರಾಮಚಂದರ್ ಬೈಕಂಪಾಡಿ, ತೂಗು ಸೇತುವೆಗಳ ಸರದಾರ ಮತ್ತು ಸಮಾಜ ಸೇವಕರಾಗಿದ್ದ ಶ್ರೀ ಗಿರೀಶ್ ಭಾರದ್ವಾಜ್, ಸಂಗೀತ ಲೋಕದ ಸ್ವರ ಸಾಮ್ರಾಜ್ಞಿ ಮತ್ತು ಹಿನ್ನೆಲೆ ಗಾಯಕಿಯಾದ ಶ್ರೀಮತಿ ಎಸ್. ಜಾನಕಿ, ಹಿರಿಯ ಲೇಖಕಿಯಾದ ಶ್ರೀಮತಿ ಸಿ.ಎನ್.ಮುಕ್ತಾ, ಪುರಾತತ್ವಶಾಸ್ತ್ರಜ್ಞರು, ನಾಣ್ಯಶಾಸ್ತ್ರ ತಜ್ಞರಾದ ಪ್ರೊ. ಎ.ವಿ. ನರಸಿಂಹಮೂರ್ತಿ ಹಾಗೂ ಸರಳತೆಯ ಸಾಕಾರ ಮೂರ್ತಿ ಹಾಗೂ ಅನ್ನಪೂರ್ಣೇಶ್ವರಿಯಾಗಿದ್ದ ಶ್ರೀಮತಿ ಚೆನ್ನಮ್ಮ” – ಇವರುಗಳ ನಿಧನದ ಬಗ್ಗೆ.**

– – – – –

**ಸಭಾಪತಿಯವರು:–** ಮಾಜಿ ಸಚಿವರು ಹಾಗೂ ವಿಧಾನ ಪರಿಷತ್ತಿನ ಮಾಜಿ ಶಾಸಕರಾಗಿದ್ದ ಶ್ರೀ ರಾಮಚಂದ್ರಗೌಡ, ಹಾಲಿ ವಿಧಾನಸಭೆಯ ಶಾಸಕರು ಹಾಗೂ ಸಚಿವರಾಗಿದ್ದ ಶ್ರೀ ಡಿ. ಸುಧಾಕರ್, ಮಾಜಿ ಸಚಿವರು ಹಾಗೂ ವಿಧಾನಸಭೆಯ ಮಾಜಿ ಶಾಸಕರಾಗಿದ್ದ ಶ್ರೀ ವೆಂಕಟರಮಣಪ್ಪ, ಮಾಜಿ ಸಚಿವರು, ವಿಧಾನ ಸಭೆಯ ಮಾಜಿ ಉಪ ಸಭಾಧ್ಯಕ್ಷರು ಹಾಗೂ ವಿಧಾನ ಸಭೆಯ ಮಾಜಿ ಶಾಸಕರಾಗಿದ್ದ ಶ್ರೀ ಸಿ. ವೀರಣ್ಣ, ಮಾಜಿ ಸಂಸದರಾದ ಶ್ರೀ ಎಚ್. ಹನುಮಂತಪ್ಪ, ಬರಹಗಾರ, ಪತ್ರಕರ್ತ, ಜೀವನ ಚರಿತ್ರೆಕಾರ, ಸಾಮಾಜಿಕ ಕಾರ್ಯಕರ್ತ ಮತ್ತು ಪರಿಸರವಾದಿ ಡಾ॥ ಎಸ್.ಆರ್. ರಾಮಸ್ವಾಮಿ, ಭಾರತೀಯ ಖ್ಯಾತ ಹಿನ್ನೆಲೆ ಗಾಯಕಿ ಮತ್ತು ನಟಿ ಶ್ರೀಮತಿ ಆಶಾ ಭೋಂಸ್ಲೆ, ಸಾಹಿತಿ, ರಂಗಭೂಮಿ ಹಾಗೂ ಸಿನಿಮಾ ಕಲಾವಿದರು, ಮೀನುಗಾರರ ಮುಖಂಡರು ಹಾಗೂ ಹಿರಿಯ ರಾಜಕಾರಣಿಯಾಗಿದ್ದ ಶ್ರೀ ರಾಮಚಂದರ್ ಬೈಕಂಪಾಡಿ, ತೂಗು ಸೇತುವೆಗಳ ಸರದಾರ ಮತ್ತು ಸಮಾಜ ಸೇವಕರಾಗಿದ್ದ ಶ್ರೀ ಗಿರೀಶ್ ಭಾರದ್ವಾಜ್, ಸಂಗೀತ ಲೋಕದ ಸ್ವರ ಸಾಮ್ರಾಜ್ಞಿ ಮತ್ತು ಹಿನ್ನೆಲೆ ಗಾಯಕಿಯಾದ ಶ್ರೀಮತಿ ಎಸ್. ಜಾನಕಿ, ಹಿರಿಯ ಲೇಖಕಿಯಾದ ಶ್ರೀಮತಿ ಸಿ.ಎನ್. ಮುಕ್ತಾ, ಪುರಾತತ್ವಶಾಸ್ತ್ರಜ್ಞರು, ನಾಣ್ಯಶಾಸ್ತ್ರ ತಜ್ಞರಾದ ಪ್ರೊ. ಎ.ವಿ. ನರಸಿಂಹಮೂರ್ತಿ ಹಾಗೂ ಸರಳತೆಯ ಸಾಕಾರ ಮೂರ್ತಿ ಹಾಗೂ ಅನ್ನಪೂರ್ಣೇಶ್ವರಿಯಾಗಿದ್ದ ಶ್ರೀಮತಿ ಚೆನ್ನಮ್ಮ ಅವರುಗಳು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾಧಿಸುತ್ತೇನೆ.

## 1. ರಾಮಚಂದ್ರಗೌಡ

ಮಾಜಿ ಸಚಿವರು ಹಾಗೂ ವಿಧಾನ ಪರಿಷತ್ತಿನ ಮಾಜಿ ಶಾಸಕರಾಗಿದ್ದ ಶ್ರೀ ರಾಮಚಂದ್ರಗೌಡ ಅವರು ದಿನಾಂಕ:14.07.2026ರಂದು ನಿಧನ ಹೊಂದಿರುತ್ತಾರೆ.

1938ರ ಡಿಸೆಂಬರ್ 13ರಂದು ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಯಡಿಯೂರು ಹೋಬಳಿಯ ತಿಪ್ಪೂರು ಗ್ರಾಮದಲ್ಲಿ ಜನಿಸಿದ ಶ್ರೀಯುತರು ಬಿ.ಎಸ್ಸಿ., ಬಿ.ಇ.(ಎಲೆಕ್ಟ್ರಿಕಲ್) ಮತ್ತು ಎಫ್.ಐ.ಇ. ಪದವೀಧರರಾಗಿದ್ದು, ವೃತಿಯಲ್ಲಿ ಇಂಜಿನಿಯರ್ರಾಗಿದ್ದರು. ಶ್ರೀಯುತರು ಶಾಲಾ ದಿನಗಳಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದಿಂದ ಪ್ರೇರಿತರಾಗಿ ಸಾಮಾಜಿಕ-ರಾಜಕೀಯ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಿದ್ದರು. 1970ರಲ್ಲಿ ಭಾರತೀಯ ಜನ ಸಂಘದ ಸದಸ್ಯರಾಗಿ ಬೆಂಗಳೂರು ನಗರ ನಿಗಮವನ್ನು ಪ್ರವೇಶಿಸಿ, ನಗರ ಸುಧಾರಣಾ ಟ್ರಸ್ಟ್ ಮಂಡಳಿಗೆ ಆಯ್ಕೆಯಾಗಿದ್ದರು.

ಶ್ರೀಯುತರು 1980ರಲ್ಲಿ ಬೆಂಗಳೂರು ನಗರದ ಮೊದಲನೇ ಬಿ.ಜೆ.ಪಿ. ಅಧ್ಯಕ್ಷರಾಗಿ ದೀರ್ಘಕಾಲದವರೆಗೆ ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿಯಾಗಿ, 1988-1994, 1994-2000, 2000-2006, 2006-2012 ಮತ್ತು 2012-2018ರವರೆಗೆ ಬೆಂಗಳೂರು ಪದವೀಧರರ ಕ್ಷೇತ್ರದಿಂದ ವಿಧಾನ ಪರಿಷತ್ತಿನ ಶಾಸಕರಾಗಿ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು. ರೇಷ್ಮೆ ಸಚಿವರಾಗಿ, ಯೋಜನೆ ಮತ್ತು ಸಾಂಖ್ಯಿಕ ಸಚಿವರಾಗಿ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರಾಗಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾಗಿ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರಾಗಿ, 1970ರಿಂದ 1975 ಮತ್ತು 1983ರಿಂದ 1988ರವರೆಗೆ ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಪೋರೇಟರ್ ಆಗಿ ಹಾಗೂ ರಾಜ್ಯ ಯೋಜನಾ ಮಂಡಳಿ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

**ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.**

(ಮುಂದು)

**(664) 13.08.2026 11.30 ಟಿಸಿಹೆಚ್-ಎಂ.ಡಿ (ಸಭಾಪತಿಯವರ ಉಪಸ್ಥಿತಿ)**

**2. ಶ್ರೀ ಡಿ. ಸುಧಾಕರ್**

**ಹಾಲಿ ವಿಧಾನಸಭೆಯ ಶಾಸಕರು ಹಾಗೂ ಸಚಿವರಾಗಿದ್ದ ಶ್ರೀ ಡಿ. ಸುಧಾಕರ್ ಅವರು ದಿನಾಂಕ 10.05.2026 ರಂದು ನಿಧನ ಹೊಂದಿರುತ್ತಾರೆ.**

1961ರ ಮಾರ್ಚ್ 28ರಂದು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯಲ್ಲಿ ಜನಿಸಿದ್ದ ಶ್ರೀಯುತರು ಬಿ.ಕಾಂ ಪದವೀಧರರಾಗಿದ್ದು, ವೃತ್ತಿಯಲ್ಲಿ ಉದ್ಯಮಿಯಾಗಿದ್ದರು. ಶ್ರೀಯುತರು 2004, 2008, 2013, 2023ರ ಅವಧಿಯಲ್ಲಿ ವಿಧಾನಸಭೆಯ ಸದಸ್ಯರಾಗಿ, ಸಮಾಜ ಕಲ್ಯಾಣ ಮತ್ತು ಕ್ರೀಡಾ ಸಚಿವರಾಗಿ ಹಾಗೂ 2023ರಲ್ಲಿ ಯೋಜನೆ ಮತ್ತು ಸಾಂಖ್ಯಿಕ ಹಾಗೂ ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರಾಗಿ ಸೇವೆಯನ್ನು ಸಲ್ಲಿಸಿದ್ದರು. 2004, 2007, 2014, 2019, 2024ರಲ್ಲಿ ಡಿ.ಸಿ.ಸಿ ಬ್ಯಾಂಕ್‌ನ ಅಧ್ಯಕ್ಷರಾಗಿ ಹಾಗೂ 2016 ರಿಂದ 2018 ರವರೆಗೆ ಕರ್ನಾಟಕ ರಾಜ್ಯ ಎಲೆಕ್ಟ್ರಾನಿಕ್ಸ್ ಅಭಿವೃದ್ಧಿ ನಿಗಮ ಲಿಮಿಟೆಡ್ (ಕಿಯೋನಿಕ್ಸ್)ನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದು, ಬ್ಯಾಂಕ್ ಮೂಲಕ ಶೂನ್ಯ ಬಡ್ಡಿ ದರದಲ್ಲಿ ರೈತರಿಗೆ 3 ಲಕ್ಷ ರೂಪಾಯಿಗಳವರೆಗೆ ಸಾಲ ವಿತರಣೆ, ಮಹಿಳಾ ಸ್ವ-ಸಹಾಯ ಸಂಘ ಗುಂಪುಗಳಿಗೆ ಸೌಲಭ್ಯಗಳನ್ನು ವಿತರಿಸಲು ಕ್ರಮವಹಿಸಿದ್ದರು. ವಿ.ವಿ ಸಾಗರ ಮತ್ತು ಗಾಯತ್ರಿ ಜಲಾಶಯದಿಂದ ತಾಲ್ಲೂಕಿನ 112 ಹಳ್ಳಿಗಳಿಗೆ ಕುಡಿಯುವ ನೀರು ಪೂರೈಸುವ ಬೃಹತ್ ಯೋಜನೆ ಜಾರಿಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಹಾಗೂ ಭದ್ರಾ ಮೇಲ್ದಂಡೆ ಯೋಜನೆಯನ್ನು ತ್ವರಿತಗೊಳಿಸಲು ವಿಶೇಷ ಕಾಳಜಿ ವಹಿಸಿದ್ದರು. ಬರಗಾಲದ ಸಮಯದಲ್ಲಿ ರೈತರ ದನ-ಕರುಗಳಿಗಾಗಿ ಸುಮಾರು 500 ಎಕರೆ ಸರ್ಕಾರಿ ಜಮೀನಿನಲ್ಲಿ ಮೇವು ಬೆಳೆಸಿ ಉಚಿತವಾಗಿ ವಿತರಿಸಿ, ಇಡೀ ರಾಜ್ಯಕ್ಕೆ ಮಾದರಿಯಾಗಿದ್ದರು. 2024ರ ಸಾಲಿನ ಸಹಕಾರ ರತ್ನ ಪ್ರಶಸ್ತಿಗೂ ಭಾಜನರಾಗಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

**3. ಶ್ರೀ ವೆಂಕಟರಮಣಪ್ಪ**

**ಮಾಜಿ ಸಚಿವರು ಹಾಗೂ ವಿಧಾನಸಭೆಯ ಮಾಜಿ ಶಾಸಕರಾಗಿದ್ದ ಶ್ರೀ ವೆಂಕಟರಮಣಪ್ಪ ಅವರು ದಿನಾಂಕ 29.05.2026 ರಂದು ನಿಧನ ಹೊಂದಿರುತ್ತಾರೆ.**

1945ರ ಮಾರ್ಚ್ 15 ರಂದು ಪಾವಗಡ ತಾಲ್ಲೂಕಿನ ಹನುಮಂತನಹಳ್ಳಿ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ಎಸ್.ಎಸ್.ಎಲ್.ಸಿ.ಯವರೆಗೆ ವ್ಯಾಸಂಗ ಮಾಡಿದ್ದು, ವೃತ್ತಿಯಲ್ಲಿ ಕೃಷಿಕರಾಗಿದ್ದರು. 1967ರಲ್ಲಿ ಗ್ರಾಮ ಪಂಚಾಯತಿ ಸದಸ್ಯರಾಗಿ ರಾಜಕೀಯ ಜೀವನವನ್ನು ಪ್ರಾರಂಭಿಸಿ, 1989, 1999, 2008 ಮತ್ತು 2018 ರಲ್ಲಿ ವಿಧಾನಸಭೆ ಶಾಸಕರಾಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು ಜವಳಿ ಮತ್ತು ರೇಷ್ಮೆ ಸಚಿವರಾಗಿ, ಸಣ್ಣ ಕೈಗಾರಿಕಾ ಸಚಿವರಾಗಿ

ಹಾಗೂ ಕಾರ್ಮಿಕ ಸಚಿವರಾಗಿ ಸೇವೆ ಸಲ್ಲಿಸಿದ್ದರು. ಶ್ರೀಯುತರು ವಿ.ಎಸ್.ಎಸ್.ಎನ್ ಅಧ್ಯಕ್ಷರಾಗಿ, ಪೊನ್ನಸಮುದ್ರ ಮಂಡಲ ಪಂಚಾಯತಿ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು. ಪಾವಗಡ ಪಟ್ಟಣಕ್ಕೆ ಕುಡಿಯುವ ನೀರು ಕಲ್ಪಿಸಲು ನಾಗಲಮಡಿಕೆ ಉತ್ತರ ಪಿನಾಕಿನಿ ನದಿಗೆ ಅಡ್ಡವಾಗಿ ಚೆಕ್‌ಡ್ಯಾಂ ಕಟ್ಟಿಸುವ ಮೂಲಕ ನೀರಿನ ಹಾಹಾಕಾರವನ್ನು ಹೋಗಲಾಡಿಸಿದ ಭಗೀರಥ ಎಂಬ ಹೆಸರಿನಿಂದ ಜನಪ್ರಿಯರಾಗಿದ್ದ ಶ್ರೀಯುತರು ರಸ್ತೆ ಸಂಪರ್ಕ ಕಲ್ಪಿಸುವ ಮೂಲಕ ತಮ್ಮ ಕ್ಷೇತ್ರದ ಅಭಿವೃದ್ಧಿಗೆ ಬಹಳಷ್ಟು ಶ್ರಮಿಸಿದ್ದರು. ತುಮಕೂರು-ರಾಯದುರ್ಗ ರೈಲು ಯೋಜನೆ ಅನುಷ್ಠಾನದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಶ್ರೀಯುತರು ಸುದೀರ್ಘ ಕಾಲ ರಾಜಕೀಯ ಜೀವನದಲ್ಲಿ ಅತ್ಯಂತ ಸರಳ, ಸಜ್ಜನ ಮತ್ತು ಜನಸ್ನೇಹಿ ನಾಯಕರೆಂದೇ ಗುರುತಿಸಿಕೊಂಡಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

**4. ಶ್ರೀ ಸಿ. ವೀರಣ್ಣ**

**ಮಾಜಿ ಸಚಿವರು, ವಿಧಾನಸಭೆಯ ಮಾಜಿ ಉಪ ಸಭಾಧ್ಯಕ್ಷರು ಹಾಗೂ ವಿಧಾನಸಭೆಯ ಮಾಜಿ ಶಾಸಕರಾಗಿದ್ದ ಶ್ರೀ ಸಿ. ವೀರಣ್ಣ ಅವರು ದಿನಾಂಕ 24.07.2026 ರಂದು ನಿಧನ ಹೊಂದಿರುತ್ತಾರೆ.**

1940ರ ಏಪ್ರಿಲ್, 23ರಂದು ತುಮಕೂರು ಜಿಲ್ಲೆಯ ಕೊರಟಗೆರೆಯಲ್ಲಿ ಜನಿಸಿದ್ದ ಶ್ರೀಯುತರು ಬಿ.ಎ., ಬಿ.ಎಲ್., ಪದವೀಧರರಾಗಿದ್ದು, ವೃತ್ತಿಯಲ್ಲಿ ವಕೀಲರಾಗಿದ್ದರು. ಶ್ರೀಯುತರು ಜನತಾ ಪಕ್ಷದ ಮೂಲಕ ರಾಜಕೀಯ ಪ್ರವೇಶಿಸಿ, 1983 ಮತ್ತು 1985 ರಲ್ಲಿ ಕೊರಟಗೆರೆ ವಿಧಾನಸಭಾ ಕ್ಷೇತ್ರದಿಂದ ಜನತಾ ಪಕ್ಷದ ಶಾಸಕರಾಗಿ ಆಯ್ಕೆಯಾಗಿ, 1983 ರಲ್ಲಿ ವಿಧಾನಸಭೆಯ ಉಪ ಸಭಾಧ್ಯಕ್ಷರಾಗಿ ಹಾಗೂ 1983 ರಿಂದ 1989 ರವರೆಗೆ ಶ್ರೀ ರಾಮಕೃಷ್ಣ ಹೆಗಡೆ ಹಾಗೂ ಶ್ರೀ ಎಸ್.ಆರ್. ಬೊಮ್ಮಾಯಿ ಅವರ ಸಂಪುಟಗಳಲ್ಲಿ ಸಾರಿಗೆ, ಸಣ್ಣ ಉಳಿತಾಯ, ಕೈಗಾರಿಕೆ ಹಾಗೂ ವಾಣಿಜ್ಯ, ಬಂಧಿಖಾನೆ ಸೇರಿದಂತೆ ಹಲವು ಪ್ರಮುಖ ಖಾತೆಗಳನ್ನು ಸಮರ್ಥವಾಗಿ ನಿರ್ವಹಿಸಿದ್ದರು. ವಾಲ್ಮೀಕಿ ಸಮುದಾಯವನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರ್ಪಡೆಗೊಳಿಸುವ ಹೋರಾಟದಲ್ಲಿ ಮತ್ತು ಸಮುದಾಯದ ಹಕ್ಕುಗಳಿಗಾಗಿ ನಿರಂತರವಾಗಿ ಶ್ರಮಿಸಿದ್ದರು. ಶ್ರೀಯುತರ ಸೇವೆಯನ್ನು ಗುರುತಿಸಿ 2016 ರಲ್ಲಿ ಮಹರ್ಷಿ ವಾಲ್ಮೀಕಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿರುತ್ತದೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

## 5. ಶ್ರೀ ಎಚ್. ಹನುಮಂತಪ್ಪ

**ಹಿರಿಯ ರಾಜಕಾರಣಿ ಹಾಗೂ ಮಾಜಿ ಸಂಸದರಾದ ಶ್ರೀ ಎಚ್. ಹನುಮಂತಪ್ಪ ಅವರು ದಿನಾಂಕ 12.07.2026 ರಂದು ನಿಧನ ಹೊಂದಿರುತ್ತಾರೆ.**

1932ರ ಮೇ 13 ರಂದು ಚಿತ್ರದುರ್ಗದಲ್ಲಿ ಜನಿಸಿದ ಶ್ರೀಯುತರು ವೃತ್ತಿಯಲ್ಲಿ ಶಿಕ್ಷಕರು ಹಾಗೂ ವಕೀಲರಾಗಿದ್ದರು. ವಿದ್ಯಾರ್ಥಿ ದಿಸೆಯಲ್ಲೇ ಭಾರತ ಸೇವಾದಳ ಚಟುವಟಿಕೆಗಳ ಮೂಲಕ ರಾಜಕಾರಣ ಪ್ರವೇಶ ಮಾಡಿ, ತಮ್ಮ ಸುದೀರ್ಘ ರಾಜಕೀಯ ಜೀವನದಲ್ಲಿ ದಲಿತರು, ಹಿಂದುಳಿದ ವರ್ಗಗಳು ಹಾಗೂ ಸಮಾಜದ ದುರ್ಬಲ ವರ್ಗಗಳ ಪರವಾಗಿ ನಿರಂತರವಾಗಿ ಧ್ವನಿ ಎತ್ತುವ ಮೂಲಕ ಗುರುತಿಸಿಕೊಂಡಿದ್ದರು. ಶ್ರೀಯುತರು 1982 ರಿಂದ 2000 ರವರೆಗೆ ಸತತವಾಗಿ ಮೂರು ಬಾರಿ ರಾಜ್ಯಸಭಾ ಸದಸ್ಯರಾಗಿ, ಕೇಂದ್ರ ರೇಲ್ವೆ ಮಂಡಳಿ, ಕೇಂದ್ರ ರೇಷ್ಮೆ ಮಂಡಳಿ ಅಧ್ಯಕ್ಷರಾಗಿ, ಸಂಸತ್ತಿನಲ್ಲಿ ಕಾಂಗ್ರೆಸ್ ಸಂಸದೀಯ ಪಕ್ಷದ ಕಾರ್ಯದರ್ಶಿಯಾಗಿ, ಖಜಾಂಚಿಯಾಗಿ, ಎಸ್. ನಿಜಲಿಂಗಪ್ಪ ಮೆಮೋರಿಯಲ್ ಟ್ರಸ್ಟ್ ಅಧ್ಯಕ್ಷರಾಗಿ, 1995-1998 ರವರೆಗೆ ರಾಷ್ಟ್ರೀಯ ಎಸ್ಸಿ/ಎಸ್ಟಿ ಆಯೋಗದ ಅಧ್ಯಕ್ಷರಾಗಿ ಹಾಗೂ 2002-2004 ರವರೆಗೆ ರಾಜ್ಯ ಯೋಜನಾ ಮಂಡಳಿ ಉಪಾಧ್ಯಕ್ಷರಾಗಿ ಸೇವೆಯನ್ನು ಸಲ್ಲಿಸಿದ್ದರು. ಶ್ರೀಯುತರು ಸೌಮ್ಯ, ಸರಳ ಹಾಗೂ ಸಜ್ಜನಿಕೆಯ ರಾಜಕಾರಣಿಯಾಗಿ ಜನಸ್ನೇಹಿ ಮತ್ತು ಸಾಮಾಜಿಕ ನ್ಯಾಯಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದರು.

ಶ್ರೀಯುತರು ಚಿತ್ರದುರ್ಗ ಜಿಲ್ಲೆಯಲ್ಲಿ ಬಾಪೂಜಿ ಶಿಕ್ಷಣ ಸಂಸ್ಥೆಯನ್ನು ತೆರೆದು ಚಳ್ಳಕೆರೆ, ಗೋಪನಹಳ್ಳಿ, ಕಲ್ಲಹಳ್ಳಿ, ಕಂಚೀಪುರ, ಚಿತ್ರದುರ್ಗ ಕೆಳಗೋಟೆಗಳಲ್ಲಿ ಪ್ರೌಢಶಾಲೆ ಹಾಗೂ ಕಾಲೇಜುಗಳನ್ನು ಆರಂಭಿಸಿ ಶಿಕ್ಷಣ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆಯನ್ನು ನೀಡಿದ ಕೀರ್ತಿಗೆ ಭಾಜನರಾಗಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

## 6. ಡಾ: ಎಸ್.ಆರ್. ರಾಮಸ್ವಾಮಿ

**ಬರಹಗಾರ, ಪತ್ರಕರ್ತ, ಜೀವನ ಚರಿತ್ರೆಕಾರ, ಸಾಮಾಜಿಕ ಕಾರ್ಯಕರ್ತ ಮತ್ತು ಪರಿಸರವಾದಿ ಡಾ:ಎಸ್.ಆರ್. ರಾಮಸ್ವಾಮಿ ಅವರು ದಿನಾಂಕ 10.04.2026 ರಂದು ನಿಧನ ಹೊಂದಿರುತ್ತಾರೆ.**

1937ರ ಅಕ್ಟೋಬರ್ 29 ರಂದು ಬೆಂಗಳೂರಿನಲ್ಲಿ ಜನಿಸಿದ್ದ ಶ್ರೀಯುತರು ಬೆಂಗಳೂರಿನ ಬಸವನಗುಡಿಯ ನ್ಯಾಷನಲ್ ಕಾಲೇಜಿನಲ್ಲಿ ಮಧ್ಯಂತರ ಶಿಕ್ಷಣವನ್ನು ಪಡೆದಿದ್ದು, ಬೆಂಗಳೂರಿನ ವಿಲಿಯಂ ಕ್ವಾನ್ ಜಡ್ಜ್ ಪ್ರೆಸ್‌ನಲ್ಲಿ ಸಹಾಯಕ ಸಂಪಾದಕರಾಗಿ ಪತ್ರಿಕೋದ್ಯಮದಲ್ಲಿ ತಮ್ಮ ವೃತ್ತಿ ಜೀವನವನ್ನು ಪ್ರಾರಂಭಿಸಿದ್ದರು. 1972-1979 ರವರೆಗೆ ಕನ್ನಡ ವಾರಪತ್ರಿಕೆ ಸುಧಾ ಮುಖ್ಯ ಉಪ ಸಂಪಾದಕರಾಗಿ, 1980 ರಲ್ಲಿ ಬೆಂಗಳೂರಿನಲ್ಲಿ ರಾಷ್ಟ್ರೋತ್ಥಾನ ಸಾಹಿತ್ಯ ಮತ್ತು ಕನ್ನಡ ಮಾಸಿಕ ಉತ್ಥಾನದ ಗೌರವ ಪ್ರಧಾನ ಸಂಪಾದಕರಾಗಿ, ಗೋಖಲೆ ಇನ್ಸ್ಟಿಟ್ಯೂಟ್ ಆಫ್

ಪಬ್ಲಿಕ್ ಅಫೇರ್ಸ್ ಸಂಸ್ಥೆಯ ಕಾರ್ಯದರ್ಶಿಯಾಗಿ ಸೇವೆಯನ್ನು ಸಲ್ಲಿಸಿದ್ದರು. ಶ್ರೀಯುತರು ಸಾಮಾಜಿಕ, ಸಾಂಸ್ಕೃತಿಕ ಮತ್ತು ಸಾಹಿತ್ಯಕ ವಿಷಯಗಳ ಕುರಿತು ದೇಶಾದ್ಯಂತ ವಿಚಾರ ಸಂಕೀರಣಗಳು ಮತ್ತು ಸಮ್ಮೇಳನಗಳಲ್ಲಿ ಸಕ್ರಿಯವಾಗಿ ಉಪನ್ಯಾಸಗಳನ್ನು ನೀಡಿದ ಕೀರ್ತಿಗೆ ಭಾಜನರಾಗಿರುತ್ತಾರೆ.

ಸಂಸ್ಕೃತ, ಹಿಂದಿ, ಜರ್ಮನ್, ಫ್ರೆಂಚ್, ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಪಾರಂಗತರಾಗಿದ್ದ ಶ್ರೀಯುತರು ಕನ್ನಡ ಮತ್ತು ಇಂಗ್ಲೀಷ್ ಎರಡರಲ್ಲೂ 52 ಪುಸ್ತಕಗಳನ್ನು ಮತ್ತು ಸುಮಾರು ಒಂದು ಸಾವಿರ ಲೇಖನಗಳನ್ನು ಬರೆದಿದ್ದರು. ಪ್ರಸಿದ್ಧ ರಷ್ಯಾದ ವರ್ಣಚಿತ್ರಕಾರ ಸ್ವೆಟೋಸ್ಲಾವ್ ರೋರಿಚ್ ಅವರ "ಆರ್ಟ್ ಕ್ಯಾಟಲಾಗ್" ಬರಹಕ್ಕೆ ಪ್ರಾಮುಖ್ಯತೆ ಪಡೆದು ಪ್ರಪಂಚದಾದ್ಯಂತ ವಿವಿಧ ದೇಶಗಳಲ್ಲಿ ವರ್ಣಚಿತ್ರಕಾರರು ಆಯೋಜಿಸಿದ್ದ ಅವರ ಅನೇಕ ವರ್ಣಚಿತ್ರಗಳು ಮತ್ತು ಪ್ರದರ್ಶನಗಳನ್ನು ದಾಖಲಿಸಿದ್ದಾರೆ. ಶ್ರೀಯುತರು ಗಾಂಧಿಯನ್ ಪರಿಸರ ವಿಜ್ಞಾನ ಪರಿಕಲ್ಪನೆ, ನೇತಾಜಿ ಸುಭಾಶ್ ಚಂದ್ರ ಬೋಸ್, ಸರ್ ಮಿರ್ಜಾ ಇಸ್ಮಾಯಿಲ್ ಅವರ ಆಡಳಿತ, ಸ್ವಾತಂತ್ರ್ಯ ಚಳವಳಿಯಲ್ಲಿ ಹುತಾತ್ಮರು ಮುಂತಾದ ವಿಷಯಗಳ ಕುರಿತು 100ಕ್ಕೂ ಹೆಚ್ಚು ಸಂಕೀರಣಗಳು ಮತ್ತು ಕಾರ್ಯಗಾರಗಳಲ್ಲಿ ಪ್ರಬಂಧಗಳನ್ನು ನೀಡಿದ್ದರು.

ಶ್ರೀಯುತರು ಐದು ದಶಕಗಳಿಗೂ ಹೆಚ್ಚು ಕಾಲ ಸಾಹಿತ್ಯ ಮತ್ತು ಪತ್ರಿಕೋದ್ಯಮದಲ್ಲಿ ಸಕ್ರಿಯರಾಗಿದ್ದರು ಮತ್ತು ಸ್ವದೇಶಿ ಚಳವಳಿಯ ಕಟ್ಟಾ ಪ್ರತಿಪಾದಕರಾಗಿ, ಗ್ರಾಮೀಣಾಭಿವೃದ್ಧಿಗಾಗಿ ಸ್ವ-ಆಡಳಿತ ಮತ್ತು ಉತ್ತಮ ಆಡಳಿತಕ್ಕಾಗಿ ಗ್ರಾಮೀಣ ಜನಸಂಖ್ಯೆಯನ್ನು ಸಬಲೀಕರಣಗೊಳಿಸಲು ಕಾರ್ಯತತ್ಪರರಾಗಿದ್ದರು.

ಶ್ರೀಯುತರು ಕೆನರಾ ಬ್ಯಾಂಕ್ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಮಿಥಿಕ್ ಸೊಸೈಟಿ ಶತಮಾನೋತ್ಸವ ಪ್ರಶಸ್ತಿ, ಡಿ.ವಿ.ಜಿ ಪ್ರಶಸ್ತಿ ಮತ್ತು ನಾಡೋಜ ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ಸಾಮಾಜಿಕ ಕಾರ್ಯಕರ್ತರೊಬ್ಬರನ್ನು ಕಳೆದುಕೊಂಡಂತಾಗಿದೆ.

(ಮುಂದು)

(665)13.8.2026/11.40/ಎಂ.ಎಂ-ಎ.ಕೆ (ಸಭಾಪತಿಯವರ ಉಪಸ್ಥಿತಿ)

**7. ಆಶಾ ಬೋಂಸ್ಲೆ**

ಭಾರತೀಯ ಖ್ಯಾತ ಹಿನ್ನೆಲೆ ಗಾಯಕಿ ಮತ್ತು ನಟಿಯಾಗಿದ್ದ ಪದ್ಮವಿಭೂಷಣ ಪುರಸ್ಕøತ ಶ್ರೀಮತಿ ಆಶಾ ಭೋಂಸ್ಲೆ ಅವರು ದಿನಾಂಕ: 12.04.2026ರಂದು ನಿಧನ ಹೊಂದಿರುತ್ತಾರೆ.

1933ರ ಸೆಪ್ಟೆಂಬರ್ 8ರಂದು ಸಾಂಗ್ಲಿ ರಾಜ್ಯದ ಗೋರ್ ಎಂಬ ಸಣ್ಣ ಹಳ್ಳಿಯಲ್ಲಿ ಜನಿಸಿದ್ದ ಶ್ರೀಯುತರು ತಮ್ಮ ಹತ್ತನೇ ವಯಸ್ಸಿನಲ್ಲಿ ಸಂಗೀತ ಪಯಣವನ್ನು ಪ್ರಾರಂಭಿಸಿ, ಭಾವಪೂರ್ಣ ಗಜಲ್‌ಗಳಿಂದ ಹಿಡಿದು, ಶಾಸ್ತ್ರೀಯ

ಗಾಯನ, ಜಾನಪದ, ಕವ್ವಾಲಿ, ಕ್ಯಾಬರೆ ಮತ್ತು ಪಾಪ್ ಗೀತೆಗಳವರೆಗೆ ವಿವಿಧ ಪ್ರಕಾರಗಳಲ್ಲಿ ದಾಖಲೆಯ 12,000ಕ್ಕೂ ಹೆಚ್ಚು ಹಾಡುಗಳಿಗೆ ಧ್ವನಿ ಮುದ್ರಿಸಿದ್ದಾರೆ.

ಶ್ರೀಯುತರು 2013ರಲ್ಲಿ ಮಾಯ್ ಚಿತ್ರದಲ್ಲಿ ನಟಿಯಾಗಿ ಪಾದಾರ್ಪಣೆ ಮಾಡಿದ್ದು, ತಮ್ಮ ಅಭಿನಯಕ್ಕಾಗಿ ವಿಮರ್ಶಾತ್ಮಕ ಮೆಚ್ಚುಗೆಯನ್ನು ಪಡೆದಿದ್ದರು. ಶ್ರೀಯುತರು ಛನ್ ಛಾಮಾ ಛಾಮ್ ಚಿತ್ರದಲ್ಲಿ ನಾಯಕಿಯಾಗಿ ನಟಿಸಿ, 10 ಹಾಡುಗಳನ್ನು ಹಾಡಿದ್ದರು. ಶ್ರೀಯುತರ ಚಲನಚಿತ್ರ ಗೀತೆಗಳು, ಯುಗಳ ಗೀತೆಗಳು ಹಾಗೂ ಗಜಲ್‌ಗಳು, ಹೀಗೆ ಹಲವಾರು ಪ್ರಕಾರಗಳ ಹಾಡುಗಳು ಜನಪ್ರಿಯಗೊಂಡಿದ್ದವು. ಶ್ರೀಯುತರು ಹಿಂದಿ, ಕನ್ನಡ, ಬಂಗಾಳಿ ಹಾಗೂ ಮರಾಠಿ ಹೀಗೆ ಬಹುಭಾಷಾ ಗಾಯಕಿಯಾಗಿದ್ದರು.

ಶ್ರೀಯುತರು ಪದ್ಮವಿಭೂಷಣ ಪ್ರಶಸ್ತಿ, ಏಳು ಬಾರಿ ಫಿಲಂಫೇರ್ ಪ್ರಶಸ್ತಿ, ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ, ಅತ್ಯುತ್ತಮ ಮಹಿಳಾ ಹಿನ್ನೆಲೆ ಗಾಯಕಿ ಪ್ರಶಸ್ತಿ ಹಾಗೂ ಇತರೆ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಷ್ಟ್ರವು ಒಬ್ಬ ಶ್ರೇಷ್ಠ ಚಲನಚಿತ್ರ ಸಂಗೀತ ದಿಗ್ಗಜೆಯೊಬ್ಬರನ್ನು ಕಳೆದುಕೊಂಡಂತಾಗಿದೆ.

**8. ರಾಮಚಂದರ್ ಬೈಕಂಪಾಡಿ**

ಸಾಹಿತಿ, ರಂಗಭೂಮಿ ಹಾಗೂ ಸಿನಿಮಾ ಕಲಾವಿದರು, ಮೀನುಗಾರರ ಮುಖಂಡರು ಹಾಗೂ ಹಿರಿಯ ರಾಜಕಾರಣಿಯಾಗಿದ್ದ ಶ್ರೀ ರಾಮಚಂದರ್ ಬೈಕಂಪಾಡಿ ಅವರು ದಿನಾಂಕ:14.04.2026ರಂದು ನಿಧನ ಹೊಂದಿರುತ್ತಾರೆ.

ಶ್ರೀಯುತರು ವಿದ್ಯಾರ್ಥಿ ದೆಸೆಯಲ್ಲೇ ರಾಷ್ಟ್ರೀಯ ಸ್ವಯಂ ಸೇವಕ ಸಂಘದಲ್ಲಿ ತೊಡಗಿಸಿಕೊಂಡು ಮೊಗವೀರ ಸಮುದಾಯದ ಮುಖಂಡರಾಗಿದ್ದು, ಮೀನುಗಾರರ ಪರ ಹೋರಾಟಗಳಲ್ಲಿ ಹಾಗೂ ಎಂ.ಆರ್.ಪಿ.ಎಲ್ ನಿರ್ವಸಿತರ ಪರ ಹೋರಾಟಗಳಲ್ಲಿ ಸಕ್ರಿಯರಾಗಿ ಭಾಗವಹಿಸಿದ್ದರು.

ಶ್ರೀಯುತರು ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯಲ್ಲಿ ಎರಡು ಅವಧಿಗೆ ಸದಸ್ಯರಾಗಿ ಕಾರ್ಯನಿರ್ವಹಿಸಿ, ರಂಗಭೂಮಿ ಸಾಹಿತಿ ಹಾಗೂ ಸಿನಿಮಾ ಕಲಾವಿದರೂ ಆಗಿದ್ದ ಶ್ರೀಯುತರು ರಾಜ್ಯೋತ್ಸವ ಪ್ರಶಸ್ತಿ ಹಾಗೂ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ವಾರ್ಷಿಕ ಗೌರವ ಪ್ರಶಸ್ತಿಗಳಿಗೆ ಭಾಜನರಾಗಿದ್ದರು. ಶ್ರೀಯುತರ "ಎನ್ನ ಮೋಕೆದಾ" ನಾಟಕ ಜನಪ್ರಿಯವಾಗಿತ್ತು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ಸಾಹಿತಿ ಹಾಗೂ ರಂಗಭೂಮಿ ಕಲಾವಿದರೊಬ್ಬರನ್ನು ಕಳೆದುಕೊಂಡಂತಾಗಿದೆ.

### 9. ಡಾ: ಗಿರೀಶ್ ಭಾರದ್ವಾಜ್

ತೂಗು ಸೇತುವೆಗಳ ಸರದಾರ ಹಾಗೂ ಸಮಾಜ ಸೇವಕರಾಗಿದ್ದ ಪದ್ಮಶ್ರೀ ಪುರಸ್ಕೃತ ಡಾ॥ಗಿರೀಶ್ ಭಾರದ್ವಾಜ್ ಅವರು ದಿನಾಂಕ:07.07.2026ರಂದು ನಿಧನ ಹೊಂದಿರುತ್ತಾರೆ.

1950ರ ಮೇ 2ರಂದು ಸುಳ್ಯ ತಾಲ್ಲೂಕಿನ ಆಲೆಟ್ಟಿ ಗ್ರಾಮದ ಆರಂಬೂರಿನಲ್ಲಿ ಜನಿಸಿದ್ದ ಶ್ರೀಯುತರು ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವೀಧರರಾಗಿದ್ದು, 1989ರಲ್ಲಿ ದಕ್ಷಿಣ ಕನ್ನಡದ ಅರಂಬೂರಿನಲ್ಲಿ 'ಪಯಸ್ವಿನಿ' ನದಿಗೆ ಅಡ್ಡಲಾಗಿ ತಮ್ಮ ಮೊದಲ ನೇತಾಡುವ ಪಾದಚಾರಿ ಸೇತುವೆಯನ್ನು ನಿರ್ಮಿಸಿ, ಕಷ್ಟಕರ ಭೂಪ್ರದೇಶಗಳಿಂದ ಬೇರ್ಪಟ್ಟ ಹಳ್ಳಿಗಳಿಗೆ ಸಂಪರ್ಕವನ್ನು ಸುಧಾರಿಸುವತ್ತ ಶ್ರೀಯುತರು ತಮ್ಮ ವೃತ್ತಿ ಜೀವನವನ್ನು ಆರಂಭಿಸಿ ಗುರುತಿಸಿಕೊಂಡಿದ್ದರು. ಸುಮಾರು 145ಕ್ಕೂ ಹೆಚ್ಚು ತೂಗು ಸೇತುವೆಗಳನ್ನು ವಿನ್ಯಾಸಗೊಳಿಸಿ ನಿರ್ಮಿಸಿದ್ದ ಶ್ರೀಯುತರು ಸೇತು ಬಂಧು ಮತ್ತು ಭಾರತದ ಸೇತುವೆಗಾರ ಎಂಬ ಬಿರುದನ್ನು ತಮ್ಮ ಮುಡಿಗೇರಿಸಿಕೊಂಡಿದ್ದರು. ಗ್ರಾಮೀಣ ಸಂಪರ್ಕಕ್ಕೆ ಶ್ರೀಯುತರ ಕೊಡುಗೆಯನ್ನು ಗುರುತಿಸಿ, ಕೇಂದ್ರ ಸರ್ಕಾರವು ಪದ್ಮಶ್ರೀ ಪ್ರಶಸ್ತಿ, ರಾಜ್ಯ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ ಹಾಗೂ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ತೂಗು ಸೇತುವೆಗಳ ಸರದಾರರೊಬ್ಬರನ್ನು ಕಳೆದುಕೊಂಡಂತಾಗಿದೆ.

### 10. ಡಾ: ಎಸ್. ಜಾನಕಿ

ಸಂಗೀತ ಲೋಕದ ಸ್ವರ ಸಾಮ್ರಾಜ್ಞಿ ಮತ್ತು ಹಿನ್ನೆಲೆ ಗಾಯಕಿಯಾಗಿದ್ದ ಡಾ: ಎಸ್. ಜಾನಕಿ ಅವರು ದಿನಾಂಕ:11.07.2026ರಂದು ನಿಧನ ಹೊಂದಿರುತ್ತಾರೆ.

1938ರ ಏಪ್ರಿಲ್ 23ರಂದು ಆಂಧ್ರ ಪ್ರದೇಶದ ಗುಂಟೂರು ಜಿಲ್ಲೆಯ ರೆಪಲ್ಲೇ ಎಂಬ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ತಮ್ಮ ಮೂರನೆಯ ವಯಸ್ಸಿನಲ್ಲಿ ಸಂಗೀತಾಭ್ಯಾಸವನ್ನು ಪ್ರಾರಂಭಿಸಿ, 1956ರಲ್ಲಿ ಆಕಾಶವಾಣಿ ನಡೆಸಿದ ಸಂಗೀತ ಸ್ಪರ್ಧೆಯಲ್ಲಿ ವಿಜೇತರಾಗಿ ರಾಷ್ಟ್ರಪತಿಗಳಾದ ಡಾ:ರಾಜೇಂದ್ರ ಪ್ರಸಾದ್ ಅವರಿಂದ ಬಹುಮಾನ ಸ್ವೀಕರಿಸಿದ್ದರು. ಶ್ರೀಯುತರು ಜಾನಕಿ ಅಮ್ಮ ಮತ್ತು ದಕ್ಷಿಣ ಭಾರತದ ನೈಟಿಂಗೇಲ್ ಎಂದು ವ್ಯಾಪಕವಾಗಿ ಪ್ರಸಿದ್ಧರಾಗಿದ್ದರು ಹಾಗೂ ಭಾರತೀಯ ಸಂಗೀತ ಇತಿಹಾಸದಲ್ಲಿ ಶ್ರೇಷ್ಠ ಮತ್ತು ಅತ್ಯಂತ ಪ್ರಭಾವಶಾಲಿ ಗಾಯಕಿಯರಲ್ಲಿ ಒಬ್ಬರೆಂದು ಪರಿಗಣಿಸಲ್ಪಟ್ಟಿದ್ದರು.

ಶ್ರೀಯುತರು ಚಲನಚಿತ್ರಗಳು, ಆಲ್ಬಮ್‌ಗಳು, ದೂರದರ್ಶನ ಮತ್ತು ರೇಡಿಯೋಗಳಲ್ಲಿ 48,000ಕ್ಕೂ ಹೆಚ್ಚು ಹಾಡುಗಳನ್ನು ರೆಕಾರ್ಡ್ ಮಾಡಿದ್ದು, ಇದರಲ್ಲಿ 20ಕ್ಕೂ ಹೆಚ್ಚು ಭಾರತೀಯ ಭಾಷೆಗಳಲ್ಲಿ ಕನ್ನಡ, ತಮಿಳು, ತೆಲುಗು, ಮಲಯಾಳಂ, ಒಡಿಯಾ, ಹಿಂದಿ, ಸಿಂಹಳ, ತುಳು, ಬಡಗ, ಬಂಗಾಳಿ, ಉರ್ದು, ಪಂಜಾಬಿ, ಕೊಂಕಣಿ, ಮರಾಠಿ, ಸಿಂಧಿ ಮತ್ತು ಕೆಲವು ವಿದೇಶಿ ಭಾಷೆಗಳಾದ ಜಪಾನಿ, ಲ್ಯಾಟಿನ್, ಅರೇಬಿಕ್‌ಗಳಲ್ಲಿ ಏಕವ್ಯಕ್ತಿ, ಯುಗಳ ಗೀತೆಗಳು,

ಕೋರಸ್ ಮತ್ತು ಶೀರ್ಷಿಕೆ ಗೀತೆಗಳು ಸೇರಿದ್ದು, ಕನ್ನಡದಲ್ಲಿ ಅತಿ ಹೆಚ್ಚು ಹಾಡುಗಳನ್ನು ಹಾಡಿದ ಶ್ರೀಯುತರು "ಅಭಿವ್ಯಕ್ತಿ ಮತ್ತು ಸಮನ್ವಯತೆಯ ರಾಣಿ" ಎಂದು ವ್ಯಾಪಕವಾಗಿ ಮೆಚ್ಚುಗೆಯನ್ನು ಪಡೆದಿದ್ದರು.

ಶ್ರೀಯುತರು ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿ, ರಾಜ್ಯೋತ್ಸವ ಪ್ರಶಸ್ತಿ ಹಾಗೂ ಹತ್ತು ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

ಶ್ರೀಯುತರ ನಿಧನದಿಂದಾಗಿ ರಾಷ್ಟ್ರವು ಶ್ರೇಷ್ಠ ಹಿನ್ನೆಲೆ ಗಾಯಕಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

## 11. ಸಿ.ಎನ್. ಮುಕ್ತಾ

ಹಿರಿಯ ಲೇಖಕಿಯಾದ ಶ್ರೀಮತಿ ಸಿ.ಎನ್. ಮುಕ್ತಾ ಅವರು ದಿನಾಂಕ:10.07.2026ರಂದು ನಿಧನ ಹೊಂದಿರುತ್ತಾರೆ.

1951ರ ಏಪ್ರಿಲ್ 30ರಂದು ಚಿತ್ರದುರ್ಗದಲ್ಲಿ ಜನಿಸಿದ್ದ ಶ್ರೀಯುತರು ಬಿ.ಎ., ಮತ್ತು ಬಿ.ಎಡ್., ಪದವೀಧರರಾಗಿದ್ದು, ವೃತ್ತಿಯಲ್ಲಿ ಶಿಕ್ಷಕಿಯಾಗಿದ್ದರೂ ಕಥೆ, ಕಾದಂಬರಿ ಬರಹಗಳಲ್ಲಿ ಆಸಕ್ತಿ ಹೊಂದಿದ್ದರು. ಶ್ರೀಯುತರು ಪ್ರೌಢಶಾಲಾ ಉಪಾಧ್ಯಾಯಿನಿಯಾಗಿ, ಮುಖ್ಯೋಪಾಧ್ಯಾಯಿನಿಯಾಗಿ ಸೇವೆಯನ್ನು ಸಲ್ಲಿಸಿದ್ದರು.

ಶ್ರೀಯುತರ ಮೊದಲ ಕಾದಂಬರಿ "ಆಶ್ರಯ" ಪ್ರಜಾಮತ ಪತ್ರಿಕೆಯಲ್ಲಿ ಹಾಗೂ ಹಲವಾರು ಕಥೆಗಳು ಮಲ್ಲಿಗೆ, ಸುಧಾ ವಾರಪತ್ರಿಕೆಗಳಲ್ಲಿ ಪ್ರಕಟಗೊಂಡಿತು. ಶ್ರೀಯುತರ ಸುಖದ ಸೋಪಾನ, ಕ್ಷಮಯಾ ಧರಿತ್ರಿ, ದಡ ಸೇರಿದ ನೌಕೆ, ಜೀವನಚಕ್ರ, ಅಮೃತಮಯಿ, ವಿಮುಕ್ತಿ ಪ್ರಸಿದ್ಧ ಕಾದಂಬರಿಗಳು ಪ್ರಮುಖ ವಾರಪತ್ರಿಕೆಗಳಲ್ಲಿ ಧಾರವಾಹಿಯಾಗಿ ಪ್ರಕಟಗೊಂಡಿದ್ದವು. ಶ್ರೀಯುತರ 75ಕ್ಕೂ ಅಧಿಕ ಕಾದಂಬರಿ ಹಾಗೂ 15ಕ್ಕೂ ಅಧಿಕ ಕಥಾಸಂಕಲನಗಳು ಪ್ರಕಟವಾಗಿವೆ.

ಸಾಹಿತ್ಯದ ಎಲ್ಲಾ ಪ್ರಕಾರಗಳ ಬರವಣಿಗೆಯಲ್ಲಿಯೂ ತೊಡಗಿಸಿಕೊಂಡಿದ್ದ ಶ್ರೀಯುತರು ಆರ್ಯಭಟ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿ, ತ್ರಿವೇಣಿ ಪ್ರಶಸ್ತಿ ಹಾಗೂ ರಾಜ್ಯೋತ್ಸವ ಪ್ರಶಸ್ತಿಗಳಿಗೆ ಭಾಜನರಾಗಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ಲೇಖಕಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

## 12. ಪ್ರೊ. ಎ.ವಿ. ನರಸಿಂಹಮೂರ್ತಿ

ಪುರಾತತ್ವಶಾಸ್ತ್ರಜ್ಞರು ಮತ್ತು ನಾಣ್ಯಶಾಸ್ತ್ರ ತಜ್ಞರಾದ ಪ್ರೊ. ಎ.ವಿ. ನರಸಿಂಹಮೂರ್ತಿ ಅವರು ದಿನಾಂಕ:09.08.2026ರಂದು ನಿಧನ ಹೊಂದಿರುತ್ತಾರೆ.

1935ರ ಮೇ 15ರಂದು ಮೈಸೂರಿನಲ್ಲಿ ಜನಿಸಿದ್ದ ಶ್ರೀಯುತರು ವೃತ್ತಿಯಲ್ಲಿ ಪ್ರಾಧ್ಯಾಪಕರಾಗಿದ್ದರು. ಶೈಕ್ಷಣಿಕ ವಲಯದಲ್ಲಿ ಎ.ವಿ.ಎನ್ ಎಂದೇ ಖ್ಯಾತರಾಗಿದ್ದ ಶ್ರೀಯುತರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದ ಪ್ರಾಧ್ಯಾಪಕರಾಗಿ ಹಾಗೂ ಮುಖ್ಯಸ್ಥರಾಗಿ ಮತ್ತು ಮೈಸೂರಿನ ಭಾರತೀಯ

ವಿದ್ಯಾಭವನದ ಅಧ್ಯಕ್ಷರಾಗಿ ದೀರ್ಘಕಾಲ ಸೇವೆಯನ್ನು ಸಲ್ಲಿಸಿದ್ದರು. ಶ್ರೀಯುತರು ಕರ್ನಾಟಕ ನಾಣ್ಯಶಾಸ್ತ್ರದಲ್ಲಿ ಅಧ್ಯಯನ ಸೇರಿದಂತೆ ಪ್ರಾಚೀನ ಭಾರತೀಯ ನಾಣ್ಯಗಳು ಮತ್ತು ಇತಿಹಾಸದ ಕುರಿತು ಹಲವಾರು ಗ್ರಂಥಗಳನ್ನು ರಚಿಸಿ, ಕರ್ನಾಟಕ ಹಾಗೂ ಭಾರತದ ಇತಿಹಾಸವನ್ನು ವೈಜ್ಞಾನಿಕವಾಗಿ ಮತ್ತು ಆಳವಾಗಿ ದಾಖಲಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಶ್ರೀಯುತರು ಭಾರತೀಯ ನಾಣ್ಯಶಾಸ್ತ್ರಕ್ಕೆ ಮೌಲ್ಯಯುತ ಕೊಡುಗೆಗಳನ್ನು ನೀಡಿ, ನಾಣ್ಯಶಾಸ್ತ್ರ ಸೊಸೈಟಿ ಆಫ್ ಇಂಡಿಯಾದ ಬೆಳ್ಳಿ ಪದಕ ಹಾಗೂ ಪ್ರತಿಷ್ಠಿತ ರಾಷ್ಟ್ರಕವಿ ಗೋವಿಂದ ಪೈ ಪ್ರಶಸ್ತಿ, ಪುರಾತತ್ವ ರತ್ನ ಪ್ರಶಸ್ತಿ ಹಾಗೂ ರಾಜ್ಯೋತ್ಸವ ಪ್ರಶಸ್ತಿಗಳಿಗೆ ಭಾಜನರಾಗಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಷ್ಟ್ರವು ಹಿರಿಯ ನಾಣ್ಯಶಾಸ್ತ್ರ ತಜ್ಞರೊಬ್ಬರನ್ನು ಕಳೆದುಕೊಂಡಂತಾಗಿದೆ.

## 13. ಚೆನ್ನಮ್ಮ

ಸರಳತೆಯ ಸಾಕಾರಮೂರ್ತಿ ಹಾಗೂ ಅನ್ನಪೂರ್ಣೇಶ್ವರಿಯಾಗಿದ್ದ ಶ್ರೀಮತಿ ಚೆನ್ನಮ್ಮ ಅವರು ದಿನಾಂಕ:18.07.2026ರಂದು ನಿಧನ ಹೊಂದಿರುತ್ತಾರೆ.

1937ರಲ್ಲಿ ಹಾಸನ ತಾಲ್ಲೂಕಿನ ಮುತ್ತಿಗೆ ಹಿರೇಹಳ್ಳಿಯಲ್ಲಿ ಪಟೇಲ್ ದೇವೇಗೌಡ ಹಾಗೂ ಕಾಳಮ್ಮ ದಂಪತಿಗೆ ಜನಿಸಿದ ಶ್ರೀಯುತರು ಸ್ವಾತಂತ್ರ್ಯ ಪೂರ್ವದಲ್ಲಿಯೇ ತಮ್ಮ ಹುಟ್ಟೂರಿನಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮತ್ತು ಹೊಳೆನರಸೀಪುರ ತಾಲ್ಲೂಕಿನ ಹಳೆಕೋಟೆಯಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಪೂರೈಸಿದ್ದರು.

ಶ್ರೀಯುತರು ಶ್ರೀ ಹೆಚ್.ಡಿ. ದೇವೇಗೌಡರೊಂದಿಗೆ ವೈವಾಹಿಕ ಜೀವನಕ್ಕೆ ಕಾಲಿಟ್ಟ ದಿನದಿಂದಲೂ ಪತಿಯ ರಾಜಕೀಯ ಬೆಳವಣಿಗೆಗೆ ಬೆನ್ನೆಲುಬಾಗಿ ನಿಂತು, ಹುರಿದುಂಬಿಸುವ ಶಕ್ತಿಯಾಗಿದ್ದರು. ಶ್ರೀಯುತರಿಗೆ ಇಬ್ಬರು ಪುತ್ರಿಯರು ಹಾಗೂ ನಾಲ್ಕು ಪುತ್ರರಲ್ಲಿ ಎರಡನೇ ಮಗನಾದ ಶ್ರೀ ಹೆಚ್.ಡಿ. ರೇವಣ್ಣನವರು ವಿಧಾನ ಸಭೆಯ ಸದಸ್ಯರಾಗಿ ಹಾಗೂ ಮಾಜಿ ಸಚಿವರಾಗಿದ್ದಾರೆ ಮತ್ತು ಮೂರನೇ ಮಗನಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿರವರು ರಾಜ್ಯದ ಮಾಜಿ ಮುಖ್ಯಮಂತ್ರಿಗಳಾಗಿ ಕಾರ್ಯನಿರ್ವಹಿಸಿದ್ದು, ಪ್ರಸ್ತುತ ಕೇಂದ್ರ ಸಚಿವರಾಗಿರುತ್ತಾರೆ.

ಪರಮ ದೈವಭಕ್ತರಾಗಿದ್ದ ಶ್ರೀಯುತರು ಪತಿ ಶ್ರೀ ಹೆಚ್.ಡಿ. ದೇವೇಗೌಡರೊಡನೆ ಸುದೀರ್ಘ ಹಾಗೂ ಮಾದರಿ ದಾಂಪತ್ಯ ಜೀವನವನ್ನು ಪೂರೈಸಿದ್ದರು.

ಮಾಜಿ ಪ್ರಧಾನಿಗಳಾದ ಶ್ರೀ ದೇವೇಗೌಡರ ಮನೆಗೆ ಬರುವ ಅತಿಥಿಗಳಿಗೆ ಊಟೋಪಚಾರ ಮಾಡುತ್ತಿದ್ದರಿಂದ, ಶ್ರೀಯುತರನ್ನು "ಅನ್ನಪೂರ್ಣೆ" ಎಂದು ಕರೆಯುತ್ತಿದ್ದರು. ಭಾರತೀಯ ನಾರಿ ಸಂಸ್ಕೃತಿಯ ಸಭ್ಯತೆಯ ಗೆರೆ ದಾಟದೆ ಬದುಕಿದ ಚೆನ್ನಮ್ಮ ಅವರು ಆದರ್ಶಪ್ರಾಯವಾಗಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ಸರಳತೆಯ ಸಾಕಾರ ಮೂರ್ತಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

(ಮುಂದು)

(666) 13-08-2026 11-50 KH/AK (ಸಭಾಪತಿಯವರ ಉಪಸ್ಥಿತಿ)

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶಿವಮೊಗ್ಗ ಜಿಲ್ಲೆಯ, ಶಿವಮೊಗ್ಗ ತಾಲ್ಲೂಕಿನ ಮಾಜಿ ಶಾಸಕರಾದ ಚಂದ್ರಶೇಖರ್‌ರವರು ನಿಧನರಾಗಿದ್ದು, ಅವರ ಬಗ್ಗೆ ಸಂತಾಪ ಸೂಚನೆಯಲ್ಲಿ ಪ್ರಸ್ತಾಪವಾಗಿಲ್ಲ.

**ಸಭಾಪತಿಯವರು:-** ಮಾನ್ಯ ಬಲ್ಕೀಸ್ ಬಾನುರವರೇ, ಕುಳಿತುಕೊಳ್ಳಿ. ಮಾನ್ಯ ಸಭಾನಾಯಕರೇ ಮಾತನಾಡಿ.

**ಶ್ರೀಮತಿ ಬಲ್ಕೀಸ್ ಬಾನು:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಬಲ್ಕೀಸ್ ಬಾನುರವರೇ, ಮಾಜಿ ಶಾಸಕರ ಹೆಸರು ಬಿಟ್ಟು ಹೋಗಿದ್ದರೆ ಸೇರಿಸೋಣ ಬಿಡಿ.

**ಡಾ॥ ಯತೀಂದ್ರ ಎಸ್. (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ತಾವು ಸಂತಾಪ ಸೂಚನೆಗಳನ್ನು ಮಂಡಿಸಿದ್ದೀರಿ. ಅದಕ್ಕೆ ನಾನು ಅನುಮೋದನೆಯನ್ನು ನೀಡುತ್ತಿದ್ದೇನೆ. ಮೊದಲ ಬಾರಿಗೆ ವಿಧಾನ ಪರಿಷತ್ತಿನ ಸಭಾನಾಯಕನಾಗಿ ನೇಮಿಸಿರುವಂತಹ ಮಾನ್ಯ ಮುಖ್ಯಮಂತ್ರಿಯವರಿಗೆ ಮತ್ತು ಮಾನ್ಯ ಉಪ ಮುಖ್ಯಮಂತ್ರಿಯವರಿಗೆ ಹಾಗೂ ಸರ್ಕಾರಕ್ಕೆ ಧನ್ಯವಾದಗಳನ್ನು ತಿಳಿಸುತ್ತಿದ್ದೇನೆ. ಮೊದಲ ಬಾರಿಗೆ ಮಂತ್ರಿ ಹಾಗೂ ವಿಧಾನ ಪರಿಷತ್ತಿನ ಸಭಾನಾಯಕರಾಗಿರುವುದರಿಂದ ಹಾಗೂ ಹೆಚ್ಚು ಅನುಭವ ಇಲ್ಲದೆ ಇರುವುದರಿಂದ, ತಪ್ಪುಗಳಾದರೂ ಕೂಡ ನಮ್ಮ ಆಡಳಿತ ಪಕ್ಷದ ಮತ್ತು ವಿರೋಧ ಪಕ್ಷದ ಎಲ್ಲಾ ಸದಸ್ಯರುಗಳು ಮತ್ತು ವಿರೋಧ ಪಕ್ಷದ ನಾಯಕರು ಸಹಕಾರ ಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತಾ ಈ ಸಂತಾಪ ಸೂಚನೆಗಳನ್ನು ಮಂಡಿಸುತ್ತಿದ್ದೇನೆ.

ಮಾನ್ಯ ಡಿ. ಸುಧಾಕರ್‌ರವರು ಕಾಂಗ್ರೇಸ್ ಪಕ್ಷದ ಹಿರಿಯ ಮುಖಂಡರು, ಹಾಲಿ ವಿಧಾನಸಭೆಯ ಶಾಸಕರು ಹಾಗೂ ಪ್ರಸ್ತುತ ಸರ್ಕಾರದಲ್ಲಿ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರಾಗಿದ್ದಂತಹವರು. ಇವರು 4 ಬಾರಿ ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನಿಂದ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಇವರು ಜೈನ ಸಮುದಾಯಕ್ಕೆ ಸೇರಿದವರು. ಹಿರಿಯೂರಿನಲ್ಲಿ ಜೈನ ಸಮುದಾಯದ ಜನಸಂಖ್ಯೆ ಬಹಳ ಕಡಿಮೆ ಇದ್ದರೂ ಕೂಡ ವಿಧಾನಸಭಾ ಕ್ಷೇತ್ರದ ಜನರು ಅವರನ್ನು 4 ಬಾರಿ ಶಾಸಕರಾಗಿ ಆಯ್ಕೆ ಮಾಡಿದ್ದಾರೆ. ಹಾಗಾಗಿ ಇವರ ಸಮುದಾಯದ

ಜನಸಂಖ್ಯೆ ಕಡಿಮೆ ಇದ್ದರೂ ಕೂಡ ವಿಧಾನಸಭಾ ಕ್ಷೇತ್ರದಲ್ಲಿ ಇರುವಂತಹ ಎಲ್ಲಾ ಸಮುದಾಯದ ಪ್ರೀತಿ, ವಿಶ್ವಾಸವನ್ನು ಗಳಿಸಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಇವರು ಸಹಕಾರ ಕ್ಷೇತ್ರದಲ್ಲಿಯೂ ತುಂಬಾ ಕ್ರಿಯಾಶೀಲರಾಗಿದ್ದರು. ಬಹಳಷ್ಟು ರೈತರಿಗೆ ಬಡ್ಡಿ ರಹಿತ ಸಾಲವನ್ನು ಕೊಟ್ಟು ಅವರ ಬದುಕನ್ನು ಹಸನಾಗಿಸಿದ್ದರು. ಚಿತ್ರದುರ್ಗ ಭಾಗದ ವಿ.ವಿ.ಸಾಗರ ಮತ್ತು ಗಾಯತ್ರಿ ಜಲಾಶಯದಿಂದ ತಾಲ್ಲೂಕಿನ 112 ಹಳ್ಳಿಗಳಿಗೆ ಕುಡಿಯುವ ನೀರು ಪೂರೈಸುವ ಕಾಮಗಾರಿಯನ್ನು ಕೈಗೊಂಡು ಅಲ್ಲಿನ ಜನರ ಬದುಕಿಗೆ ಬೆಳಕನ್ನು ತಂದುಕೊಟ್ಟಿದ್ದರು ಮತ್ತು ಭದ್ರಾ ಮೇಲ್ದಂಡೆ ಯೋಜನೆಯು ಕೂಡ ಅವರ ಮಹತ್ವಾಕಾಂಕ್ಷೆ ಯೋಜನೆಯಾಗಿತ್ತು. ಆ ಯೋಜನೆಯನ್ನು ಜಾರಿಗೆ ತರಬೇಕೆಂದು ಬಹಳಷ್ಟು ಶ್ರಮಿಸಿದ್ದರು. ಸಹಕಾರ ಕ್ಷೇತ್ರದಲ್ಲಿ ಬಹಳಷ್ಟು ಸಾಧನೆ ಮಾಡಿದ್ದರಿಂದ, 2024ನೇ ಸಾಲಿನಲ್ಲಿ ಇವರು 'ಸಹಕಾರ ರತ್ನ ಪ್ರಶಸ್ತಿ'ಯನ್ನು ಪಡೆದಿದ್ದರು. ಆದರೆ, ದುರಾದೃಷ್ಟವಶಾತ್ ಇವರು 3 ತಿಂಗಳ ಹಿಂದೆ ಶ್ವಾಸಕೋಶದ ಸೋಂಕು ರೋಗದಿಂದ ನಿಧನರಾಗಿದ್ದಾರೆ. ಇವರ ನಿಧನದಿಂದ ನಮ್ಮ ಪಕ್ಷಕ್ಕೆ ಮತ್ತು ಸರ್ಕಾರಕ್ಕೆ ಬಹಳಷ್ಟು ನಷ್ಟವಾಗಿದೆ. ಇವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತಿದ್ದೇನೆ.

ನಮ್ಮ ಪಕ್ಷದ ಮತ್ತೊರ್ವ ಹಿರಿಯ ಮುಖಂಡರಾದ ವೆಂಕಟರಮಣಪ್ಪನವರು ಪಾವಗಡ ತಾಲ್ಲೂಕಿನವರು. ಇವರು ಹೆಚ್ಚು ಓದಿರಲಿಲ್ಲ. ಎಸ್.ಎಸ್.ಎಲ್.ಸಿ.ವರೆಗೂ ವ್ಯಾಸಂಗ ಮಾಡಿದ್ದರು. ವೃತ್ತಿಯಲ್ಲಿ ರೈತರಾಗಿದ್ದರು. ಹೆಚ್ಚು ಓದಿಲ್ಲದಿದ್ದರೂ ಕೂಡ ತಮ್ಮ ಪರಿಶ್ರಮದಿಂದ ಮತ್ತು ಸಹಜವಾದ ಬುದ್ಧಿಮತ್ತೆಯಿಂದ ಹಂತ-ಹಂತವಾಗಿ ರಾಜಕೀಯದಲ್ಲಿ ಬೆಳೆದು ಒಂದು ದೊಡ್ಡ ಸ್ಥಾನವನ್ನು ಪಡೆದಿದ್ದರು. ಅವರು ಗ್ರಾಮ ಪಂಚಾಯಿತಿ ಸದಸ್ಯರಾಗಿ ಪ್ರಾರಂಭ ಮಾಡಿ, ಹಂತ ಹಂತವಾಗಿ ಬೆಳೆದು 4 ಬಾರಿ ಶಾಸಕರಾಗಿ, ನಂತರ ಸಚಿವರು ಕೂಡ ಆಗಿದ್ದರು. ಅವರ ವ್ಯಕ್ತಿತ್ವ, ಸರಳತೆ ಮತ್ತು ಸಜ್ಜನಿಕೆಯಿಂದ ಕೂಡಿತ್ತು. ನಮ್ಮ ತಂದೆಯವರಿಗೂ ಕೂಡ ಬಹಳ ಆತ್ಮೀಯರಾಗಿದ್ದರು. ನಮ್ಮ ತಂದೆಯವರಾದ ಸಿದ್ದರಾಮಯ್ಯನವರ ಎಲ್ಲಾ ನಿರ್ಣಾಯಕ ರಾಜಕೀಯ ಕಾಲಘಟ್ಟಗಳಲ್ಲಿ ಅವರು ಸಂಪೂರ್ಣವಾದ ಬೆಂಬಲವನ್ನು ಕೊಟ್ಟಿದ್ದರು. ನಾನು 2016ರಲ್ಲಿ ರಾಜಕೀಯಕ್ಕೆ ಅನಿರೀಕ್ಷಿತವಾಗಿ ಪ್ರವೇಶ ಮಾಡಿದಾಗ ಇವರು ಸಿಕ್ಕಿದಾಗಲೆಲ್ಲಾ ನನಗೆ ಪ್ರೋತ್ಸಾಹ ಕೊಡುತ್ತಿದ್ದರು. ಜನರಿಗೆ ಒಳ್ಳೆಯ ಕೆಲಸ ಮಾಡಬೇಕಪ್ಪಾ ಎಂದು ನನಗೆ ಬೆನ್ನು ತಟ್ಟುತ್ತಿದ್ದರು. ಅವರ ಒಂದು ಆಶೀರ್ವಾದವನ್ನು ನಾನು ಯಾವತ್ತೂ ಮರೆಯುವುದಕ್ಕೆ ಆಗುವುದಿಲ್ಲ. ಪಾವಗಡ ಒಣ ಪ್ರದೇಶದಲ್ಲಿ ನೀರಿನ ಸಮಸ್ಯೆ ಬಹಳ ಇದೆ. ಅಂತಹ ಪ್ರದೇಶದಲ್ಲಿ ಇವರು ನಾಗಲಮಡಿಕೆ ಉತ್ತರ ಪಿನಾಕಿನಿ ನದಿಗೆ ಅಡ್ಡಲಾಗಿ ಚೆಕ್‌ಡ್ಯಾಂ ಕಟ್ಟಿಸಿ, ಅಲ್ಲಿನ ರೈತರಿಗೆ ನೀರನ್ನು ತಂದಿರುವಂತಹ 'ಭಗೀರಥ' ಎಂದು ಹೆಸರನ್ನು ಪಡೆದುಕೊಂಡಿದ್ದರು. ತುಮಕೂರು-ರಾಯದುರ್ಗ ರೈಲು ಯೋಜನೆಯನ್ನು ಜಾರಿಗೆ ತರುವುದಕ್ಕೆ ಪ್ರಮುಖ ಪಾತ್ರ ವಹಿಸಿದ್ದರು. ಪಾವಗಡದಲ್ಲಿ ಎಲ್ಲರಿಗೂ ಗೊತ್ತಿರುವ ಹಾಗೆ ವಿಶ್ವದ ಅತಿದೊಡ್ಡ ಶಕ್ತಿ ಸ್ಥಳ

ಸೌರ ವಿದ್ಯುತ್ ಪಾರ್ಕ್ ಇದ್ದು, ಸೌರ ವಿದ್ಯುತ್ ಪಾರ್ಕ್ ಅನ್ನು ನಿರ್ಮಾಣ ಮಾಡುವುದರಲ್ಲಿಯೂ ಕೂಡ ಇವರ ಕೊಡುಗೆ ಇತ್ತು. ಸರಳತೆಗೆ ಹೆಸರಾಗಿದಂತಹ ಇವರು ಇವತ್ತು ನಮ್ಮನ್ನೆಲ್ಲಾ ಅಗಲಿದ್ದಾರೆ. ಅವರ ನಿಧನದಿಂದಾಗಿ ನಮ್ಮ ಪಕ್ಷಕ್ಕೆ ಮತ್ತು ಸರ್ಕಾರಕ್ಕೆ ದೊಡ್ಡ ನಷ್ಟವಾಗಿದೆ. ಹಾಗಾಗಿ, ಅವರ ಆತ್ಮಕ್ಕೆ ಶಾಂತಿ ಕೋರುತ್ತಿದ್ದೇನೆ.

ಮತ್ತೊರ್ವ ವಿಧಾನ ಪರಿಷತ್ತಿನ ಹಿರಿಯ ಸದಸ್ಯರಾದ ರಾಮಚಂದ್ರಗೌಡರವರು ಬಿ.ಜೆ.ಪಿ. ಪಕ್ಷಕ್ಕೆ ಸೇರಿದಂತಹವರಾಗಿದ್ದರು. ಆರ್.ಎಸ್.ಎಸ್.ನ ವಿಚಾರಧಾರೆಯಿಂದ ಪ್ರಭಾವಿತರಾಗಿ ಜನಸಂಘದ ಸದಸ್ಯರಾಗಿ, ನಂತರ ಪದವೀಧರರ ಕ್ಷೇತ್ರದಿಂದ ಆಯ್ಕೆಯಾಗಿ ವಿಧಾನ ಪರಿಷತ್ತಿನ ಸದಸ್ಯರಾದರು. ಬೆಂಗಳೂರು ನಗರದ ಮೊದಲನೇ ಬಿ.ಜೆ.ಪಿ. ಅಧ್ಯಕ್ಷರಾಗಿದ್ದರು. ಬಿ.ಜೆ.ಪಿ. ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿಯಾಗಿದ್ದರು. ನಮ್ಮದೇ ಮನೆಯ ಸದಸ್ಯರಾಗಿ, ಸಚಿವರಾಗಿದ್ದಂತಹವರು. ಅವರ ಆತ್ಮಕ್ಕೂ ಕೂಡ ಶಾಂತಿಯನ್ನು ಕೋರುತ್ತಿದ್ದೇನೆ.

ಮತ್ತೊರ್ವ ಹಿರಿಯ ಮುಖಂಡರಾದ ಸಿ.ವೀರಣ್ಣರವರು ವಿಧಾನಸಭೆಯ ಮಾಜಿ ಉಪ ಸಭಾಧ್ಯಕ್ಷರು ಆಗಿದ್ದರು. ಜನತಾ ಪಕ್ಷದ ಶಾಸಕರಾಗಿ ಮಾನ್ಯ ರಾಮಕೃಷ್ಣ ಹೆಗಡೆ ಹಾಗೂ ಮಾನ್ಯ ಎಸ್.ಆರ್. ಬೊಮ್ಮಾಯಿಯವರ ಸಂಪುಟಗಳಲ್ಲಿ ಸಚಿವರಾಗಿ ಕೆಲಸ ಮಾಡಿದಂತಹವರು. ವಾಲ್ಮೀಕಿ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕೆಂದು, ಆ ಸಮುದಾಯದ ಹಕ್ಕುಗಳಿಗೋಸ್ಕರ ಹೋರಾಟ ಮಾಡಿದಂತಹವರು. ಇವರಿಗೆ 2016 ರಲ್ಲಿ 'ಮಹರ್ಷಿ ವಾಲ್ಮೀಕಿ ಪ್ರಶಸ್ತಿ' ಯನ್ನು ನೀಡಲಾಗಿತ್ತು.

ಮತ್ತೊರ್ವ ಮುಖಂಡರಾದ ಎಚ್.ಹನುಮಂತಪ್ಪರವರು 3 ಬಾರಿ ರಾಜ್ಯ ಸಭಾ ಸದಸ್ಯರಾಗಿದ್ದಂತಹವರು. ಎಸ್.ಸಿ/ಎಸ್.ಟಿ ಆಯೋಗದ ಮೂಲಕ ಅವರು ದಲಿತರು ಹಾಗೂ ಗಿರಿಜನರ ಹಕ್ಕುಗಳ ರಕ್ಷಣೆಗೋಸ್ಕರ ಹೋರಾಟ ಮಾಡಿದ್ದರು. ದಲಿತರ ದೌರ್ಜನ್ಯಗೋಸ್ಕರ ಕಾನೂನಾತ್ಮಕವಾಗಿ ಹೋರಾಟ ಮಾಡಿದ್ದರು. ಯಾವಾಗಲೂ ದಲಿತರು, ಹಿಂದುಳಿದ ವರ್ಗಗಳ ಪರವಾಗಿ ಧ್ವನಿ ಎತ್ತಿ ಕೆಲಸ ಮಾಡಿದ್ದರು. ಶಿಕ್ಷಣ ಕ್ಷೇತ್ರದಲ್ಲಿಯೂ ಕೂಡ ಸಾಧನೆ ಮಾಡಿದ್ದರು. ಬಾಪೂಜಿ ಶಿಕ್ಷಣ ಸಂಸ್ಥೆಯ ಮೂಲಕ ಹಲವಾರು ಪ್ರೌಢಶಾಲೆ ಹಾಗೂ ಕಾಲೇಜುಗಳನ್ನು ಪ್ರಾರಂಭ ಮಾಡಿ, ಹಲವಾರು ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಟ್ಟಂತವರು.

ಮತ್ತೊರ್ವ ಹಿರಿಯರಾದ ಡಾ॥ ಎಸ್. ಜಾನಕಿಯವರು ನಮ್ಮ ದಕ್ಷಿಣ ಭಾರತದ 'ನೈಟಿಂಗೇಲ್' ಎಂದು ಹೆಸರು ಪಡೆದವರು. ಇವರು ದಕ್ಷಿಣ ಭಾರತದವರಾಗಿದ್ದರೂ ಕೂಡ ಬಹುತೇಕ ಎಲ್ಲಾ ಭಾಷೆಗಳಲ್ಲಿ ಹಾಡುಗಳನ್ನು ಹಾಡಿದ್ದರು. ಸುಮಾರು 48,000 ಕ್ಕೂ ಹೆಚ್ಚು ಹಾಡುಗಳನ್ನು ಹಾಡಿದ್ದಾರೆ. ಮತ್ತೊಂದು ಹೆಮ್ಮೆಯ ವಿಚಾರವೇನೆಂದರೆ, ಕನ್ನಡ ಚಿತ್ರರಂಗದಲ್ಲಿ ಅತೀ ಹೆಚ್ಚು ಹಾಡುಗಳನ್ನು ಹಾಡಿದ್ದಾರೆ. ಜಾನಕಿಯವರಿಗೂ, ಮೈಸೂರು ಜಿಲ್ಲೆಗೂ ಬಹಳಷ್ಟು ನಂಟು ಇತ್ತು. ಅವರು ಮೊದಲನೇ ಬಾರಿಗೆ ಸಾರ್ವಜನಿಕವಾಗಿ ಮೈಸೂರಿನಲ್ಲಿ ಸಂಗೀತ

ಕಾರ್ಯಕ್ರಮವನ್ನು ಕೊಟ್ಟಿದ್ದರು. ತಮ್ಮ ಜೀವನದ ಕೊನೆ ಸಂಗೀತ ಕಾರ್ಯಕ್ರಮವನ್ನು ಸಾರ್ವಜನಿಕವಾಗಿ ಮೈಸೂರಿನಲ್ಲಿ ಕೊಟ್ಟಿದ್ದು. ತಮ್ಮ ಜೀವನದ ಕೊನೆ ಕಾಲಘಟ್ಟದಲ್ಲಿ ಮೈಸೂರಿನಲ್ಲಿಯೇ ಜೀವನವನ್ನು ಕಳೆಯಬೇಕೆಂದು ಬಯಸಿದ್ದರು. ಮೈಸೂರಿನಲ್ಲಿಯೇ ಉಳಿದುಕೊಂಡಿದ್ದರು. ತಮ್ಮ ಅಂತ್ಯಸಂಸ್ಕಾರ ಕೂಡ ಮೈಸೂರಿನಲ್ಲಿಯೇ ಆಗಬೇಕೆಂದು ಅವರು ಬಯಕೆಯನ್ನು ಹೊಂದಿದ್ದರು. ಅದರಂತೆ ನಮ್ಮ ಸರ್ಕಾರ ಕೂಡ ಸಕಲ ಗೌರವಗಳೊಂದಿಗೆ ಮೈಸೂರಿನಲ್ಲಿ ಅವರ ಅಂತ್ಯಸಂಸ್ಕಾರವನ್ನು ಮಾಡಿದ್ದರು. 1980-90 ರ ದಶಕದಲ್ಲಿ ಹುಟ್ಟಿ ಬೆಳೆದಂತಹ ನಮ್ಮೆಲ್ಲರಿಗೂ ಕೂಡ ಅವರ ಧ್ವನಿಯನ್ನು ಮರೆಯುವುದಕ್ಕೆ ಆಗುವುದಿಲ್ಲ. ಚಿತ್ರ ಸಂಗೀತ ಎಂದರೆ ಜಾನಕಿ ಎಂದು ನಾವೆಲ್ಲಾ ಭಾವಿಸಿದ್ದೆವು. ಜಾನಕಿರವರು ಯಾವುದೇ ಪ್ರಕಾರದ ಸಂಗೀತ ಇದ್ದರೂ ಕೂಡ ಸುಲಭವಾಗಿ ಹಾಡುತ್ತಿದ್ದರು. ಎಲ್ಲದಕ್ಕಿಂತ ಹೆಚ್ಚಾಗಿ ಭಾವನೆಗಳನ್ನು ಹಾಡಿನ ಮೂಲಕ ಬಹಳ ಸುಲಲಿತವಾಗಿ ಸಮರ್ಥವಾಗಿ ವ್ಯಕ್ತಪಡಿಸುತ್ತಿದ್ದರು. ಹಾಗಾಗಿ ಇವರನ್ನು 'Expression Queen' ಎಂದು ಕೂಡ ಕರೆಯುತ್ತಿದ್ದರು. ಜಾನಕಿಯಂತಹ ಒಬ್ಬ ಹಿನ್ನೆಲೆ ಗಾಯಕಿಯನ್ನು ಕಳೆದುಕೊಂಡು ಇವತ್ತು ಚಿತ್ರರಂಗ ಮತ್ತು ಕಲಾಕ್ಷೇತ್ರ ಬಡವಾಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮತ್ತೊರ್ವ ಶ್ರೇಷ್ಠ ಮಹಿಳೆಯಾದಂತಹ ಚೆನ್ನಮ್ಮನವರು ಈಗಾಗಲೇ ಎಲ್ಲರಿಗೂ ಗೊತ್ತಿರುವ ಹಾಗೆ ಅವರು ನಮ್ಮ ರಾಜ್ಯದ ಮಾಜಿ ಮುಖ್ಯಮಂತ್ರಿ ಹಾಗೂ ದೇಶದ ಮಾಜಿ ಪ್ರಧಾನ ಮಂತ್ರಿಗಳಾದಂತಹ ಹೆಚ್.ಡಿ.ದೇವೇಗೌಡರವರ ಧರ್ಮಪತ್ನಿಯಾಗಿದ್ದರು. ಅವರ ಮನೆಗೆ ಹೋಗುತ್ತಿದ್ದಂತಹ ಎಲ್ಲಾ ಸಾರ್ವಜನಿಕರು, ಪಕ್ಷದ ಕಾರ್ಯಕರ್ತರು, ರಾಜಕೀಯ ನಾಯಕರು ಎಲ್ಲರಿಗೂ ಕೂಡ ಅವರು ಮಾಡುತ್ತಿದ್ದಂತಹ ಅತಿಥಿ ಸತ್ಕಾರ್ಯ ಮತ್ತು ಉಪಚಾರದ ಬಗ್ಗೆ ಬಹಳ ಹೊಗಳಿಕೆಯ ಮಾತುಗಳನ್ನು ಆಡುತ್ತಿದ್ದರು. ಅವರ ಪತಿಯವರು ಪ್ರಧಾನಮಂತ್ರಿಗಳಾದರೂ ಕೂಡ ತಮ್ಮ ಸರಳ ಜೀವನ ಶೈಲಿಯನ್ನು ಬಿಡದೇ, ತಾವು ಮೊದಲು ಹೇಗಿದ್ದರೋ ಹಾಗೆಯೇ ನಡೆದುಕೊಳ್ಳುತ್ತಿದ್ದರು. ಹಾಗಾಗಿ ಹಲವಾರು ರಾಜಕಾರಣಿಗಳ ಕುಟುಂಬಗಳಿಗೆ ಮಾದರಿಯಾಗಿ ಬದುಕಿದ್ದಾರೆ. ಅಂತಹವರು ನಮ್ಮನ್ನು ಅಗಲಿದ್ದಾರೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಿದ್ದೇನೆ.

ಡಾ॥ ಎಸ್.ಆರ್. ರಾಮಸ್ವಾಮಿಯವರು ಬರಹಗಾರರು, ಪತ್ರಕರ್ತರು ಹಾಗೂ ಪರಿಸರವಾದಿಗಳು ಆಗಿದ್ದರು. ಇವರು 'ಸುಧಾ' ವಾರಪತ್ರಿಕೆಯ ಮುಖ್ಯ ಉಪಸಂಪಾದಕರಾಗಿ ಹಾಗೂ 'ಉತ್ಥಾನ' ಮಾಸಿಕದ ಗೌರವ ಪ್ರಧಾನ ಸಂಪಾದಕರಾಗಿದ್ದರು. ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ 55 ಪುಸ್ತಕಗಳು ಹಾಗೂ ಸಾವಿರಕ್ಕೂ ಹೆಚ್ಚು ಲೇಖನಗಳನ್ನು ಬರೆದಿದ್ದಾರೆ. ಕೆನರಾ ಬ್ಯಾಂಕ್ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಡಿವಿಜಿ ಪ್ರಶಸ್ತಿ, ನಾಡೋಜ ಪ್ರಶಸ್ತಿ ಇಂತಹ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಭಾರತೀಯ ಖ್ಯಾತ ಹಿನ್ನೆಲೆ ಗಾಯಕಿಯಾದ ಆಶಾ ಭೋಂಸ್ಲೆಯವರು ಕೂಡ ಎಸ್.ಜಾನಕಿಯವರಂತೆ ಎಲ್ಲಾ ಪ್ರಕಾರದ ಸಂಗೀತವನ್ನು ಸುಲಭವಾಗಿ ಮತ್ತು ಸುಲಲಿತವಾಗಿ ಹಾಡುತ್ತಿದ್ದರು. ಭಾರತದ ಎಲ್ಲಾ ಭಾಷೆಗಳಲ್ಲಿಯೂ ಕೂಡ ಹಾಡುಗಳನ್ನು ಹಾಡಿದ್ದಾರೆ. ಪದ್ಮವಿಭೂಷಣ ಪ್ರಶಸ್ತಿಯನ್ನು ಪಡೆದಿದ್ದಾರೆ. 7 ಬಾರಿ ಫಿಲ್ಮ್‌ಫೇರ್ ಪ್ರಶಸ್ತಿಯನ್ನು ಪಡೆದಿದ್ದಾರೆ. ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಗೂ ಕೂಡ ಪಾತ್ರರಾಗಿದ್ದರು. ಅವರ ನಿಧನದಿಂದಾಗಿ ಕಲಾ ಕ್ಷೇತ್ರಕ್ಕೆ ಒಂದು ದೊಡ್ಡ ನಷ್ಟವಾಗಿದೆ ಎಂದು ಹೇಳುತ್ತಿದ್ದೇನೆ.

ಮಾನ್ಯ ರಾಮಚಂದರ್ ಬೈಕಂಪಾಡಿಯವರು ಸಾಹಿತಿಗಳು, ಕಲಾವಿದರು, ಮೀನುಗಾರರ ಮುಖಂಡರು. ಇವರು ರಂಗಭೂಮಿ ಹಾಗೂ ಸಿನಿಮಾ ಕಲಾವಿದರು ಕೂಡ ಆಗಿದ್ದರು. ಮೀನುಗಾರರ ಮುಖಂಡರು ಮತ್ತು ಹಿರಿಯ ರಾಜಕಾರಣಿಗಳು ಕೂಡ ಆಗಿದ್ದರು. ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ತುಳು ಸಾಹಿತ್ಯ ಅಕಾಡೆಮಿ ಮತ್ತು ರಾಜ್ಯೋತ್ಸವ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಡಾ॥ ಗಿರೀಶ್ ಭಾರದ್ವಾಜ್‌ರವರು 'ತೂಗು ಸೇತುವೆಗಳ ಸರದಾರ' ಎಂದು ಹೆಸರು ಪಡೆದವರು. ನಮ್ಮ ಮಲೆನಾಡು ಮತ್ತು ಕರಾವಳಿ ಭಾಗದಲ್ಲಿ ದಾರಿಗಳ ಹಳ್ಳಿಗಳಿಗೆ ಸಂಪರ್ಕ ಇರುವುದಿಲ್ಲ. ಏಕೆಂದರೆ ಬಹಳಷ್ಟು ಕಾಡಿನ ದಾರಿ ಇರುತ್ತದೆ. ಹೊಳೆ-ತೊರೆಗಳು ಇರುತ್ತದೆ. ಹಾಗಾಗಿ ಹಳ್ಳಿಗಳಿಗೆ ಸಂಪರ್ಕ ಕಲ್ಪಿಸಬೇಕೆಂದು ಇವರು ತೂಗು ಸೇತುವೆಗಳನ್ನು ನಿರ್ಮಾಣ ಮಾಡುತ್ತಿದ್ದರು.

(ಮುಂದು)

(667) 13.8.2026 12.00 ಪಿಕೆ:ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**ಡಾ: ಯತೀಂದ್ರ ಎಸ್. (ಮುಂದು):**

ಇವರು ಸುಮಾರು 145ಕ್ಕೂ ಹೆಚ್ಚು ತೂಗುಸೇತುವೆಗಳನ್ನು ವಿನ್ಯಾಸಗೊಳಿಸಿದ್ದರು. ಇವರು "ತೂಗುಸೇತುವೆಗಳ ಸರದಾರ" ಎನ್ನುವ ಹೆಸರನ್ನು ಪಡೆದಿದ್ದರು. ಇವರು ಕೇಂದ್ರ ಸರ್ಕಾರದ ಪದ್ಮಶ್ರೀ ಪ್ರಶಸ್ತಿ ಹಾಗೂ ರಾಜ್ಯ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿಯನ್ನೂ ಪಡೆದಿದ್ದರು. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪ್ರಶಸ್ತಿಯನ್ನೂ ಸಹ ಪಡೆದಿದ್ದರು. ಇವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಪ್ರಾರ್ಥನೆ ಮಾಡುತ್ತೇನೆ.

ಕರ್ನಾಟಕದ ಹಿರಿಯ ಲೇಖಕಿಯಾದ ಮಾನ್ಯ ಸಿ.ಎನ್.ಮುಕ್ತಾರವರು, ಶಿಕ್ಷಕಿ ಹಾಗೂ ಸಾಹಿತಿಯೂ ಆಗಿದ್ದರು. 75ಕ್ಕೂ ಹೆಚ್ಚು ಕಾದಂಬರಿಗಳನ್ನು ಹಾಗೂ 15ಕ್ಕೂ ಅಧಿಕ ಕಥಾ ಸಂಕಲನಗಳನ್ನು ಬರೆದು ಪ್ರಕಟಪಡಿಸಿದ್ದಾರೆ. ಆರ್ಯಭಟ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿ, ತ್ರಿವೇಣಿ ಪ್ರಶಸ್ತಿ ಹಾಗೂ ರಾಜ್ಯೋತ್ಸವ ಪ್ರಶಸ್ತಿಗೆ

ಭಾಜನರಾಗಿದ್ದರು. ಇವರ ನಿಧನದಿಂದಾಗಿ ಸಾಹಿತ್ಯ ಕ್ಷೇತ್ರಕ್ಕೆ ದೊಡ್ಡ ನಷ್ಟವಾಗಿದೆ. ಅವರ ಆತ್ಮಕ್ಕೂ ಶಾಂತಿ ಸಿಗಲೆಂದು ಪ್ರಾರ್ಥಿಸುತ್ತೇನೆ.

ಹಿರಿಯರಾದ ಪ್ರೊ: ಎ.ವಿ.ನರಸಿಂಹಮೂರ್ತಿಯವರು ಪುರಾತತ್ವ ಶಾಸ್ತ್ರಜ್ಞರು ಹಾಗೂ ನಾಣ್ಯ ಶಾಸ್ತ್ರಜ್ಞರಾಗಿದ್ದರು. ಇವರು ಕರ್ನಾಟಕ ಹಾಗೂ ಭಾರತದ ಇತಿಹಾಸದ ನಾಣ್ಯ ಶಾಸ್ತ್ರಗಳನ್ನು ಕುರಿತು ಹಲವು ಗ್ರಂಥಗಳನ್ನು ರಚನೆ ಮಾಡಿದ್ದಾರೆ. ನಾಣ್ಯ ಶಾಸ್ತ್ರ ಸೊಸೈಟಿ ಆಫ್ ಇಂಡಿಯಾದ ಬೆಳ್ಳಿ ಪದಕ ಹಾಗೂ ರಾಷ್ಟ್ರಕವಿ ಗೋವಿಂದ ಪೈ ಪ್ರಶಸ್ತಿ, ಪುರಾತತ್ವ ರತ್ನ ಪ್ರಶಸ್ತಿ ಹಾಗೂ ರಾಜ್ಯೋತ್ಸವ ಪ್ರಶಸ್ತಿಗಳನ್ನು ಪಡೆದಿದ್ದರು. ಇವರ ನಿಧನದಿಂದ ರಾಷ್ಟ್ರಕ್ಕೆ ಒಬ್ಬ ನಾಣ್ಯ ತಜ್ಞರನ್ನು ಕಳೆದುಕೊಂಡಂತಾಗಿದೆ. ಇವರ ಆತ್ಮಕ್ಕೂ ಭಗವಂತ ಶಾಂತಿ ಕೊಡಲಿ ಎಂದು ಪ್ರಾರ್ಥನೆ ಮಾಡುತ್ತಿದ್ದೇನೆ. ನೀವು ತಂದಿರುವ ಸಂತಾಪ ಸೂಚನೆಯನ್ನು ಅನುಮೋದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ಈ ಸದನದ ಶಾಸಕರಾಗಿದ್ದ ಮಾನ್ಯ ರಾಮಚಂದ್ರಗೌಡರವರು, ಮಂತ್ರಿಗಳಾಗಿದ್ದ ಮಾನ್ಯ ಡಿ.ಸುಧಾಕರ್‌ರವರು, ಮಾನ್ಯ ವೆಂಕಟರಮಣಪ್ಪನವರು, ಮಾನ್ಯ ಸಿ. ವೀರಣ್ಣನವರು, ಮಾನ್ಯ ಹೆಚ್.ಹನುಮಂತಪ್ಪನವರು, ಡಾ:ಎಸ್.ಆರ್.ರಾಮಸ್ವಾಮಿಯವರು, ಶ್ರೀಮತಿ ಆಶಾ ಭೋಸ್ಲೆಯವರು, ಮಾನ್ಯ ರಾಮಚಂದರ್ ಬೈಕಂಪಾಡಿಯವರು, ಡಾ: ಗಿರೀಶ್ ಭಾರಧ್ವಾಜ್‌ರವರು, ಡಾ: ಎಸ್.ಜಾನಕಿಯವರು, ಮಾನ್ಯ ಸಿ.ಎನ್.ಮುಕ್ತಾರವರು, ಮಾನ್ಯ ಪ್ರೊ.ಎ.ವಿ.ನರಸಿಂಹಮೂರ್ತಿಯವರು ಮತ್ತು ಮಾನ್ಯ ಚೆನ್ನಮ್ಮನವರನ್ನೂ ಒಳಗೊಂಡಂತೆ 13 ಚೇತನಗಳು ನಮ್ಮನ್ನು ಆಗಲಿವೆ ಎನ್ನುವ ವಿಷಾದನೀಯ ಸಂಗತಿಯನ್ನು ತಾವು ಸದನಕ್ಕೆ ಸಂತಾಪ ಸೂಚನೆಯ ರೂಪದಲ್ಲಿ ತಿಳಿಸಿದ್ದೀರಿ.

ಮಾನ್ಯ ರಾಮಚಂದ್ರಗೌಡರವರು, ಸತತವಾಗಿ ಈ ಸದನದ ಸದಸ್ಯರಾಗಿ ಬಹುಕಾಲ ಸೇವೆ ಸಲ್ಲಿಸಿರುತ್ತಾರೆ. ಸಚಿವರಾಗಿ ಕೂಡ ಕೆಲಸ ಮಾಡಿದ್ದರು. ಹಲವು ವಿಚಾರಗಳಲ್ಲಿ ಅವರ ಕೊಡುಗೆಗಳು ಇವತ್ತಿಗೂ ಕೂಡ ನೆನಪಿನಲ್ಲಿ ಉಳಿಯುತ್ತವೆ. ರಾಷ್ಟ್ರೀಯ ಸ್ವಯಂಸೇವಕ ಸಂಘದಿಂದ ಪ್ರೇರಿತರಾಗಿದ್ದ ಹಿರಿಯರು, ತುಮಕೂರಿನಲ್ಲಿ ಹುಟ್ಟಿದ್ದರೂ, ಬೆಂಗಳೂರಿನಲ್ಲಿ ನೆಲೆಸಿ ಇಲ್ಲಿ ಕಾರ್ಪೋರೇಟರ್ ಆಗಿ ಕೆಲಸ ಮಾಡಿ, ನಂತರ ಈ ಸದನದ ಶಾಸಕರಾಗಿ ಹಲವು ಬಾರಿ ಆಯ್ಕೆಯಾಗಿದ್ದರು. ಅವರು ಯುವಕರಿಗೆ ಪ್ರೇರಣೆ ನೀಡುತ್ತಿದ್ದರು. ಜನ ಸಾಮಾನ್ಯರಲ್ಲಿ ತಮ್ಮನ್ನು ತೊಡಗಿಸಿಕೊಂಡು, ಎಲ್ಲರನ್ನು ಕೂಡ ಒಂದೇ ರೀತಿಯಲ್ಲಿ, ಸೌಜನ್ಯದಿಂದ ಕಾಣತಕ್ಕಂಥ, ವಿಶ್ವಾಸವನ್ನು ಮೂಡಿಸುವಂತಹ ವ್ಯಕ್ತಿತ್ವ ಹೊಂದಿದವರಾಗಿದ್ದರು. ಅವರ ಅಗಲಿಕೆಯಿಂದ ಖಂಡಿತವಾಗಿಯೂ ರಾಜ್ಯದ ಒಬ್ಬ ಉತ್ತಮ ಆಡಳಿತಗಾರನನ್ನು ಕಳೆದುಕೊಂಡಿದ್ದೇವೆ ಎಂದು ಹೇಳಬೇಕಾಗುತ್ತದೆ.

ಮಾನ್ಯ ಡಿ.ಸುಧಾಕರ್‌ಕರವರದ್ದು ಅಕಾಲಿಕ ಮರಣವಾಗಿದೆ. ಅವರಿಗೆ ಬಹಳ ವಯಸ್ಸು ಆಗಿರಲಿಲ್ಲ. ಅವರು ಸಚಿವರಾಗಿ ಕೆಲಸ ಮಾಡುತ್ತಿದ್ದರು. ಅವರು ತಮ್ಮ ಆರೋಗ್ಯ ಕಾಪಾಡಿಕೊಳ್ಳಲಿಲ್ಲ ಎನ್ನುವ ಕಾರಣಕ್ಕೆ

ಅವರನ್ನು ಕಳೆದುಕೊಂಡೆವು ಎಂದು ಹೇಳಬೇಕಾಗುತ್ತದೆ. ಇವರೂ ಕೂಡ ಎಲ್ಲರ ಜೊತೆಯಲ್ಲಿ ಬಹಳ ಸೌಜನ್ಯಯುತವಾಗಿ ನಡೆದುಕೊಳ್ಳುತ್ತಿದ್ದರು; ಪ್ರೀತಿ-ವಿಶ್ವಾಸವನ್ನು ತೋರಿಸುತ್ತಿದ್ದರು. ಸ್ನೇಹಮಯಿ ವ್ಯಕ್ತಿಯಾಗಿದ್ದರು ಎನ್ನುವುದನ್ನು ನಾವು ಬಹಳ ಹತ್ತಿರದಿಂದ ನೋಡಿದ್ದೇವೆ. ಇಂತಹ ಒಬ್ಬ ವ್ಯಕ್ತಿಯನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ರಾಜಕಾರಣಕ್ಕೆ ಇಂಥವರು ಅನೇಕ ಕೊಡುಗೆಗಳನ್ನು ಕೊಟ್ಟಿದ್ದಾರೆ.

ಮಾನ್ಯ ಸಭಾನಾಯಕರು ಮಾತನಾಡುತ್ತಾ, ಮಾನ್ಯ ವೆಂಕಟರಮಣಪ್ಪನವರ ಬಗ್ಗೆ ಹೇಳಿದರು. ಅವರು ಅಷ್ಟೊಂದು ವಿದ್ಯಾವಂತರಾಗಿದ್ದವರಲ್ಲ. ಆದರೆ, ಆ ಪ್ರದೇಶದಲ್ಲಿ ಜನಮನ್ನಣೆ ಗಳಿಸಿದ್ದರು ಮತ್ತು ಪ್ರತಿಯೊಬ್ಬರ ಸ್ನೇಹಿತರಾಗಿದ್ದರು. ರಾಜಕೀಯ ರಂಗ ಪ್ರವೇಶಿಸಿ ಮಾಡಿದ ಅವರ ಸೇವೆಯನ್ನು ಯಾವತ್ತಿದ್ದರೂ ನಾವು ಮರೆಯುವ ಹಾಗಿಲ್ಲ. ಆ ರೀತಿಯ ನೆನಪುಗಳು ನಮ್ಮ ಮನಸ್ಸಿನಲ್ಲಿ ಉಳಿಯುತ್ತವೆ. ಅಷ್ಟೊಂದು ವಿದ್ಯಾವಂತರಲ್ಲದಿದ್ದರೂ ಪ್ರಜ್ಞಾವಂತರಾಗಿದ್ದರು ಎನ್ನುವುದನ್ನು ನಾವು ಮರೆಯುವುದಕ್ಕೆ ಸಾಧ್ಯವಿಲ್ಲ. ಮಂತ್ರಿಯಾಗಿ ಕೂಡ ಅವರು ಸೇವೆ ಸಲ್ಲಿಸಿದ್ದರು. ಜನರ ಜೊತೆಯಲ್ಲಿ ಸಹಜವಾಗಿ ಬೆರೆಯುವ ಗುಣ ಅವರಲ್ಲಿತ್ತು. ಎಲ್ಲರನ್ನೂ ಸ್ನೇಹದಿಂದ, ವಿಶ್ವಾಸದಿಂದ ಮಾತನಾಡಿಸುವ ಮೂಲಕ, ಯುವಕರಿಗೆ ಪ್ರೇರಣೆ ನೀಡುವಂತಹ ಜೀವನವನ್ನು ನಡೆಸಿ ಇವತ್ತು ನಮ್ಮನ್ನು ಅಗಲಿದ್ದಾರೆ.

ಮಾನ್ಯ ಸಿ. ವೀರಣ್ಣನವರು, ಮಾನ್ಯ ರಾಮಕೃಷ್ಣ ಹೆಗ್ಗಡೆಯವರ ಕಾಲದಿಂದ ಹಿಡಿದು, ಮಾನ್ಯ ಬೊಮ್ಮಾಯಿಯವರ ಸಚಿವ ಸಂಪುಟದಲ್ಲಿ ಸಚಿವರಾಗಿದ್ದರು. ಅತಿ ಹಿಂದುಳಿದ ಸಮುದಾಯದಿಂದ ಬಂದಿದ್ದ ಸನ್ಮಾನ್ಯರು ತುಮಕೂರಿನವರಾಗಿದ್ದರು. ಇವರೂ ಕೂಡ ಅನ್ಯೋನ್ಯತೆಯಿಂದ ಜನರ ಜೊತೆಯಲ್ಲಿ ಬೆರೆಯುತ್ತಿದ್ದರು. ವಿಶ್ವಾಸದಿಂದ ಇರುತ್ತಿದ್ದರು ಮತ್ತು ಅನೇಕ ಕೊಡುಗೆಗಳನ್ನು ಕೊಟ್ಟಿದ್ದಾರೆ.

ವಿಶೇಷವಾಗಿ ಮಾನ್ಯ ಹೆಚ್.ಹನುಮಂತಪ್ಪನವರ ಬಗ್ಗೆ ಹೇಳುವುದಾದರೆ, ಅವರು ನಮಗೂ ತುಂಬಾ ಆತ್ಮೀಯರಾಗಿದ್ದರು; ತಳ ಸಮುದಾಯದಿಂದ ಬಂದ ವ್ಯಕ್ತಿಯಾಗಿದ್ದರು. ಪರಿಶಿಷ್ಟ ಜಾತಿಯವರಾಗಿದ್ದರು. 3 ಬಾರಿ ರಾಜ್ಯಸಭಾ ಸದಸ್ಯರಾಗಿ, ಎಸ್.ಸಿ./ಎಸ್.ಟಿ. ಆಯೋಗದ ರಾಷ್ಟ್ರೀಯ ಅಧ್ಯಕ್ಷರಾಗಿದ್ದರು. ಸಿಲ್ಕ್ ಬೋರ್ಡ್‌ನ ಅಧ್ಯಕ್ಷರಾಗಿದ್ದರು. ಕೇಂದ್ರ ರೇಲ್ವೆ ರಿಕ್ರೂಟ್‌ಮೆಂಟ್ ಬೋರ್ಡ್‌ನ ಅಧ್ಯಕ್ಷರೂ ಆಗಿ ಸೇವೆ ಸಲ್ಲಿಸಿದ್ದರು. ಅನೇಕ ಯುವ ಜನತೆಗೆ ಕೆಲಸ-ಕಾರ್ಯಗಳನ್ನು ಕೊಡಿಸಿದ್ದರು. ರೇಲ್ವೆ ಇಲಾಖೆಯಲ್ಲಿ ಹಿಂದೆ ಬಹಳ ಸುಲಭವಾಗಿ ಕೆಲಸ ಕೊಡಿಸಬಹುದಾಗಿತ್ತು. ಅನೇಕರಿಗೆ ಕೆಲಸಗಳನ್ನು ಕೊಡಿಸಿ ಅನೇಕರ ಮನೆ ಮಾತಾಗಿದ್ದರು.

ಮಾನ್ಯ ರಾಮಸ್ವಾಮಿಯವರು, ಶ್ರೀಮತಿ ಆಶಾಭೋಸ್ಲೆಯವರು ನಿಧನರಾಗಿದ್ದಾರೆ. ಇಡೀ ದೇಶದಲ್ಲಿ ಹಾಡುಗಾರಿಕೆಯ ಬಗ್ಗೆ ಮಾತನಾಡಬೇಕಾದರೆ ಶ್ರೀಮತಿ ಆಶಾಭೋಸ್ಲೆ ಅವರ ಹೆಸರನ್ನು ಹೇಳುತ್ತಿದ್ದರು. ಅವರ ಕಂಠವನ್ನು ಯಾರೂ ಮರೆಯುವುದಿಲ್ಲ. ಇವರು ಅನೇಕ ಭಾಷೆಗಳಲ್ಲಿ ಹಾಡುಗಳನ್ನು ಹಾಡಿ ಜನರನ್ನು ರಂಜಿಸಿದ್ದರು.

ಕನ್ನಡ ಭಾಷೆಯ ಹಾಡುಗಳು, ಸಿರಿಕಂಠದಲ್ಲಿ ಬರುತ್ತಿವೆ ಎಂದರೆ ಆಗ ನಮ್ಮ ಕಣ್ಣಿನ ಮುಂದೆ ಬರುತ್ತಿದ್ದುದೇ ಡಾ: ಎಸ್.ಜಾನಕಿಯವರ ಚಿತ್ರ ಎಂದು ಹೇಳಿದರೆ ತಪ್ಪಾಗಲಾರದು. ಇಳಿವಯಸ್ಸಿನಲ್ಲೂ ಅವರ ಕಂಠ ಮಗುವಿನ

ಕಂಠದಂತೆ ಇತ್ತು. ಎಲ್ಲಾ ಭಾಷೆಗಳಲ್ಲೂ ಹಾಡುವ ಮತ್ತು ಕನ್ನಡಕ್ಕೆ ಹೆಚ್ಚಿನ ಗೌರವವನ್ನು ಕೊಟ್ಟು ತಮ್ಮ ಕಂಠಧಾರೆಯನ್ನು ಎರೆದರು. ಕನ್ನಡಕ್ಕೆ ಸಿರಿಯನ್ನು ತಂದುಕೊಟ್ಟರು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಚೆನ್ನಮ್ಮನವರು, ಭಾರತದ ಮಾಜಿ ಪ್ರಧಾನಿಯಾದ ಮಾನ್ಯ ದೇವೇಗೌಡರವರ ಧರ್ಮ ಪತ್ನಿ. ಇತ್ತೀಚೆಗೆ ಅವರು ನಮ್ಮನ್ನು ಅಗಲಿದರು. ರಾಜಕೀಯವಾಗಿ ಎಲ್ಲೂ ಕಂಡವರಲ್ಲ. ಆದರೆ, ಅವರಿಗೆ ಅನ್ನಪೂರ್ಣೇಶ್ವರಿ ಎಂಬ ಹೆಸರು ಬರಬೇಕೆಂದರೆ, ಅವರು ತಮ್ಮ ಕುಟುಂಬವನ್ನು ಯಾವರೀತಿ ಕಾಪಾಡಿದ್ದರು ಎನ್ನುವುದು ಗೊತ್ತಾಗುತ್ತದೆ. ಒಂದು ರಾಜಕೀಯ ಕುಟುಂಬಕ್ಕೆ ಮೆರಗು ಬರಬೇಕಾದರೆ ಸ್ತ್ರೀಶಕ್ತಿ ಎಷ್ಟು ಕೆಲಸ ಮಾಡುತ್ತದೆ ಎನ್ನುವುದಕ್ಕೆ ಮಾನ್ಯ ಚೆನ್ನಮ್ಮನವರು ಉದಾಹರಣೆಯಾಗಿದ್ದಾರೆ. ಆದ್ದರಿಂದಲೇ, ಇವತ್ತು ಅವರ ಮಕ್ಕಳನ್ನು, ಮೊಮ್ಮಕ್ಕಳನ್ನು ಎರಡೂ ಸದನಗಳಲ್ಲಿ ನಾವು ಕಂಡಿದ್ದೇವೆ. ಮಾನ್ಯ ದೇವೇಗೌಡರವರು ಪ್ರಧಾನ ಮಂತ್ರಿಗಳಾಗಿದ್ದುದು ಇಡೀ ಕರ್ನಾಟಕಕ್ಕೆ ಘನತೆಯ ವಿಷಯವಾಗಿದೆ. ಭವಿಷ್ಯದಲ್ಲಿ ಯಾವತ್ತಾದರೂ ಕರ್ನಾಟಕದವರು ಪ್ರಧಾನ ಮಂತ್ರಿಗಳಾಗುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ, ಕರ್ನಾಟಕಕ್ಕೆ ಪ್ರಧಾನ ಮಂತ್ರಿಯಾಗುವಂತಹ ಗರಿಮೆಯನ್ನು ಮಾನ್ಯ ಚೆನ್ನಮ್ಮನವರು ತಂದುಕೊಟ್ಟರು.

ಹೀಗೆ ಈ ರಾಜ್ಯಕ್ಕೆ ಸೇವೆ ಸಲ್ಲಿಸಿರುವ ಸುಮಾರು 13 ಚೇತನಗಳು ಅಗಲಿದ್ದಾರೆ. ಅವರ ನಿಧನ ವಾರ್ತೆಯನ್ನು, ವಿಷಾದನೀಯ ರೂಪದಲ್ಲಿ ಸದನದಲ್ಲಿ ಪ್ರಸ್ತಾಪ ಮಾಡಿದ್ದೀರಿ.

(ಮುಂದು)

(668) 13-8-2026 12.10 ಡಿಎಸ್-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ಮುಂದು):**

ಈ ಅಗಲಿದ ಎಲ್ಲಾ ನಾಯಕರುಗಳ ಆತ್ಮಕ್ಕೆ ಶಾಂತಿ ಸಿಗಲಿ ಮತ್ತು ಅವರ ಕುಟುಂಬಗಳಿಗೆ ಅವರ ಅಗಲಿಕೆಯ ನೋವನ್ನು ಭರಿಸುವಂತಹ ಶಕ್ತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥಿಸುತ್ತಾ, ತಾವು ಮಂಡಿಸಿರುವಂತಹ ನಿಧನ ವಾರ್ತೆಗೆ ನಾನೂ ಕೂಡ ವಿಷಾದ ವ್ಯಕ್ತಪಡಿಸುತ್ತಾ, ಅವರ ಕುಟುಂಬಗಳಿಗೆ ತಾವು ಪತ್ರ ಮುಖೇನಾ ವಿಷಾದವನ್ನು ತಿಳಿಸಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ, ನಮಸ್ಕಾರ.

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಮಂಡಿಸಿರುವಂತಹ ಈ ಸಂತಾಪ ಸೂಚನೆಗೆ ನಾನು ಸಹಮತ ವ್ಯಕ್ತಪಡಿಸುತ್ತೇನೆ. ಶ್ರೀ ರಾಮಚಂದ್ರಗೌಡರವರು, ಶ್ರೀ ವೆಂಕಟರಮಣಪ್ಪ, ಶ್ರೀ ಡಿ. ಸುಧಾಕರ್‌ರವರು, ಶ್ರೀ ವೀರಣ್ಣರವರು, ಶ್ರೀ ಎಚ್. ಹನುಮಂತಪ್ಪರವರು,

ಡಾ|| ಎಸ್.ಆರ್. ರಾಮಸ್ವಾಮಿಯವರು, ಶ್ರೀಮತಿ ಆಶಾ ಭೋಂಸ್ಲೆಯವರು, ಶ್ರೀ ರಾಮಚಂದರ್ ಬೈಕಂಪಾಡಿಯವರು, ಶ್ರೀ ಗಿರೀಶ್ ಭಾರದ್ವಾಜ್‌ರವರು, ಶ್ರೀಮತಿ ಎಸ್. ಜಾನಕಿಯವರು, ಶ್ರೀಮತಿ ಸಿ.ಎನ್. ಮುಕ್ತಾರವರು, ಪ್ರೊ|| ಎ.ವಿ. ನರಸಿಂಹಮೂರ್ತಿಯವರು ಹಾಗೂ ಅನ್ನಪೂರ್ಣೇಶ್ವರಿಯಾಗಿದ್ದ ಶ್ರೀಮತಿ

ಚೆನ್ನಮ್ಮರವರು, ಇದಲ್ಲದೆ ಈ ಒಂದು ಸಂದರ್ಭದಲ್ಲಿ ನಿಧನರಾಗಿರುವಂಥ ಎಲ್ಲಾ ಜನಸಾಮಾನ್ಯ ಚೇತನರಿಗೆ ನಾನು ಶ್ರದ್ಧಾಂಜಲಿಯನ್ನು ಸಲ್ಲಿಸುತ್ತೇನೆ.

ಹುಟ್ಟು ಯಾರಿಗೆ ಇದೆಯೋ, ಅವರಿಗೆ ಸಾವು ನಿಶ್ಚಿತ. ಹುಟ್ಟು ಯಾರಿಗೆ ಇಲ್ಲವೋ, ಅವರಿಗೆ ಮಾತ್ರ ಸಾವು ಇಲ್ಲ. ಬುದ್ಧ ಮತ್ತು ಕಿಸಾಗೋತಮಿಯವರ ನಡುವಿನ ಒಂದು ಸಂವಾದ ನಮಗೆಲ್ಲರಿಗೂ ಗೊತ್ತಿರುವಂಥದ್ದು. ಕಿಸಾಗೋತಮಿ ಚಿಕ್ಕ ಮಗುವನ್ನು ಎತ್ತಿಕೊಂಡು ಹೋಗಿ, 'ನನ್ನ ಪ್ರೀತಿ ಪಾತ್ರ ಮಗ ತೀರಿಕೊಂಡು ಬಿಟ್ಟಿದ್ದಾನೆ, ಏನಾದರೂ ಮಾಡಿ ಬದುಕಿಸಿಕೊಡು, ನಿನಗೆ ಎಲ್ಲಾ ಶಕ್ತಿ ಇದೆ ಎಂದು ನಾನು ಕೇಳಿದ್ದೇನೆ, ನೀನು ಮನಸ್ಸು ಮಾಡಿದರೆ ನನ್ನ ಮಗ ಬದುಕಿ ಬರುತ್ತಾನೆ' ಎನ್ನುವ ಮಾತನ್ನು ಬುದ್ಧನ ಎದುರಿಗೆ ಹೇಳುತ್ತಾ, ಮಗನ ಶವವನ್ನು ಮಲಗಿಸಿದಾಗ, ತಕ್ಷಣಕ್ಕೆ ಬುದ್ಧ ಆ ಮಗುವಿನ ತಾಯಿಗೆ ಸಾಂತ್ವನ ಹೇಳುವುದಕ್ಕೆ ಹೋಗುವುದಿಲ್ಲ. ಆಕೆಯ ನೋವನ್ನು ಅರ್ಥ ಮಾಡಿಕೊಂಡು ಬುದ್ಧನು 'ನಿಶ್ಚಿತವಾಗಿ ಬದುಕಿಸುತ್ತೇನೆ, ನನಗೆ ನೀನು ಸಾವು ಇಲ್ಲದ ಮನೆಗೆ ಹೋಗಿ ಸಾಸಿವೆ ತೆಗೆದುಕೊಂಡು ಬಾ ಸಾಕು, ಸಾವು ಇಲ್ಲದ ಮನೆಗೆ ಹೋಗಿ ಸಾಸಿವೆ ತೆಗೆದುಕೊಂಡು ಬಂದರೆ ನಿನ್ನ ಮಗನನ್ನು ನಾನು ಬದುಕಿಸಿ ಕೊಡುತ್ತೇನೆ' ಎಂದು ಹೇಳುತ್ತಾನೆ. ಕಿಸಾಗೋತಮಿಯ ಮಗನನ್ನು ಅಥವಾ ಸತ್ತವರನ್ನು ಬದುಕಿಸುವ ಸಾಮರ್ಥ್ಯ ಯಾರಿಗೂ ಇಲ್ಲ ಎಂಬುದು ಬುದ್ಧನಿಗೂ ಗೊತ್ತಿತ್ತು. ಆದರೆ, ಆ ತಾಯಿಗೆ ಸಮಾಧಾನ ಹೇಳಬೇಕಾಗಿತ್ತು, ಸಾವು ಎನ್ನುವುದು ಸ್ವಾಭಾವಿಕ ಎನ್ನುವುದು ಮನವರಿಕೆ ಮಾಡಿಕೊಡಬೇಕಾಗಿತ್ತು. ಅದಕ್ಕಾಗಿ ಸಾವು ಇಲ್ಲದ ಮನೆಗೆ ಹೋಗಿ ಸಾಸಿವೆ ತೆಗೆದುಕೊಂಡು ಬಾ ಎಂದು ಹೇಳಿದಾಗ, ಇಷ್ಟೇ ತಾನೇ ಎಂದು ಹೇಳಿ, ಕಿಸಾಗೋತಮಿ ಮನೆಯಿಂದ ಮನೆಗೆ ಹೋಗುತ್ತಾಳೆ, ಈಗಷ್ಟೇ ಕೆಲವು ದಿನಗಳ ಹಿಂದೆ ನಮ್ಮ ತಾತನನ್ನು ಕಳೆದುಕೊಂಡೆವು ಎಂದು ಒಬ್ಬರು ಮನೆಯವರು ಹೇಳುತ್ತಾರೆ. ಇನ್ನೊಂದು ಮನೆಗೆ ಹೋದರೆ ಚಿಕ್ಕಪ್ಪನನ್ನು ಕಳೆದುಕೊಂಡಿದ್ದೇವೆ ಎಂದು ಹೇಳುತ್ತಾರೆ, ಇನ್ನೊಬ್ಬರ ಮನೆಯಲ್ಲಿ ತಾಯಿಯನ್ನು ಕಳೆದುಕೊಂಡಿದ್ದೇವೆ ಎಂದು ಹೇಳುತ್ತಾರೆ, ಇನ್ನೊಬ್ಬರ ಮನೆಯಲ್ಲಿ ಮಗುವನ್ನು ಕಳೆದುಕೊಂಡಿದ್ದೇವೆ ಎಂದು ಹೇಳುತ್ತಾರೆ. ಹೀಗೆ ಬೆಳಗ್ಗೆಯಿಂದ ಸಂಜೆಯವರೆಗೂ ನೂರಾರು ಮನೆಗಳನ್ನು ತಿರುಗಿ ಬಂದಾಗ ಎಲ್ಲರ ಮನೆಯಲ್ಲೂ ಒಬ್ಬರಲ್ಲ ಒಬ್ಬರು ಸತ್ತಿರುವುದು ಆಕೆಯ ಗಮನಕ್ಕೆ ಬರುತ್ತದೆ. ವಾಪಸ್ ಬರುತ್ತಾ, ಆಕೆ ಮೌನವಾಗಿ ಇರುತ್ತಾಳೆ. ಆಕೆಗೆ ಅನಿಸುತ್ತದೆ, ಸಾವು ನನ್ನ ಮನೆಯಲ್ಲಿ ಮಾತ್ರ ಆಗಿರುವುದಲ್ಲ, ಸಾವು ಎನ್ನುವುದು ಸ್ವಾಭಾವಿಕವಾಗಿದೆ, ಸಾವು ಯಾರಿಗೂ ತಪ್ಪಿದ್ದಲ್ಲ ಎನ್ನುವ ಅರಿವು ಆಗುತ್ತದೆ. ಭಗವಂತ ಸಾರ್ವತ್ರಿಕ ನ್ಯಾಯ ಎಂದು ಏನಾದರೂ ಕೊಟ್ಟಿದ್ದರೆ ಅದನ್ನು ಸೌಂದರ್ಯದಲ್ಲಿ ಕೊಡಲಿಲ್ಲ. ಸುಂದರತೆಯನ್ನು ಒಬ್ಬೊಬ್ಬರಿಗೆ ಒಂದೊಂದು ರೀತಿಯ ಭಗವಂತ ಕೊಟ್ಟಿದ್ದಾನೆ. ಬುದ್ಧಿವಂತಿಕೆಯಲ್ಲಿ ಒಬ್ಬೊಬರಿಗೆ ಒಂದೊಂದು ರೀತಿಯಲ್ಲಿ ಬುದ್ಧಿವಂತಿಕೆಯನ್ನು ಕೊಟ್ಟಿದ್ದಾನೆ. ಶ್ರೀಮಂತಿಕೆಯಲ್ಲೂ ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ಕೊಟ್ಟಿದ್ದಾನೆ. ಆದರೆ ಸಾವಿನಲ್ಲಿ ಸಾರ್ವತ್ರಿಕ ನ್ಯಾಯ ಕೊಟ್ಟಿದ್ದಾನೆ. ಆ ಸಾವಿನಲ್ಲಿ ಯಾರನ್ನೂ ಬಿಡುವುದಿಲ್ಲ. ಅವನು ರಾಜ ಇರಲಿ, ರಂಕ ಇರಲಿ, ವಿದ್ವಾಂಸ ಇರಲಿ ಅಥವಾ ಅನಕ್ಷರಸ್ಥ ಆಗಿರಲಿ, ಎಲ್ಲರಿಗೂ ಸಾಮಾನ್ಯವಾಗಿರುವಂತಹ ಸಹಜ ನ್ಯಾಯವನ್ನು ಭಗವಂತ ಕೊಟ್ಟಿದ್ದಾನೆ. ಸಾವನ್ನು ಯಾರಿಂದಲೂ

ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಹಾಗಾಗಿ ಇವತ್ತೇನು ನಮ್ಮ ಪ್ರೀತಿ ಪಾತ್ರರು, ನಮ್ಮ ಒಡನಾಡಿಗಳನ್ನು, ಕಳೆದುಕೊಂಡಾಗ ಸ್ವಾಭಾವಿಕವಾಗಿ ದುಃಖವಾಗುತ್ತದೆ. ಆದರೆ ಸಾವನ್ನು ತಪ್ಪಿಸುವಂತಹ ಸಾಧ್ಯತೆಗಳು ಇವೆಯೇ ಎಂದು ತುಂಬಾ ಜನ ವಿಜ್ಞಾನಿಗಳು ಸಂಶೋಧನೆ ಮಾಡುತ್ತಿದ್ದಾರೆ. ಆದರೆ ಯಾರಿಗೂ ಸಾವನ್ನು ಗೆಲ್ಲುವುದಕ್ಕೆ ಸಾಧ್ಯವಾಗಿಲ್ಲ. ಸಾವನ್ನು ಮುಂದೂಡುವ ಪ್ರಯತ್ನ ಮಾಡಿದ್ದಾರೆ. ಆದರೆ ಗೆಲ್ಲುವುದಕ್ಕೆ ಸಾಧ್ಯವಾಗಿಲ್ಲ. ಶ್ರೀ ರಾಮಚಂದ್ರಗೌಡರವರು ಈ ಸದನದ ಹಿರಿಯ ಸದಸ್ಯರಾಗಿ ಕಾರ್ಯನಿರ್ವಹಿಸಿರುವಂಥವರು. ಅವರು ನಮ್ಮ ಪಕ್ಷದ ನಾಯಕರಾಗಿದ್ದರಿಂದ ಸ್ವಾಭಾವಿಕವಾಗಿ ಅವರ ಜೊತೆಯಲ್ಲಿ ಹೆಚ್ಚಿನ ಒಡನಾಟ ಇತ್ತು. ನಾವು ಹೇಳದವರಿಗೆ ಅವರು ಟಿಕೆಟ್ ಕೊಡಲಿಲ್ಲ ಎಂದು ಅವರ ಜೊತೆಯಲ್ಲಿ ಜಗಳವಾಡಿದ್ದೇವೆ. ಅವರು ಯಾವಾಗಲೂ ಅವರ ಭಾಷಣದಲ್ಲಿ ಒಂದು ಮಾತನ್ನು ಹೇಳುತ್ತಿದ್ದರು, ಆ ಒಂದು ಸಂಸ್ಕೃತ ಶ್ಲೋಕ "ಅಶ್ವಂ ನೈವ ಗಜಂ ನೈವ ವ್ಯಾಘ್ರಂ ನೈವ ಚ ನೈವ। ಅಜಾಪುತ್ರಂ ಬಲಿಂ ದದ್ಯಾತ್ ದೇವೋ ದುರ್ಬಲ ಘಾತಕಃ॥" ಎಂದು ಹೇಳುತ್ತಿದ್ದರು. ಅವತ್ತು ಅದನ್ನು ವರ್ತಮಾನ ಕಾಲಕ್ಕೆ ವಿಶ್ಲೇಷಣೆ ಮಾಡಿ ಹೇಳುತ್ತಿದ್ದರು. ಅಂದರೆ, ಅಶ್ವಂ ನೈವ ಎಂದರೆ ದೇವರಿಗೆ ಬಲಿ ಕೊಡಬೇಕು ಎಂದು ಕೇಳಿದಾಗ, ಕುದುರೆ ಆಗಬಹುದಾ ಎಂದು ಕೇಳಿದರಂತೆ, ಬೇಡ ಎಂದು ಹೇಳಿತಂತೆ. ಗಜಂ ನೈವ, ಆನೆ ಆಗಬಹುದಾ ಎಂದು ಕೇಳಿದರಂತೆ, ಬೇಡ ಎಂದು ಹೇಳಿತಂತೆ. ಹುಲಿ ಎಂದು ಕೇಳಿದರೆ ಬೇಡವೇ ಬೇಡ ಎಂದು ಹೇಳಿತಂತೆ. ಕುರಿ ಎಂದು ಕೇಳಿದಾಗ, ಆಗಬಹುದು ಎಂದು ಹೇಳಿತಂತೆ. ಅಂದರೆ ದೇವರು ಕೂಡ ದುರ್ಬಲರನ್ನೇ ಘಾತಿಸುತ್ತಾನೆ ಎನ್ನುವ ಮಾತನ್ನು ಮಾರ್ಮಿಕವಾಗಿ ಹೇಳಬಯಸುತ್ತಿದ್ದೇನೆ. ಸಮಕಾಲಿನ ವಿಚಾರದ ಬಗ್ಗೆ ಹೇಳುವುದಾದರೆ, ಟಾಟಾ ನೈವ, ಬಿರ್ಲಾ ನೈವ...., ಅದಾನಿ, ಅಂಬಾನಿ ಆಗೇನು ಪ್ರಸಿದ್ಧಿಯಾಗಿರಲಿಲ್ಲ. ಅವರು ಅವರದ್ದನ್ನು ಉಲ್ಲೇಖ ಮಾಡಿ ಹೇಳುತ್ತಿದ್ದರು. ಅವತ್ತಿನ ಸರ್ಕಾರಕ್ಕೆ ಟೀಕೆ ಮಾಡಬೇಕಾದರೆ, ಸರ್ಕಾರಕ್ಕೂ ಕೂಡ ದುರ್ಬಲರನ್ನೇ ಇವರು ಆಹುತಿ ತೆಗೆದುಕೊಳ್ಳುತ್ತಾರೆ, ರೈತರನ್ನು ಆಹುತಿ ತೆಗೆದುಕೊಳ್ಳುತ್ತಾರೆ ಎಂದು ಅವತ್ತಿನ ಕಾಲಕ್ಕೆ ವಿಶ್ಲೇಷಣೆ ಮಾಡಿ ಹೇಳುತ್ತಿದ್ದರು. ಆ ರೀತಿ ಕಠೋರ ವ್ಯಕ್ತಿತ್ವ ಮತ್ತು ನೇರವಾಗಿ ಮಾತನಾಡುತ್ತಿದ್ದಂತಹ ಶ್ರೀ ರಾಮಚಂದ್ರಗೌಡರವರು ತುಂಬಾ ಅನುಭವಿ, ಅಪಾರವಾದಂತಹ ಜ್ಞಾನ ಇದ್ದಂಥವರು, ಕಷ್ಟಪಟ್ಟು ಕೆಲಸ ಮಾಡುತ್ತಿದ್ದರು. ಅವರನ್ನು ನಾವು ಕಳೆದುಕೊಂಡಿದ್ದೇವೆ. ಅವರು ರಾಜಕಾರಣದಲ್ಲಿ ತನ್ನದೇ ಆದಂತಹ ಛಾಪನ್ನು ಉಳಿಸಿ ಹೋಗಿದ್ದಾರೆ.

ಇನ್ನು ಶ್ರೀ ಡಿ.ಸುಧಾಕರ್‌ರವರ ಬಗ್ಗೆ ಹೇಳುವುದಾದರೆ, ಸಣ್ಣ ಜಾತಿಯವರು ಚುನಾವಣೆಯಲ್ಲಿ ಗೆದ್ದು ಬರುವುದು ಸುಲಭವಲ್ಲ. ನಾವು ಎಷ್ಟೇ ಜಾತ್ಯಾತೀತ ಎಂದು ಭಾಷಣ ಮಾಡಿ, ಸಂವಿಧಾನ ಪೀಠಿಕೆಯನ್ನು ಓದಿದರೂ ಕೂಡ, ಪ್ರತಿ ಪಕ್ಷಗಳು ಟಿಕೆಟ್ ಕೊಡಬೇಕಾದರೆ ಜಾತಿ ಲೆಕ್ಕ ಹಾಕುತ್ತಾರೆ. ಮಂತ್ರಿ ಮಾಡಬೇಕಾದರೂ ಜಾತಿ ಲೆಕ್ಕ ಹಾಕುತ್ತಾರೆ. ಕೆ.ಪಿ.ಎಸ್.ಸಿ. ಎನ್ನುವಂತಹ ಪ್ರಾಮಾಣಿಕ ಪಾರದರ್ಶಕ ವ್ಯವಸ್ಥೆಯಲ್ಲಿ ನೇಮಕ ಮಾಡಬೇಕಾದರೂ ಜಾತಿ ಲೆಕ್ಕ ಹಾಕುತ್ತಾರೆ. ಅಂತಹದ್ದರಲ್ಲಿ ಸಣ್ಣ ಸಣ್ಣ ಜಾತಿಯವರು ಚುನಾವಣೆಯಲ್ಲಿ ಗೆದ್ದು ಬರುವುದು ಸುಲಭದ ಸಂಗತಿಯಲ್ಲ. ಒಂದು ಸಣ್ಣ ಸಮುದಾಯಕ್ಕೆ ಸೇರಿದ ಶ್ರೀ ಡಿ.ಸುಧಾಕರ್‌ರವರು ಚುನಾವಣೆಯಲ್ಲಿ ಗೆದ್ದು ಬಂದಿದ್ದಾರೆ ಎಂದರೆ, ಅವರ ಜನಪ್ರಿಯತೆಯೇ ಸಾಕ್ಷಿ ಇರಬಹುದೇನೋ ಎಂದು ನನಗನಿಸುತ್ತಿದೆ. ಏಕೆಂದರೆ, ಗೆಲ್ಲುವುದು ಅಷ್ಟು

ಸುಲಭದ ಸಂಗತಿಯಲ್ಲ. ಜಾತಿ ಭೂತವನ್ನು ಎಷ್ಟೇ ದೂರ ಇಡುವ ಪ್ರಯತ್ನ ಮಾಡಿದರೂ ಅದು ವ್ಯವಸ್ಥೆಯನ್ನೇ ಆವರಿಸಿಕೊಂಡು ಬಿಡುತ್ತದೆ. ಆವರಿಸಿಕೊಂಡಿರುವ ವ್ಯವಸ್ಥೆಯಲ್ಲಿ ಸಣ್ಣ ಸಣ್ಣ ಸಮುದಾಯದವರು ಗೆದ್ದು ಬರುವುದು ಸಾಮಾನ್ಯ ಸಂಗತಿಯಲ್ಲ. ಆ ತರಹ ಗೆದ್ದು ಸಚಿವರಾಗಿ, ಸಹಕಾರಿ ಧುರೀಣರಾಗಿ ಕಳೆದ 24-25 ವರ್ಷಗಳಂದ ಡಿ.ಸಿ.ಸಿ. ಬ್ಯಾಂಕ್ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿ, ತನ್ನದೇ ಆದಂತಹ ಪ್ರಭಾವ ವಲಯವನ್ನು ಹೊಂದಿದ್ದಂತಹ ಶ್ರೀ ಡಿ.ಸುಧಾಕರ್‌ರವರನ್ನು ನಾವು ಕಳೆದುಕೊಂಡಿದ್ದೇವೆ. ಅವರಿಗೆ ಸಾಯುವ ವಯಸ್ಸು ಆಗಿರಲಿಲ್ಲ ಎಂದು ನಮ್ಮ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ ಹೇಳುತ್ತಿದ್ದರು. ಸಾವು ಯಾವುದನ್ನು ಕೇಳುವುದಿಲ್ಲ, ಅದಕ್ಕೆ ಕಾರಣಗಳು ಬೇಕಾಗಿಲ್ಲ. ನಾವು ಎಷ್ಟೋ ಜನರನ್ನು ನೋಡಿದ್ದೇವೆ, ಅವರ ಲೈಫ್‌ಸ್ಟೈಲ್ ಸರಿ ಇರಲಿಲ್ಲ ಎಂದು ಹೇಳುತ್ತಾರೆ. ಲೈಫ್‌ಸ್ಟೈಲ್ ನೂರಕ್ಕೆ ನೂರು ಸರಿ ಇಟ್ಟುಕೊಂಡವರಿಗೂ ಸಾವು ಬಿಟ್ಟಿಲ್ಲ. ಆ ರೀತಿ ಸಾವಿಗೆ ಒಂದು ನೆಪ ಅಷ್ಟೆ. ಅವರನ್ನು ನಾವು ಕಳೆದುಕೊಂಡಿದ್ದೇವೆ.

ಶ್ರೀ ವೆಂಕಟರಮಣಪ್ಪನವರಿಗೂ ನನಗೂ ಒಂದು ತರಹ ಸಂಬಂಧ ಇದೆ. ನಾನು ಯಾವಾಗಲೂ ಅವರನ್ನು ತಾತಾ ಎಂದು ಕರೆಯುತ್ತಿದ್ದೆ. ತಾತಾ ಎಂದು ಕರೆದು ತಮಾಷೆ ಮಾಡುತ್ತಿದ್ದೆ. 'ಹುಣಸೆ ಮರ ಮುಪ್ಪಾದರೂ ಹುಳಿ ಮುಪ್ಪಾಗುವುದಿಲ್ಲ ಎಂದು ಹೇಳುತ್ತಾರೆ, ನಿನ್ನದೂ ಅದೇ ಕಥೆನಾ' ಎಂದು ನಾನು ಹೇಳುತ್ತಿದ್ದೆ. ನಾನು ತಾತಾ ಎಂದಾಗಲೆಲ್ಲಾ ಶ್ರೀ ವೆಂಕಟರಮಣಪ್ಪನವರು ಮೊಮ್ಮಗ ಎಂದು ಹೇಳುತ್ತಿದ್ದರು. 'ನೀನು ಬರೀ ಮೊಮ್ಮಗ ಎಂದು ಹೇಳುವ ಹಾಗೆ ಇಲ್ಲ, ಎಲ್ಲಾ ನನ್ನ ಹೆಸರಿಗೆ ಬರೆಯಬೇಕು' ಎಂದು ನಾನು ತಮಾಷೆ ಮಾಡುತ್ತಿದ್ದೆ. 'ಅದಕ್ಕೇನೂ ಮಗ, ಬರೆಯುತ್ತೇನೆ ತಗೋ' ಎಂದು ಹೇಳುತ್ತಿದ್ದರು. ಅಂದರೆ, ಈ ರೀತಿಯ ಒಂದು ಸಂಬಂಧ ಇಟ್ಟುಕೊಂಡು ಬಹಳ ಸರಳವಾಗಿ ಎಲ್ಲರ ಜೊತೆಯಲ್ಲೂ ಆತ್ಮೀಯವಾಗಿ ಬೆರೆಯುತ್ತಿದ್ದಂತಹ ಶ್ರೀ ವೆಂಕಟರಮಣಪ್ಪನವರು ನಮ್ಮನ್ನು ಅಗಲಿದ್ದಾರೆ.

ಕರ್ನಾಟಕದಲ್ಲಿ ಜನತಾ ಪಾರ್ಟಿ ಮೊದಲ ಬಾರಿಗೆ ರಾಜಕೀಯ ಪರ್ಯಾಯವನ್ನು ಕೊಟ್ಟಂತಹ ಒಂದು ಪಕ್ಷ. ನನಗೆ ನೆನಪಿದೆ, ಇವತ್ತು ಜನರನ್ನು ಸೇರಿಸಬೇಕೆಂದರೆ ಎಲ್ಲಾ ರಾಜಕೀಯ ಪಕ್ಷಗಳು ವಾಹನ ಕೊಡಬೇಕು. ವಾಹನ ಕೊಟ್ಟರೆ ಮಾತ್ರ ಸಾಕಾಗುವುದಿಲ್ಲ, ವ್ಯವಸ್ಥೆ ಮಾಡಬೇಕು. ಆದರೆ ಅವತ್ತಿನ ಕಾಲಘಟ್ಟದಲ್ಲಿ ಶ್ರೀ ರಾಮಕೃಷ್ಣ ಹೆಗ್ಗಡೆಯವರು ಪ್ರವಾಸ ಮಾಡುತ್ತಾರೆ ಎಂದು ಹೇಳಿದರೆ 12 ಗಂಟೆ, 1 ಗಂಟೆ, 2 ಗಂಟೆ ಆದರೂ ಜನ ಕಾಯುತ್ತಾ ಕುಳಿತ್ತಿರುವುದನ್ನು ನಾವು ಕಣ್ಣಾರೆ ನೋಡಿದ್ದೇವೆ. ಆಗ ನಾವು ಹೈಸ್ಕೂಲ್ ವಿದ್ಯಾರ್ಥಿಗಳಾಗಿ ಕಾಲೇಜು ಮೆಟ್ಟಿಲನ್ನು ಹತ್ತಿದ್ದಂತಹ ಕಾಲಘಟ್ಟದ ರಾಜಕಾರಣವನ್ನು ಹತ್ತಿರದಿಂದ ನೋಡಿದ್ದೇವೆ. ಆ ಕಾಲಘಟ್ಟದಲ್ಲಿ ಸಚಿವರಾಗಿ, ಇವತ್ತು ವಾಲ್ಮೀಕಿ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವುದಕ್ಕೆ ಒಂದು ಪೂರಕ ಶಕ್ತಿಯಾಗಿ ಕೆಲಸ ಮಾಡಿದಂತಹ ಶ್ರೀ ಸಿ.ವೀರಣ್ಣನವರನ್ನು ನಾವು ಅಗಲಿದ್ದೇವೆ.

ಶ್ರೀ ಎಚ್. ಹನುಮಂತಪ್ಪನವರ ಬಗ್ಗೆ ಹೇಳುವುದಾದರೆ, ಅವರು ಬರೀ ದಲಿತರ ಧ್ವನಿಯಾಗಿರಲಿಲ್ಲ. ಅವರು ಬರೀ ಮಾತನಾಡಲಿಲ್ಲ. ಅವರು ಶಿಕ್ಷಣದ ಮೂಲಕ ಬದಲಾವಣೆ ತರುವಂತಹ ಪ್ರಯತ್ನ ಮಾಡಿದರು. ಅವರು

ಶಿಕ್ಷಣ ಸಂಸ್ಥೆಗಳನ್ನು ಹುಟ್ಟಿ ಹಾಕಿದರು. ಆ ಮೂಲಕ ತನ್ನದೇ ಆದ ಕೊಡುಗೆಯನ್ನು ಕೊಟ್ಟಂಥ ಶ್ರೀ ಎಚ್. ಹನುಮಂತಪ್ಪರವರನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ.

ಡಾ॥ ಎಸ್.ಆರ್. ರಾಮಸ್ವಾಮಿಯವರ ಬಹುತೇಕ ಪುಸ್ತಕಗಳನ್ನು ನಾನು ಓದಿದ್ದೇನೆ. 'ಶತಮಾನದ ತಿರುವಿನಲ್ಲಿ ಭಾರತ', 'ದೀವಟಿಕೆಗಳು', 'ಸ್ವದೇಶಿ ಜಾಗೃತಿ', ಈ ರೀತಿಯ ಪ್ರಸಿದ್ಧ ಪುಸ್ತಕಗಳನ್ನು ಅವರು ಬರೆದಿದ್ದಾರೆ. ಹೀಗೆ ಅಪ್ಪಟ ಒಬ್ಬ ರಾಷ್ಟ್ರ ಪ್ರೇಮಿಯಾಗಿ, ಭಾರತ ಆತ್ಮ ನಿರ್ಭರವಾಗಬೇಕು ಎನ್ನುವ ಹಂಬಲ ಹೊತ್ತು, ತನಗೆ ಇದ್ದಂತಹ ಎಲ್ಲಾ ಅವಕಾಶಗಳನ್ನು ಅಂದರೆ, ಉತ್ತಮ ಅವಕಾಶಗಳು ಇದ್ದರೂ ಕೂಡ ಅದನ್ನು ಬಿಟ್ಟು ಹಣದ ಹಿಂದೆ ಹೋಗದೆ, ಒಂದು ವಿಚಾರಕ್ಕಾಗಿ ಕೆಲಸ ಮಾಡುತ್ತಾ ತನ್ನ ಬದುಕನ್ನು ಒಬ್ಬ ತಪಸ್ವಿಯಂತೆ ಜೀವನವನ್ನು ಕಳೆದವರು ಡಾ॥ ಎಸ್.ಆರ್.ರಾಮಸ್ವಾಮಿಯವರಾಗಿದ್ದಾರೆ.

(ಮುಂದು)

**(669) 13/08/2026 12:20 ಎಸ್‌ಪಿಆರ್/ವಿಕೆ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಸಿ.ಟಿ.ರವಿ (ಮುಂದು):**

ಆ ಕಾಲದಲ್ಲಿಯೇ ಅವರು 'ಸುಧಾ' ವಾರಪತ್ರಿಕೆಗೆ ಉಪ ಸಂಪಾದಕರಾಗಿ ಹಾಗೂ ಹತ್ತಾರು ಪತ್ರಿಕೆಗಳಲ್ಲಿ ಕೆಲಸ ಮಾಡುತ್ತಾ, 9-10 ಭಾಷೆಗಳಲ್ಲಿ ಅತ್ಯಂತ ಸಹಜವಾಗಿ ಮಾತೃ ಭಾಷೆಯಷ್ಟೇ ಪ್ರೌಢಿಮೆಯನ್ನು ಹೊಂದಿದ್ದರು. ಇವರು ನಮ್ಮನ್ನು ಅಗಲಿದ್ದಾರೆ.

ಶ್ರೀಮತಿ ಆಶಾ ಬೋಂಸ್ಲೆ ರವರು ತಮ್ಮ ಸಾಧನೆಯ ಮೂಲಕವೇ ಜನಪ್ರಿಯರಾಗಿದ್ದರು. ಇದೇ ರೀತಿಯಾಗಿ ಡಾ॥ ಎಸ್.ಜಾನಕಿ ರವರೂ ಸಹ ಜನಪ್ರಿಯರಾಗಿದ್ದರು.

ಶ್ರೀ ರಾಮಚಂದರ್ ಬೈಕಂಪಾಡಿ ರವರು ಮೀನುಗಾರರ ಸಂಘಟನೆಯನ್ನು ಕಟ್ಟಿ, ಹೋರಾಟವನ್ನು ಮಾಡಿದ್ದರು. ಮೀನುಗಾರರ ಪ್ರಕೋಷ್ಠದ ಅಧ್ಯಕ್ಷರಾಗಿ ಹಾಗೂ ಮೀನುಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು.

ಡಾ॥ ಗಿರೀಶ ಭಾರದ್ವಾಜ್ ರವರು ಸೇತುವೆಗಳ ಸರದಾರರಾಗಿ ಹಾಗೂ ನಮ್ಮ ರಾಜ್ಯಕ್ಕೆ ತೂಗು ಸೇತುವೆಯನ್ನು ಪರಿಚಯಿಸಿ, ಈ ಮೂಲಕ ತಮ್ಮದೇ ಆದ ಹೆಸರನ್ನು ಸಂಪಾದಿಸಿದ್ದರು.

ಶ್ರೀ ಸಿ.ಎನ್.ಮುಕ್ತಾ ಮತ್ತು ಪ್ರೋ.ಎ.ವಿ.ನರಸಿಂಹಮೂರ್ತಿ ರವರೂ ಸಹ ನಮ್ಮನ್ನು ಅಗಲಿದ್ದಾರೆ.

ಶ್ರೀಮತಿ ಚೆನ್ನಮ್ಮ ರವರ ಬಗ್ಗೆ ಹೇಳಲೇಬೇಕಾಗುತ್ತದೆ. ಯಾವುದೇ ಒಬ್ಬ ಯಶಸ್ವಿ ಪುರುಷನ ಹಿಂದೆ ಮಹಿಳೆ ಇರುತ್ತಾರೆ ಎನ್ನುವುದು ಗಾದೆ ಮಾತಿಗೆ ಸಾಕ್ಷಿಯಾಗುವ ರೀತಿಯಲ್ಲಿ ಚೆನ್ನಮ್ಮನವರ ಬದುಕು ಇದೆ. ಇವರ ಯಜಮಾನರು ರಾಜ್ಯದ ಮುಖ್ಯಮಂತ್ರಿ ಹಾಗೂ ದೇಶದ ಪ್ರಧಾನ ಮಂತ್ರಿಯಾಗಿದ್ದರೂ ಕೂಡ ಇವರು ಬಹಳ ಮುಂಚೂಣಿಯಲ್ಲಿ ಕಾಣಿಸಿಕೊಂಡವರಲ್ಲ. ಬಹುಶಃ ನನಗೆ ಆ ನೆಲೆಯಲ್ಲಿ ಮಾಜಿ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ನವರ ಧರ್ಮಪತ್ನಿಯೂ ಸಹ ನೆನಪಾಗುತ್ತಾರೆ. ಇವರೂ ಸಹ ಯಾವುದೇ ಟಿ.ವಿ., ಪತ್ರಿಕೆ ಮತ್ತು ಫೋಟೋಗಳಲ್ಲಿ

ಎಲ್ಲಿಯೂ ಕಾಣಿಸಿಕೊಂಡವರಲ್ಲ. ಶ್ರೀಮತಿ ಚೆನ್ನಮ್ಮ ರವರೂ ಸಹ ಹಾಗೆಯೇ ಎಲ್ಲಿಯೂ ಕಾಣಿಸಿಕೊಂಡವರಲ್ಲ. ಆದರೆ, ನಾನು ತಿಳಿದುಕೊಂಡಿದ್ದೇನೆಂದರೆ, ಅವರ ಮನೆಗೆ ಬಂದವರನ್ನೆಲ್ಲಾ ಅವರು ಸಂಭಾಳಿಸುತ್ತಿದ್ದರಂತೆ. ಬಹುಶಃ ಶ್ರೀ ದೇವೇಗೌಡರ ಆ ಎಲ್ಲಾ ಯಶಸ್ಸಿನ ಮೆಟ್ಟಿಲಿನ ಹಿಂದೆ ಇವರು ಇದ್ದರು. ಏಕೆಂದರೆ, ಚೆನ್ನಾಗಿದ್ದವರು ಹಾಗೂ ಪ್ರಭಾವವಿದ್ದವರು ರಾಜಕೀಯ ಮೆಟ್ಟಿಲನ್ನು ಏರುವುದು ಸ್ವಾಭಾವಿಕ. ಆದರೆ, ಶ್ರೀ ದೇವೆಗೌಡರ ರಾಜಕೀಯ ಆರಂಭ ಪ್ರಭಾವ ವಲಯದಿಂದ ಪ್ರಾರಂಭಗೊಂಡ ರಾಜಕೀಯ ಆರಂಭವಲ್ಲ. ಸಾಮಾನ್ಯ ಒಬ್ಬ ರೈತ ಕುಟುಂಬದ ಮನುಷ್ಯ ಒಂದೊಂದು ಮೆಟ್ಟಿಲನ್ನು ಹತ್ತುತ್ತಾ ಹತ್ತುತ್ತಾ ರಾಜಕೀಯವಾಗಿ ಈ ದೇಶದ ಅತ್ತ್ಯುನ್ನತ ಸ್ಥಾನವನ್ನು ಏರುವುದು, ಆ ಸ್ಥಾನವನ್ನು ಏರುವುದಕ್ಕೆ ಬಹುಶಃ ಇವರು ಮನೆಯನ್ನು ಮುನ್ನಡೆಸಿ, ಮನೆಗೆ ಬಂದವರೆಲ್ಲರನ್ನೂ ಅನ್ನಪೂರ್ಣೇಶ್ವರಿಯಾಗಿ ಪ್ರೀತಿಯಿಂದ ನೋಡಿಕೊಂಡಿದ್ದು ಕೂಡ ಒಂದು ಕಾರಣವಿರಬಹುದು ಎಂದು ಅನ್ನಿಸುತ್ತದೆ. ಏಕೆಂದರೆ, ರಾಜಕಾರಣದಲ್ಲಿ ಬಹಳ ಬೇಗ upset ಆಗುತ್ತಾರೆ. ಯಾರು upset ಆಗುವವರು ಎಂದರೆ, ಯಾರು ನಮ್ಮ ಹತ್ತಿರದಲ್ಲಿ ಇರುತ್ತಾರೆಯೋ, ಅವರೇ ಆಗುತ್ತಾರೆ. ಹತ್ತಿರದಲ್ಲಿ ಇದ್ದವರನ್ನು ಕಟ್ಟಿ ಹಾಕುವುದಕ್ಕೆ ಸಾಧ್ಯ ಇರುವುದು ಕೇವಲ ಪ್ರೀತಿ ಮಾತ್ರ. ಆ ರೀತಿಯಾಗಿ ಒಂದು ಪ್ರೀತಿಯ ಬಾಂಧವ್ಯವನ್ನು ಹರಿಸುವಂತಹ ಕೆಲಸವನ್ನು ಮಾತೃಶ್ರೀ ಚೆನ್ನಮ್ಮ ರವರು ಮಾಡಿದ್ದಾರೆ ಎಂದು ಭಾವಿಸುತ್ತೇನೆ. ಅಗಲಿದ ಎಲ್ಲಾ ಚೇತನಗಳಿಗೆ ಭಗವಂತ ಸದ್ಗತಿಯನ್ನು ದಯಪಾಲಿಸಲಿ. ಅವರುಗಳ ಆತ್ಮಕೆ ಸದ್ಗತಿ ದೊರಕಲಿ ಎಂದು ಪ್ರಾರ್ಥಿಸಿ, ತಾವು ತಂದಿರುವ ಸಂತಾಪ ಸೂಚನಾ ನಿರ್ಣಯಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ. ನಮಸ್ಕಾರ.

**ಸಭಾಪತಿಯವರು:-** ತುಂಬಾ ಜನ ಮಾತನಾಡಬೇಕು ಎಂದು ಹೇಳಿರುವುದರಿಂದ ಎಲ್ಲರೂ ಐದು ನಿಮಿಷಗಳ ಅವಧಿಯಲ್ಲಿ ಮುಗಿಸಿ.

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮೃತ ಗಣ್ಯ ವ್ಯಕ್ತಿಗಳಿಗೆ ತಾವು ತಂದಿರುವ ಈ ಸಂತಾಪ ಸೂಚನೆಗೆ ನನ್ನ ಸಹಮತವನ್ನು ತಿಳಿಸುತ್ತೇನೆ. ಶ್ರೀ ರಾಮಚಂದ್ರಗೌಡ, ಶ್ರೀ ಡಿ.ಸುಧಾಕರ್, ಶ್ರೀ ವೆಂಕಟರಮಣಪ್ಪ, ಶ್ರೀ ಸಿ.ವೀರಣ್ಣ, ಶ್ರೀ ಹೆಚ್.ಹನುಮಂತಪ್ಪ, ಡಾ॥ ಎಸ್.ಆರ್.ರಾಮಸ್ವಾಮಿ, ಶ್ರೀಮತಿ ಆಶಾ ಬೋಂಸ್ಲೆ, ಶ್ರೀ ರಾಮಚಂದರ್ ಬೈಕಂಪಾಡಿ, ಡಾ॥ ಗಿರೀಶ್ ಭಾರದ್ವಾಜ್, ಡಾ॥ ಎಸ್.ಜಾನಕಿ, ಶ್ರೀ ಸಿ.ಎನ್‌ಮುಕ್ತಾ, ಪ್ರೊ॥ ಎ.ವಿ.ನರಸಿಂಹಮೂರ್ತಿ ಹಾಗೂ ಶ್ರೀಮತಿ ಚೆನ್ನಮ್ಮ ದೇವೇಗೌಡಜಿ ರವರುಗಳ ಅಗಲಿಕೆಗೆ ಸಂತಾಪ ಸೂಚನೆಯನ್ನು ಮಂಡಿಸಲಾಗಿದೆ. ವಿರೋಧ ಪಕ್ಷದ ನಾಯಕರು ಮತ್ತು ಶ್ರೀ ಸಿ.ಟಿ. ರವಿ ಇವರುಗಳು ಬಹುಶಃ ಎಲ್ಲವನ್ನೂ ಹೇಳಿದ್ದಾರೆ. ಹೀಗಾಗಿ ನಾನು ಅದನ್ನು repeat ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ರಾಮಚಂದ್ರಗೌಡರ ಬಗ್ಗೆ ಹೇಳುವುದಾದರೆ, ನಾನು ಮೊದಲ ಬಾರಿಗೆ ಇಲ್ಲಿ ಸದನಕ್ಕೆ ಬಂದಾಗ, ಅವರು ನಮಗೆ ಎಲ್ಲಾ ರೀತಿಯಲ್ಲಿ ಮಾರ್ಗದರ್ಶನವನ್ನು ಕೊಟ್ಟಿರುವ ಒಬ್ಬ ಹಿರಿಯ ಧುರೀಣರು ಆಗಿದ್ದಾರೆ. ಇವರು ನಾಲ್ಕು ಬಾರಿ ಈ ಸದನದ ಶಾಸಕರಾಗಿ, ಸಚಿವರಾಗಿ ಎಲ್ಲಾ ರೀತಿಯಲ್ಲಿ ಯುವಕರಿಗೆ ಸ್ಫೂರ್ತಿದಾಯಕವಾಗಿ ಬಹಳಷ್ಟು ಕೆಲಸಗಳನ್ನು ಮಾಡಿದ್ದಾರೆ.

ಮತ್ತೋಬ್ಬ ಆತ್ಮೀಯರಾದ ಶ್ರೀ ಡಿ.ಸುಧಾಕರ್ ರವರು ನಮ್ಮ ತರಹದಂತೆ ಸಣ್ಣ ಸಮಾಜದಿಂದ ಬಂದವರಾಗಿದ್ದರು. ಇವರು ಬಹುಶಃ ಚಳ್ಳಕೆರೆ ವಿಧಾನಸಭಾ ಕ್ಷೇತ್ರದಿಂದ ನಿರಂತರವಾಗಿ ಆಯ್ಕೆಗೊಂಡು, ಎರಡು ಬಾರಿ ಸಚಿವರಾಗಿದ್ದು, ಸಜ್ಜನರಾಗಿದ್ದು, ಬಹಳಷ್ಟು ಜನರ ಪ್ರೀತಿಯನ್ನು ಗಳಿಸಿ, ಕೆಲಸ ಮಾಡಿರುವ ಹಿರಿಯ ಗಣ್ಯರು ಆಗಿದ್ದಾರೆ.

ಮತ್ತೋರ್ವರಾದ ಪಾವಗಡ ಕ್ಷೇತ್ರದ ಶ್ರೀ ವೆಂಕಟರಮಣಪ್ಪ ರವರೂ ಕೂಡ ತುಂಬಾ ಸಜ್ಜನ ವ್ಯಕ್ತಿಯಾಗಿದ್ದು, ಹಿರಿಯರು ಆಗಿದ್ದರು. ಇವರು ಎಲ್ಲರನ್ನೂ ಬಹಳ ಪ್ರೀತಿಯಿಂದ ನೋಡುವ ವ್ಯಕ್ತಿತ್ವವನ್ನು ಹೊಂದಿದ್ದು, ಮಾಜಿ ಸಚಿವರಾಗಿದ್ದರು.

ನಾನು ಶ್ರೀಮತಿ ಚೆನ್ನಮ್ಮಜಿ ರವರ ಬಗ್ಗೆ ಹೇಳಲೇಬೇಕಾಗುತ್ತದೆ. ಏಕೆಂದರೆ, ಅವರ ಹಾಗೂ ನನ್ನ ಒಡನಾಟ ಕಳೆದ 30 ವರ್ಷಗಳಿಂದ ಇದೆ. ಬಹುಶಃ ನಾನು ರಾಜಕೀಯಕ್ಕೆ ಬರಬೇಕಾಗಿದ್ದರೆ, ಚೆನ್ನಮ್ಮಜಿ ರವರ ಪ್ರೇರಣೆ, ಸ್ಫೂರ್ತಿ ಕಾರಣ. ಅವರು ನನಗೆ ಕೊಟ್ಟಿರುವ encouragement ಬಹಳಷ್ಟು ಇದೆ. ಇವರು ನನಗೆ, "ನೀನು ಏನು ಅಂದುಕೊಂಡಿದ್ದೀಯಾ, ಆ ಛಲ ಬಿಡಬಾರದು, ಮುಂದಕ್ಕೆ ಹೋಗು, ನಿನ್ನ ಜೊತೆಯಲ್ಲಿ ನಾನಿದ್ದೇನೆ" ಎಂದು ಹೇಳಿ, ನನ್ನನ್ನು ಹುರಿದುಂಬಿಸಿದ್ದರು. ಶ್ರೀ ದೇವೇಗೌಡರ ಜೊತೆಯಲ್ಲಿ ಹಾಗೂ ಎಲ್ಲಾ ರೀತಿಯಲ್ಲಿಯೂ ಸಹ ಅವರು ಕೊಟ್ಟಿರುವ ಸಹಕಾರವನ್ನು ಈ ಸಂದರ್ಭದಲ್ಲಿ ನಾನು ನೆನೆಸಿಕೊಳ್ಳಲಿಕ್ಕೆ ಬಯಸುತ್ತೇನೆ. ಇದರ ಜೊತೆಗೆ ಹೇಳುವುದಾದರೆ, ಇವರು ರಾಜ್ಯದ ಮುಖ್ಯಮಂತ್ರಿಗಳ ಹಾಗೂ ದೇಶದ ಪ್ರಧಾನ ಮಂತ್ರಿಗಳ ಧರ್ಮಪತ್ನಿಯಾಗಿ ಹಾಗೂ ಇವರ ಮಗ ರಾಜ್ಯದ ಒಬ್ಬ ಮುಖ್ಯಮಂತ್ರಿಯಾಗಿ ಹಾಗೂ ಈಗಿನ ಒಬ್ಬ ಕೇಂದ್ರ ಸಚಿವರಾಗಿದ್ದಾರೆ. ಮತ್ತೊಬ್ಬ ಮಗ ಮಾಜಿ ಸಚಿವರಾಗಿದ್ದಾರೆ. ಇಷ್ಟೆಲ್ಲಾ ದೊಡ್ಡ ಕುಟುಂಬದಿಂದ ಬಂದಿದ್ದರೂ ಸಹ ಇವರು ಎಲ್ಲಿಯೂ ಕೂಡ ಒಂದು ಸಣ್ಣ ಪ್ರಚಾರವಾಗಲೀ ಅಥವಾ ಬೇರೆ ರೀತಿಯಲ್ಲಿ ಅವರು ತೋರ್ಪಡಿಕೆ ಮಾಡಿಕೊಳ್ಳುವುದಾಗಲೀ ಎಲ್ಲಿಯೂ ಸಹ ಮಾಡದೇ, ಸರಳತೆ, ಸಜ್ಜನಿಕೆ ಹಾಗೂ ದೈವ ಸ್ವರೂಪ ಆಗಿದ್ದರು. ನಾವು ಇವರನ್ನು ದೈವ ಭಕ್ತರು ಎಂದು ಕರೆಯುತ್ತೇವೆ. ಬೆಳಗ್ಗೆ 3-4 ಗಂಟೆಗೆ ಎದ್ದು, ತುಳಸೀ ಪೂಜೆ ಮಾಡುವುದರಿಂದ ಆರಂಭಗೊಂಡು ಅಪರಾಹ್ನ 12 ಗಂಟೆಯಾದರೂ ಸಹ ತಿಂಡಿಯನ್ನೂ ತಿನ್ನದೇ ಇರುತ್ತಿದ್ದರು. ಇಂತಹ ದೈವ ಸ್ವರೂಪಿಯನ್ನು ನಾವು ಅನ್ನಪೂರ್ಣೇಶ್ವರಿ ಎಂತಲೂ ಸಹ ಕರೆಯುತ್ತೇವೆ. ಏಕೆಂದರೆ, ಇವತ್ತಿನ ದಿವಸ ನಾವು ರಾಜಕಾರಣವನ್ನು ಮಾಡುತ್ತಿದ್ದೇವೆ; ಇಲ್ಲವೆಂತಲ್ಲ. ಜೆ.ಡಿ.ಎಸ್., ಬಿ.ಜೆ.ಪಿ. ಅಥವಾ ಕಾಂಗ್ರೆಸ್ ಪಕ್ಷಗಳಿರಬಹುದು, ಮೂರು ಪಕ್ಷದವರೂ ಸಹ ಆ ಮನೆಗೆ ಬಂದು, ಆ ಮಹಾತಾಯಿಯ ತುತ್ತು ಅನ್ನವನ್ನು ಸೇವಿಸಿದವರೆಲ್ಲಾ ಇವತ್ತಿನ ದಿವಸ ಎಲ್ಲಾ ಪಕ್ಷಗಳಲ್ಲಿ ಹಿರಿಯ ನಾಯಕರುಗಳಾಗಿ, ಮುಖ್ಯಮಂತ್ರಿಯಾಗಿ, ಮಂತ್ರಿಗಳಾಗಿ ರಾಜಕೀಯ ಕ್ಷೇತ್ರದಲ್ಲಿ ದೊಡ್ಡ ಸ್ಥಾನಕ್ಕೆ ಬೆಳೆದಿದ್ದಾರೆ. ಆ ಎಲ್ಲಾ ಗಣ್ಯರೂ ಸಹ ಇವತ್ತಿನ ದಿವಸ ಪಕ್ಷಾತೀತವಾಗಿ ಆ ಮಹಾತಾಯಿ ಶ್ರೀಮತಿ ಚೆನ್ನಮ್ಮಜಿ ರವರ ಒಂದು ಅಂತಿಮ ದರ್ಶನ ಪಡೆಯಲಿಕ್ಕೆ ಬಂದಿದ್ದರು. ಅಂತಿಮ ದರ್ಶನ ಪಡೆಯಲು ಬಂದ ಜನಸಾಗರವನ್ನು ನೋಡಿ ನಾವುಗಳೆಲ್ಲರೂ ಕೂಡ ಅರ್ಥ ಮಾಡಿಕೊಳ್ಳುವ ಅವಶ್ಯಕತೆ ಇದೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ

ಹೇಳಲಿಕ್ಕೆ ಬಯಸುತ್ತೇನೆ. ಏಕೆಂದರೆ, ಇನ್ನೊಬ್ಬ ಕನ್ನಡಿಗರು ಈ ದೇಶದ ಪ್ರಧಾನ ಮಂತ್ರಿಯಾಗುತ್ತಾರೆಯೋ ಅಥವಾ ಇಲ್ಲವೋ ಎನ್ನುವುದು ನನಗೆ ಗೊತ್ತಿಲ್ಲ. ಆದರೆ, ಒಬ್ಬ ಕನ್ನಡಿಗ ದೆಹಲಿಯ ಕೆಂಪು ಕೋಟೆಯಲ್ಲಿ ಆ ಬಾವುಟವನ್ನು ಹಾರಿಸಿ, ಪ್ರಧಾನ ಮಂತ್ರಿ ಹುದ್ದೆಗೆ ಹೋಗಬೇಕಾಗಿದ್ದರೆ, ಅದು ಸುಲಭದ ಕೆಲಸವಲ್ಲ. ಇದಕ್ಕೆ ಸ್ಫೂರ್ತಿ ಆದಿಯಾಗಿ ಎಲ್ಲಾ ರೀತಿಯಲ್ಲಿಯೂ ಜೊತೆ ಜೊತೆಯಲ್ಲಿ ನಿಂತು ಅವರು ಈ ಒಂದು ಉನ್ನತ ಸ್ಥಾನಕ್ಕೆ ಬರುವುದಕ್ಕೆ ಶ್ರೀಮತಿ ಚೆನ್ನಮ್ಮಜಿ ರವರ ಕೊಡುಗೆ ಅಪಾರವಾದುದು ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಯಾರೇ ಇವರ ಮನೆ ಬಾಗಿಲಿಗೆ ಬರಲಿ, ಅವರು ಬಂದಾಗ ಅವರಿಗೆ ಗೌರವವನ್ನು ಕೊಟ್ಟು, ಅವರನ್ನು ಪ್ರೀತಿಯಿಂದ ಮಾತನಾಡಿಸಿ, ಊಟ ಮಾಡಿ ಎಂದು ಹೇಳುವುದರ ಜೊತೆಗೆ, ಎಲ್ಲಾ ರೀತಿಯಿಂದಲೂ ಸಹ ಶ್ರೀ ದೇವೇಗೌಡ ಸಾಹೇಬರ ಜೊತೆ ಜೊತೆಯಲ್ಲಿ ನಿಂತು ಅವರಿಗೆ ಎಲ್ಲಾ ರೀತಿಯಿಂದಲೂ ಸಹಕಾರವನ್ನು ಕೊಟ್ಟಿರುವ ಆ ತಾಯಿ ಶ್ರೀಮತಿ ಚೆನ್ನಮ್ಮಜಿ ರವರು ಶ್ರೀ ದೇವೇಗೌಡ ಸಾಹೇಬರ ದೇವತೆಯಾಗಿದ್ದರು. ಇವರು ಒಂದು ದಿನ ಕೂಡ ಸಾಯಂಕಾಲದ ಹೊತ್ತಿನಲ್ಲಿ ಮಾನ್ಯ ಹೆಚ್.ಡಿ.ದೇವೇಗೌಡರನ್ನು ಬಿಟ್ಟು ಊಟ ಮಾಡಿದವರಲ್ಲ. ಅವರು ಲೇಟಾಗಿ ಬಂದರೂ ಸಹ, ರಾಜಕೀಯ ಒತ್ತಡಗಳಿದ್ದರೂ ಸಹ ಶ್ರೀ ದೇವೇಗೌಡರ ಜೊತೆಯಲ್ಲಿ ಕುಳಿತು ಊಟ ಮಾಡುವವರೆಗೂ ಕಾಯುತ್ತಿರುತ್ತಿದ್ದರು. ಆಗ ಅವರೊಂದಿಗೆ ಮಾತನಾಡಿ, ಅವರ ಕಷ್ಟಗಳನ್ನು, ಕುಟುಂಬದಲ್ಲಾಗಲೀ ಅಥವಾ ಯಾವುದೇ ಸಮಸ್ಯೆಗಳು ಬರಲಿ, ಇವರೇ ಮುಂದೆ ನಿಲ್ಲುತ್ತಿದ್ದರು. ಇವರದ್ದನ್ನು ನಾವು ದೊಡ್ಡ ಕುಟುಂಬ ಎಂದು ಕರೆಯುತ್ತೇವೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಶ್ರೀ ರಾಜ್ ಕುಮಾರ್ ರವರ ಕುಟುಂಬವನ್ನು ದೊಡ್ಡ ಕುಟುಂಬ ಎಂದು ಹೇಳುತ್ತೇವೆ. ಇದೇ ರೀತಿಯಾಗಿ ಶ್ರೀ ದೇವೇಗೌಡರ ಕುಟುಂಬವನ್ನೂ ಸಹ ದೊಡ್ಡ ಕುಟುಂಬ ಎಂದು ಕರೆಯುತ್ತೇವೆ. ರಾಜಕೀಯವಾಗಿ ಏನೇ ಇರಲಿ, ಇಲ್ಲಿ ಏನೇ ಬರಲಿ ಅಥವಾ ಹೋಗಲಿ, ಆದರೆ ಶ್ರೀಮತಿ ಚೆನ್ನಮ್ಮಜಿ ರವರ ಒಂದು ಪಾತ್ರವಿತ್ತಲ್ಲ, ಅದನ್ನು ತುಂಬಾ ಚೆನ್ನಾಗಿ ಅಚ್ಚುಕಟ್ಟಾಗಿ ಆ ಕುಟುಂಬವನ್ನು ಯಶಸ್ವಿಯಾಗಿ ನಡೆಸುವುದರಲ್ಲಿ ಹಾಗೂ ಎಲ್ಲಾ ರೀತಿಯಿಂದಲೂ ಇವರು ಯಶಸ್ವಿಯಾಗಿದ್ದರು.

(ಮುಂದು)

(670)13-08-2026/12-30/bkp-vk (ಸಭಾಪತಿಯವರ ಉಪಸ್ಥಿತಿ)

**ಶ್ರೀ ಟಿ.ಎ. ಶರವಣ(ಮುಂದು):**

ನಾನು ಕೂಡ ಅಂದು ಮಧ್ಯಾಹ್ನ ಸುಮಾರು 12-30 ಗಂಟೆಗೆ ಆಸ್ಪತ್ರೆಗೆ ಹೋಗಿ ಅವರನ್ನು ನೋಡಿಕೊಂಡು ಬಂದಿದ್ದೆನು. ದೇವರ ದಯೆಯಿಂದ ಅವತ್ತು ಅವರು ಚೇತರಿಸಿಕೊಳ್ಳುತ್ತಿದ್ದರು. ಪರವಾಗಿಲ್ಲ ಎಂದು ಅಲ್ಲಿ ಇದ್ದವರಿಗೆ ಹೇಳಿ ಬಂದ ಎರಡು ಗಂಟೆಯಲ್ಲಿಯೇ ಅವರ ವಿಚಾರವಾಗಿ ಶಾಕಿಂಗ್ ನ್ಯೂಸ್ ಬಂತು. ಇದರಿಂದ ನಮಗೆಲ್ಲರಿಗೂ ಆಘಾತವಾಗಿದೆ. ಅಂತಹ ತಾಯಿಯನ್ನು ನಾವು ಇಂದು ಕಳೆದುಕೊಂಡಿದ್ದೇವೆ. ಅದಕ್ಕೋಸ್ಕರ ನಾನು ಸರ್ಕಾರಕ್ಕೆ ಮನವಿ ಮಾಡುವುದಿಷ್ಟೆ. ಬಹುಶಃ ರಾಜಕೀಯದಲ್ಲಿ ಅಧಿಕಾರ ಎನ್ನುವುದು ಯಾರಿಗೂ ಶಾಶ್ವತ ಇರುವುದಿಲ್ಲ. ಇದ್ದಂತಹ ಸಂದರ್ಭದಲ್ಲಿ ಏನು ಒಳ್ಳೆಯ

ಕೆಲಸ ಮಾಡುತ್ತೇವೆಯೋ ಅದನ್ನು ಜನರು ನೆನಪು ಮಾಡಿಕೊಳ್ಳುತ್ತಾರೆ. ಉಸಿರು ಹೋದ ಮೇಲೆಯೂ ಕೂಡ ಹೆಸರು ಉಳಿಯಬೇಕಂತೆ. ಅಂತಹ ಶಾಶ್ವತ ಕಾರ್ಯಕ್ರಮಗಳು ಯಾವುದಾದರೂ ಆಗಬೇಕೆನ್ನುವುದು ನನ್ನ ಉದ್ದೇಶವಾಗಿದೆ. ಅದಕ್ಕೋಸ್ಕರ ಆ ತಾಯಿಯನ್ನು ನಾವು ಅನ್ನಪೂರ್ಣೇಶ್ವರಿ ಎಂದು ಏನು ಕರೆಯುತ್ತಿದ್ದೆವು, ಆ ಅನ್ನಪೂರ್ಣೇಶ್ವರಿ ಹೆಸರಿಗೆ ತಕ್ಕಂತೆ ಅವರ ನೆನಪಿಗೋಸ್ಕರ ಒಂದು ಕೆಲಸ ಮಾಡಬೇಕಾಗಿದೆ. ಈಗ ಸ್ವಲ್ಪ ಸಮಯದಲ್ಲಿ ಶಿಕ್ಷಣ ಸಚಿವರಾದ ಶ್ರೀಮಾನ್ ಮಧು ಬಂಗಾರಪ್ಪನವರು ಈ ಸದನದಲ್ಲಿ ಕುಳಿತಿದ್ದರು. ಅವರು ಹೊರಗಡೆ ಹೋದರೆಂದು ಕಾಣುತ್ತದೆ. ಅವರ ಬದಲಿಗೆ ನಾನು ಮಾನ್ಯ ಸಭಾ ನಾಯಕರಲ್ಲಿ ಮನವಿ ಮಾಡುವುದೇನೆಂದರೆ, ಈ ಸರ್ಕಾರಿ ಶಾಲೆಗಳಲ್ಲಿ ಮಧ್ಯಾಹ್ನದ ಸಮಯದಲ್ಲಿ ಬಿಸಿ. ಊಟ ಎಂದು ಏನು ತಾವು ಕೊಡುತ್ತಿದ್ದೀರಿ, ಅದಕ್ಕೆ ಚೆನ್ನಮ್ಮಾಜಿಯವರ ಹೆಸರನ್ನು ಸೇರಿಸಿ, "ಚೆನ್ನಮ್ಮಾಜಿ ಅನ್ನಪೂರ್ಣೇಶ್ವರಿ ಬಿಸಿ ಊಟ" ಎನ್ನುವ ರೀತಿಯಲ್ಲಿ ಆ ಚೆನ್ನಮ್ಮಾಜಿ ಹೆಸರು ಬರುವ ರೀತಿಯಲ್ಲಿ ಮಾಡುವುದರ ಮೂಲಕ ಅವರ ಹೆಸರು ಉಳಿಯುವಂತೆ ಮಾಡಬೇಕು. ಅದಕ್ಕೋಸರ ಈ ನಿಟ್ಟಿನಲ್ಲಿ ತಾವು ಚಿಂತನೆ ಮಾಡಿ, ಅದನ್ನು ಅನುಷ್ಠಾನಕ್ಕೆ ತರಬೇಕೆಂದು ಹೇಳಿ ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತಿದ್ದೇನೆ. ಜೊತೆಗೆ ಈ ಸಮಯದಲ್ಲಿ ಅಗಲಿರತಕ್ಕಂತಹ ಇನ್ನೂ 13 ಜನರ ಹೆಸರನ್ನು ತಾವು ಏನು ತಂದಿದ್ದೀರಿ, ಇವರುಗಳ ನಿಧನದಿಂದಾಗಿ ಇವರ ಅಭಿಮಾನಿಗಳಿಗೆ ಮತ್ತು ಅವರ ಕುಟುಂಬ ವರ್ಗದವರಿಗೆ ಆಗಿರುವಂತಹ ದುಃಖವನ್ನು ಭರಿಸತಕ್ಕಂತಹ ಶಕ್ತಿಯನ್ನು ಭಗವಂತನು ಕರುಣಿಸಲಿ ಎಂದು ಮೃತರ ಆತ್ಮಕ್ಕೆ ಶಾಂತಿ ಸಿಗಲೆಂದು ನಾನು ಭಗವಂತನಲ್ಲಿ ವಿಶೇಷವಾಗಿ ಪ್ರಾರ್ಥನೆ ಮಾಡುತ್ತೇನೆ. ನಮಸ್ಕಾರ.

**ಶ್ರೀಮತಿ ಬಲ್ಕೀಸ್ ಬಾನು(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನನಗೆ ಈ ಬಗ್ಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ಧನ್ಯವಾದಗಳು. ಇವತ್ತು ಮಂಡಿಸಿರುವಂತಹ ಈ ಒಂದು ಸಂತಾಪ ಸೂಚನೆಗೆ ಸಂಬಂಧಪಟ್ಟಂತೆ ಹಿರಿಯ ವ್ಯಕ್ತಿಗಳ, ಮಾಜಿ ಸಚಿವರುಗಳಾದ ಶ್ರೀಮಾನ್ ರಾಮಚಂದ್ರಗೌಡರು, ಶ್ರೀಮಾನ್ ವೆಂಕಟರಮಣಪ್ಪನವರು, ಶ್ರೀಮಾನ್ ಡಿ. ಸುಧಾಕರ್‌ರವರು ಶ್ರೀಮಾನ್ ಸಿ. ವೀರಣ್ಣನವರು ಹಾಗೂ ಮಾಜಿ ಸಂಸದರಾದ ಶ್ರೀಮಾನ್ ಹನುಮಂತಪ್ಪನವರು, ಪರಿಸರವಾದಿ ಡಾ|| ಎಸ್. ಆರ್. ರಾಮಸ್ವಾಮಿಯವರು ಖ್ಯಾತ ಹಿನ್ನೆಲೆ ಗಾಯಕಿ ಮತ್ತು ನಟಿ ಶ್ರೀಮತಿ ಆಶಾ ಭೋಂಸ್ಲೆ,ಯವರು, ಸಾಹಿತಿ, ರಂಗ ಭೂಮಿ ಹಾಗೂ ಸಿನಿಮಾ ಕಲಾವಿದರು, ಮೀನುಗಾರರು ಹಾಗೂ ಹಿರಿಯ ರಾಜಕಾರಣಿಯಾಗಿದ್ದ ಶ್ರೀ ರಾಮಚಂದರ್ ಬೈಕಂಪಾಡಿಯವರು, ತೂಗು ಸೇತುವೆಗಳ ಸರದಾರ ಮತ್ತು ಸಮಾಜ ಸೇವಕರಾಗಿದ್ದ ಶ್ರೀ ಗಿರೀಶ್ ಭಾರದ್ವಾಜ್, ಸಂಗೀತ ಲೋಕದ ಸ್ವರ ಸಾಮ್ರಾಜ್ಞೆ ಮತ್ತು ಹಿನ್ನೆಲೆ ಗಾಯಕಿಯಾದ ಡಾ|| ಎಸ್. ಜಾನಕಿಯವರು, ಹಿರಿಯ ಲೇಖಕಿಯಾದ ಶ್ರೀಮತಿ ಸಿ.ಎನ್. ಮುಕ್ತಾ, ರವರು, ನಾಣ್ಯಶಾಸ್ತ್ರ ತಜ್ಞರಾದ ಪ್ರೊ. ಎ.ವಿ. ನರಸಿಂಹಮೂರ್ತಿ ಹಾಗೂ ಸರಳತೆಯ ಸಾಕಾರ

ಮೂರ್ತಿ ಹಾಗೂ ಅನ್ನಪೂರ್ಣೇಶ್ವರಿಯಾಗಿದ್ದ ಶ್ರೀಮತಿ ಚೆನ್ನಮ್ಮನವರು ಇವರುಗಳು ನಿಧನ ಹೊಂದಿದ್ದು, ಅವರಿಗೆ ಈ ಸಂದರ್ಭದಲ್ಲಿ ಸಂತಾಪಸೂಚನೆಯನ್ನು ಸಲ್ಲಿಸುತ್ತಿದ್ದು, ಅವರುಗಳಿಗೆ ಶ್ರದ್ಧಾಪೂರ್ವಕವಾಗಿ ನಾನು ನನ್ನ ನಮನಗಳನ್ನು ಸಲ್ಲಿಸುತ್ತೇನೆ.

ಮಾನ್ಯ ಸಭಾಪತಿಯವರೆ, ಮಾಜಿ ಸಚಿವರಾಗಿದ್ದ ಮಾನ್ಯ ಶ್ರೀ ರಾಮಚಂದ್ರಗೌಡ ರವರು ಇತ್ತೀಚೆಗೆ ನಿಧನ ಹೊಂದಿದ್ದು, ಅವರನ್ನು ನಾನು ಮೊಟ್ಟಮೊದಲನೆಯದಾಗಿ ಸ್ಮರಿಸಿಕೊಳ್ಳುತ್ತೇನೆ. ಒಂದು ಬಾರಿ ನಾನು ಲಿಫ್ಟ್‌ನಲ್ಲಿ ಬರಬೇಕಾದರೆ ನನಗೆ ನೀವು ಯಾರಮ್ಮ ಎಂದವರು ನನಗೆ ಕೇಳಿದರು. ಆಗ ನಾನು ನನ್ನ ಹೆಸರನ್ನು ಹೇಳಿದ ತಕ್ಷಣ ಅವರು ನನಗೆ ಬಲ್ಕೀಸ್ ಬಾನು ಎನ್ನುವವರು ನೀವಾ ಎಂದು ಕೇಳಿದರು. ಅಲ್ಪ ಸಂಖ್ಯಾತರಾದ ತಾವು ರಾಜಕೀಯದಲ್ಲಿ ಮುಂದೆ ಬರಲೇ ಬೇಕೆಂದು ಅವರು ಹೇಳಿರತಕ್ಕಂತಹ ಮಾತನ್ನು ನಾನು ಇವತ್ತು ನೆನಪು ಮಾಡಿಕೊಳ್ಳುತ್ತಾ, ಮನಸ್ಪೂರ್ವಕವಾಗಿ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದ್ದೇನೆ. ಏಕೆಂದರೆ, ಮೀಸಲಾತಿಯ ಬಗ್ಗೆ ಅಂತಹ ಒಂದು ಕಾಳಜಿ ಇದ್ದಂತಹ ಒಬ್ಬ ಮನುಷ್ಯ, ಒಬ್ಬ ದೊಡ್ಡ ವ್ಯಕ್ತಿ, ಎಂದರೆ ತಮ್ಮ ರಾಜಕೀಯ ಕ್ಷೇತ್ರದಲ್ಲಿ ಹಲವಾರು ಶಿಷ್ಯಂದಿರನ್ನು ಬೆಳೆಸಿದ್ದಾರೆ. ಅವರು ಆರ್.ಎಸ್.ಎಸ್.ನಲ್ಲಿ ಸೇರಿದ್ದರೂ ಸಹ ಆ ಒಂದು ವ್ಯವಸ್ಥೆಯಲ್ಲಿ ಎಲ್ಲರ ಪಾತ್ರವೂ ಮುಖ್ಯ ಎನ್ನುವಂತಹ ಧೋರಣೆಯನ್ನು ಹೊಂದಿದಂತಹವರು ಶ್ರೀಮಾನ್ ರಾಮಚಂದ್ರಪ್ಪನವರು. ಹಾಗೆಯೇ ಶ್ರೀಮಾನ್ ಡಿ. ಸುಧಾಕರ್‌ರವರ ಬಗ್ಗೆ ಎಲ್ಲರೂ ಹೇಳಿದ ಹಾಗೆ ಅಲ್ಪ ಸಂಖ್ಯಾತರ ಜನಾಂಗಕ್ಕೆ ಸೇರಿದಂತಹ ಶ್ರೀಮಾನ್ ಡಿ. ಸುಧಾಕರ್‌ರವರು ಹಿರಿಯೂರು ಮತಕ್ಷೇತ್ರದಲ್ಲಿ ಅವರ ಜನಾಂಗಕ್ಕೆ ಸೇರಿದ ಕೇವಲ 300 ಮತದಾರರು ಇದ್ದರೂ ಸಹ ಇತರ ಎಲ್ಲಾ ವರ್ಗದವರು ಸಹ ಅವರ ನಾಯಕತ್ವವನ್ನು ಒಪ್ಪಿಕೊಂಡಿದ್ದು, ಅವರೆಲ್ಲರನ್ನು ಸಹ ತಮ್ಮ ಜೊತೆಯಲ್ಲಿ ತೆಗೆದುಕೊಂಡು ಹೋಗಿ, ಸಾಮಾಜಿಕವಾಗಿ ಮತ್ತು ಅಲ್ಲಿ ಇರತಕ್ಕಂತಹ ಸಮಸ್ಯೆಗಳನ್ನು ಬಗೆಹರಿಸುವಂತಹ ಆ ಒಂದು ಚಾಕುಚಕ್ಕತೆಗಳ ಮೂಲಕ ತಮ್ಮ ನಾಯಕತ್ವವನ್ನು ಗಟ್ಟಿಗೊಳಿಸಿದಂತಹ ಒಬ್ಬ ನಾಯಕ ಎಂದರೆ ಶ್ರೀಮಾನ್ ಡಿ. ಸುಧಾಕರ್‌ರವರು ಆಗಿದ್ದರು. ಸಚಿವರಾಗಿದ್ದಂತಹ ಶ್ರೀಯುತರು ಎಲ್ಲರನ್ನು ಆಗಲಿದ್ದಾರೆ. ಅವರ ಆಗಲಿಕೆಯಿಂದ ಅಲ್ಪ ಸಂಖ್ಯಾತ ಜನಾಂಗಕ್ಕೆ ಮತ್ತು ಆ ಕ್ಷೇತ್ರದ ಜನಾಂಗಕ್ಕೂ ಕೂಡ ನಷ್ಟವಾಗಿದೆ. ಸಹಕಾರಿ ಕ್ಷೇತ್ರದಲ್ಲಿ ಕೂಡ ಅವರದ್ದೇ ಆದಂತಹ ಛಾಪನ್ನು ಮೂಡಿಸಿ, ಬಹಳಷ್ಟು ಶಿಷ್ಯಂದಿರನ್ನು ಬೆಳೆಸಿದ್ದಾರೆ. ಅವರನ್ನು ನೋಡಿದ ತಕ್ಷಣ ಈ ಕೆಳಜಾತಿ ಮತ್ತು ಹಿಂದುಳಿದ ಜನಾಂಗದವರಿಗೆ ಒಂದು ರೀತಿಯಲ್ಲಿ ಪ್ರೇರಪಣೆಯಾಗುತ್ತಿತ್ತು. ಶ್ರೀಮಾನ್ ಡಿ. ಸುಧಾಕರ್ ರವರಿಗೆ ಸಾಕಷ್ಟು ಸಂಖ್ಯೆಯಲ್ಲಿ ಅವರ ಜನಾಂಗದವರು ಇಲ್ಲದಿದ್ದರೂ ಕೂಡ ಅವರು ಅ ಒಂದು ಮಟ್ಟಕ್ಕೆ ಬರಲು ಜನರು ಅವರನ್ನು ಗೆಲ್ಲಿಸಿದ್ದಾರೆಂದರೆ ಇವತ್ತು ಜಾತಿ ವ್ಯವಸ್ಥೆ ಬೇಡ ಎನ್ನುವುದಕ್ಕೆ ತಕ್ಕಂತಹ ಉತ್ತರವನ್ನು ಆ ಕ್ಷೇತ್ರದ ಜನರು ಕೊಟ್ಟಿದ್ದಾರೆ. ಅವರಿಗೆ ನಾನು ಶ್ರದ್ಧಾಪೂರ್ವಕವಾಗಿ ನಮನವನ್ನು ಸಲ್ಲಿಸುತ್ತೇನೆ. ಅದೇ ರೀತಿಯಲ್ಲಿ ಹೇಳುವುದಾದರೆ ಶ್ರೀಮಾನ್ ವೆಂಕಟರಮಣಪ್ಪನವರು ಕೂಡ

ನಾವೆಲ್ಲರೂ ಸಹ ಒಂದೇ ಪಕ್ಷದಲ್ಲಿದ್ದು ಕೆಲಸ ಮಾಡಿದ್ದು, ಅವರು ಹಲವಾರು ಬಾರಿ ಪಕ್ಷದ ಚಟುವಟಿಕೆಯಲ್ಲಿ ಬಂದಾಗ ಅವರು ಸಹ ಬಹಳ ಗೌರವದಿಂದ ನಡೆದುಕೊಂಡಿದ್ದಾರೆ. ಶ್ರೀಮಾನ್ ವೆಂಕಟರಮಣಪ್ಪನವರು ಮಹಿಳೆಯರ ಬಗ್ಗೆ ಬಹಳ ಒಳ್ಳೆಯ ಕಾಳಜಿಯನ್ನು ಇಟ್ಟುಕೊಂಡಿದ್ದರು. ಅದೇ ರೀತಿಯಲ್ಲಿ ಎಸ್.ಟಿ. ಜನಾಂಗಕ್ಕೆ ಸೇರಿದ ಶ್ರೀಮಾನ್ ಸಿ. ವೀರಣ್ಣನವರು ಸಾಮಾನ್ಯ ಜನರ ಜೊತೆಗೆ ನಾವು ಯಾವ ಒಂದು ವರ್ಗಕ್ಕೆ ಸೇರುತ್ತೇವೆ, ಆ ಒಂದು ವರ್ಗಕ್ಕೂ ಕೂಡ ನ್ಯಾಯ ಸಲ್ಲಿಸಬೇಕೆಂದು ಹೇಳಿ ಎಸ್.ಟಿ. ಜನಾಂಗಕ್ಕೆ ಮೀಸಲಾತಿ ಬಗ್ಗೆ ಅವರು ಮಾಡಿರತಕ್ಕಂತಹ ಒಂದು ಕೊಡುಗೆಯನ್ನು ಆ ಜನಾಂಗ ಎಂದಿಗೂ ಮರೆಯಲಿಕ್ಕೆ ಸಾಧ್ಯವಿಲ್ಲ. ಹಾಗೆಯೇ ಶ್ರೀಮಾನ್ ಹೆಚ್. ಹನುಮಂತಪ್ಪನವರು ಚಿತ್ರದುರ್ಗದಲ್ಲಿ ಜನಿಸಿದ್ದು, ಅವರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಅವರು ಬಹಳ ದೊಡ್ಡ ವ್ಯಕ್ತಿಯಾಗಿದ್ದರು. ಕೇವಲ ಆ ಒಂದು ವರ್ಗಕ್ಕೆ ಸೇರಿದರೂ ಕೂಡ ಬೇರೆ ಬೇರೆ ಜನಾಂಗದಲ್ಲಿಯೂ ಕೂಡ ಬಹಳ ಒಳ್ಳೆಯ ಒಡನಾಟವನ್ನಿಟ್ಟುಕೊಂಡಿದ್ದರು. ಜೊತೆಗೆ ಬಡತನದ ಬಗ್ಗೆ ಬಹಳ ಕಾಳಜಿಯನ್ನು ವಹಿಸಿದಂತಹ ಶ್ರೀಯುತರು ಬಡತನದಲ್ಲಿ ಇದ್ದಂತಹವರಿಗೆ ಯಾವುದಾದರೊಂದು ನೌಕರಿಯನ್ನು ಕೊಡಬೇಕೆನ್ನುವ ಧೋರಣೆಯನ್ನು ಹೊಂದಿದವರಾಗಿದ್ದರು. ಕಂದಾಯ ಇಲಾಖೆಯಲ್ಲಿ ಹತ್ತು-ಹಲವಾರು ಜನರಿಗೆ ಅವರ ಶಕ್ತಿಯನ್ನು ಮೀರಿ ಕೆಲಸವನ್ನು ಕೊಡಿಸುವುದರ ಮೂಲಕ ಆ ಒಂದು ಜನಾಂಗಕ್ಕೆ ಮಾದರಿಯಾಗಿದ್ದರು. ಅವರಿಗೂ ಸಹ ಈ ಸಂದರ್ಭದಲ್ಲಿ ನಮನವನ್ನು ಸಲ್ಲಿಸುತ್ತೇನೆ. ಹಾಗೆಯೇ ಹಿನ್ನೆಲೆ ಗಾಯಕಿ ಮತ್ತು ನಟಿ ಶ್ರೀಮತಿ ಆಶಾ ಭೋಂಸ್ಲೆ,ಯವರು ಖ್ಯಾತ ಹಿನ್ನೆಲೆ ಗಾಯಕಿಯಾದ ಡಾ॥ ಎಸ್. ಜಾನಕಿಯವರು ಮಹಿಳೆಯಾದ ಇವರುಗಳಿಗೆ ಯಾವುದೇ ಒಂದು ಭಾಷೆಯ ಅಡಚಣೆ ಬಂದಿರುವುದಿಲ್ಲ. ಅವರಲ್ಲಿ ಇದ್ದಂತಹ ಒಂದು ಪ್ರತಿಭೆಯನ್ನು ಇಡಿ ಮಹಿಳಾ ಸಮುದಾಯಕ್ಕೆ ಮತ್ತು ನಮ್ಮ ರಾಜ್ಯಕ್ಕೆ ನಮ್ಮ ದೇಶಕ್ಕೆ ಒಂದು ದೊಡ್ಡ ಕೊಡುಗೆಯನ್ನು ಕೊಟ್ಟಿದ್ದಾರೆ ಎಂದು ಹೇಳಲಿಕ್ಕೆ ಬಯಸುತ್ತೇನೆ.

ಇದರ ಜೊತೆಗೆ ನಮ್ಮ ಜಿಲ್ಲೆಯ, ನಮ್ಮ ಶಿವಮೊಗ್ಗ ತಾಲ್ಲೂಕಿನ ಶಾಸಕರಾಗಿದ್ದಂತಹ ಶ್ರೀಮಾನ್ ಹೆಚ್. ಎಂ. ಚಂದ್ರಶೇಖರ್ ರವರು ಸಹ ನಿಧನ ಹೊಂದಿದ್ದು, ಈ ಒಂದು ಪಟ್ಟಿಯಲ್ಲಿ ಅವರ ಹೆಸರು ಬಿಟ್ಟು ಹೋಗಿದೆ. ಶ್ರೀಯತರು ದಿನಾಂಕ: 26-07-2026 ರಂದು ನಿಧನರಾಗಿದ್ದಾರೆ. ಇವರ ತಂದೆ ಶ್ರೀಮಾನ್ ಹೆಚ್.ಎಂ. ಮಲ್ಲಿಕಾರ್ಜುನಪ್ಪನವರು ಸ್ವತಂತ್ರ ಹೋರಾಟಗಾರರಾಗಿದ್ದ ಶ್ರೀಯುತರು, ತರಿಕೇರೆ ಮತಕ್ಷೇತ್ರದ ಶಾಸಕರಾಗಿದ್ದರು. ತಾಯಿ ಹೆಸರು ಲಿಂಗಮ್ಮನವರು. ಇವರ ಪುತ್ರರಾದ ಶ್ರೀ ಹೆಚ್.ಎಂ. ಚಂದ್ರಶೇಖರಪ್ಪನವರು ಮಾಜಿ ಶಾಸಕರಾಗಿದ್ದರು. ಇವರು ಸ್ವಾತಂತ್ರ ಹೋರಾಟಗಾರರ ಕುಟುಂಬದವರು ಹಾಗೂ ಕೃಷಿಕರಾಗಿ ಅಡಿಕೆ ಭತ್ತ ತೆಂಗು, ಬೆಳೆಯುತ್ತಿದ್ದರು. ಇವರು 1982 ರಿಂದ 1984 ರವರೆಗೆ ನಗರ ಸಭೆಯ ಅಧ್ಯಕ್ಷರಾಗಿರುತ್ತಾರೆ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. 1999 ರಿಂದ 2004 ರವರೆಗೆ ಶಿವಮೊಗ್ಗ ಕ್ಷೇತ್ರದ ಶಾಸಕರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಶಿವಮೊಗ್ಗದ ಗಾಜನೂರು ಡ್ಯಾಮ್ ಅನ್ನು

14 ಅಡಿ ಎತ್ತರಕ್ಕೇರಿಸುವ ಮೂಲಕ ಮರೆಯಲಾಗದಂತಹ ಸಾಧನೆಯನ್ನು ಇವರು ಮಾಡಿರುತ್ತಾರೆ. ಶಿವಮೊಗ್ಗ ನಗರದಲ್ಲಿ 4000 ಆಶ್ರಯ ಸೈಟ್‌ಗಳನ್ನು ಹಂಚಿಕೆ ಮಾಡಿರುತ್ತಾರೆ. 92 ಸ್ಲಂ ಪ್ರದೇಶಗಳಿಗೆ ಹಕ್ಕು ಪತ್ರಗಳನ್ನು ನೀಡಿರುತ್ತಾರೆ. ಮಾಜಿ ಶಾಸಕರ ವೇದಿಕೆಯ ಅಧ್ಯಕ್ಷರಾಗಿ ನೆನೆಗುದ್ದಿಗೆಗೆ ಬಿದ್ದಿದ್ದ ಘೋರಂ.ಗೆ ಹೊಸ ರೂಪ ನೀಡಿರುತ್ತಾರೆ. ಮತ್ತೆ ನಿವೃತ್ತಿ ಶಾಸಕರಿಗೆ 93,000 ರೂಪಾಯಿಗಳ ಪಿಂಚಣಿಯನ್ನು ಕೊಡಬೇಕೆಂದು ಹೇಳಿ ಸರ್ಕಾರಕ್ಕೆ ಒತ್ತಡ ತಂದು ಅದನ್ನು ಸಹ ಮಾಡಿಸಿರುತ್ತಾರೆ. ಇದನ್ನು ತಮ್ಮ ಅವಧಿಯಲ್ಲಿ ಮಾಡಿಸಿರುತ್ತಾರೆ. ಅಖಿಲಭಾರತ ವೀರಶೈವ ಮಹಾಸಭೆಯ ಜಿಲ್ಲಾ ಅಧ್ಯಕ್ಷರಾಗಿ ಮತ್ತು ರಾಜ್ಯ ಉಪಾಧ್ಯಕ್ಷರಾಗಿ ಸೇವೆಯನ್ನು ಸಲ್ಲಿಸಿದವರಾಗಿರುತ್ತಾರೆ. ತಮ್ಮ ರಾಜಕೀಯ ಜೀವನದಲ್ಲಿ ಜಾತ್ಯಾತೀತ ಮೌಲ್ಯವನ್ನು ಅನುಸರಿಸುತ್ತಾ, ಎಲ್ಲಾ ಜನಾಂಗದವರ ಪ್ರೀತಿ –ವಿಶ್ವಾಸಕ್ಕೆ ಪಾತ್ರರಾಗಿರುತ್ತಾರೆ. ಹೀಗಾಗಿ ದಿವಂಗತರಾದ ಎಲ್ಲಾ ಧೀಮಂತ ವ್ಯಕ್ತಿಗಳನ್ನು ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ.

ಜೊತೆಗೆ ಅನ್ನಪೂರ್ಣೇಶ್ವರಿಯಾಗಿದ್ದ ಚೆನ್ನಮ್ಮನವರನ್ನು ನೆನಪು ಮಾಡಿಕೊಳ್ಳಬೇಕಾಗಿದೆ. 1980 ರ ದಶಕದಲ್ಲಿ ಇಡೀ ಕರ್ನಾಟಕ ರಾಜ್ಯದಲ್ಲಿ ಮಹಿಳೆಯರಿಗೆ ಶೇಕಡ 33% ರಷ್ಟು ಮೀಸಲಾತಿ ಸೌಲಭ್ಯ ಸಿಕ್ಕಿದಂತಹ ಸಂದರ್ಭದಲ್ಲಿ ನನ್ನನ್ನು ಸೇರಿಸಿಕೊಂಡು ಇಡೀ ರಾಜ್ಯದ ಎಲ್ಲಾ ಭಾಗದ ಹೆಣ್ಣು ಮಕ್ಕಳು ಮಾನ್ಯ ಶ್ರೀ ಹೆಚ್.ಡಿ. ದೇವೇಗೌಡರ ಮನೆಗೆ ಹೋಗುವಂತಹ ಸಂದರ್ಭದಲ್ಲಿ ನಾವು ನೇರವಾಗಿ ಚೆನ್ನಮ್ಮನವರನ್ನು ಭೇಟಿಯಾಗುತ್ತಿದ್ದೆವು. ಅವರು ನಮ್ಮನ್ನೆಲ್ಲಾ ಕೂರಿಸಿಕೊಂಡು ನೋಡಿ, ನಿಮಗೆಲ್ಲಾ ಮೀಸಲಾತಿ ಅವಕಾಶ ಸಿಕ್ಕಿದೆ. ನೀವುಗಳು ಮುಂದೆ ಬರಬೇಕು ಮತ್ತು ನಿಮ್ಮ ಹಿಂದೆ ಇರುವವರೆಲ್ಲರೂ ಕೂಡ ನಿಮ್ಮನ್ನು ನೋಡಿ ಮುಂದೆ ಬರಬೇಕು. ಆ ರೀತಿಯಲ್ಲಿ ನೀವು ಕೆಲಸ ಮಾಡಿಕೊಂಡು ಹೋಗಿ ಎಂದು ಹೇಳಿ ಒಂದು ಕಿವಿ ಮಾತನ್ನು ನಮಗೆ ಹೇಳುತ್ತಿದ್ದರು. ಮಾರ್ಗದರ್ಶನ ಮಾಡಿರತಕ್ಕಂತಹ ಆ ಮಹಾನ್ ತಾಯಿಯನ್ನು ನಾವು ಇಂದು ಕಳೆದುಕೊಂಡಿದ್ದೇವೆ. ನಿಜಕ್ಕೂ ಸಹ ಮಾನ್ಯ ಸದಸ್ಯರಾದ ಶ್ರೀಮಾನ್ ರವಿಯವರು ಹೇಳಿದ ಹಾಗೆ ಪ್ರಧಾನ ಮಂತ್ರಿಯಾದಂತಹ ಶ್ರೀಮಾನ್ ದೇವೇಗೌಡರವರ ಯಶಸ್ಸಿಗೆ ನಮ್ಮ ಚೆನ್ನಮ್ಮನವರು ಕಾರಣವಾಗುತ್ತಾರೆ. ಪುರುಷರ ಯಶಸ್ಸಿನ ಹಿಂದೆ ಮಹಿಳೆಯರ ಕೈವಾಡ ಇರುತ್ತದೆ ಎನ್ನುವುದು ನಿಜಕ್ಕೂ ಕೂಡ ಸತ್ಯ. ಅದೇ ರೀತಿಯಲ್ಲಿ ನಮ್ಮ ಶ್ರೀಮಾನ್ ಜೆ.ಹೆಚ್. ಪಟೇಲ್ ರವರ ಪತ್ನಿಯಾದಂತಹ ಶ್ರೀಮತಿ ಶಕುಂತಲಾ ರವರು ಕೂಡ ಶ್ರೀಮಾನ್ ಜೆ.ಹೆಚ್. ಪಟೇಲ್ ರವರ ಯಶಸ್ವಿಗೆ ಪ್ರೇರಪಣೆಯಾಗಿದ್ದರು. ಯಾವ ರೀತಿಯಲ್ಲಿ ನಮ್ಮ ಶ್ರೀಮಾನ್ ಸಿದ್ದರಾಮಯ್ಯನವರ ಪತ್ನಿಯವರ ಬಗ್ಗೆ ಹೇಳಿದರು. ಈ ರೀತಿಯಲ್ಲಿ ಹೆಣ್ಣು ಮಕ್ಕಳು ಎಲ್ಲಿಯೇ ಇದ್ದರೂ ಕೂಡ ಸಮಾಜಕ್ಕೆ ಕೊಡುಗೆ ಕೊಡುವ ನಿಟ್ಟಿನಲ್ಲಿ ಕೆಲಸವನ್ನು ಮಾಡುತ್ತಾರೆ. ಆ ನಿಟ್ಟಿನಲ್ಲಿ ನಮ್ಮ ಚೆನ್ನಮ್ಮನವರ ಪಾತ್ರ ಇತ್ತು. ಮಹಿಳೆಯರ ಪ್ರೋತ್ಸಾಹ ಮತ್ತು ರಾಜಕೀಯಕ್ಕೂ ಪ್ರೋತ್ಸಾಹ ಮತ್ತು ಮೌಲ್ಯಾಧಾರಿತ ರಾಜಕೀಯವನ್ನು ಮಾಡಿ ಎಂದು ಹೇಳುತ್ತಿದ್ದರು. ಅವರ ಜೊತೆ ಬಹಳ ನಿಕಟವಾಗಿ ನಮ್ಮ ಸಂಪರ್ಕ ಇತ್ತು. ಹೀಗಾಗಿ, ತಾವು ಈಗ

ತಂದಿರುವ ಸಂತಾಪ ಸೂಚನೆಯನ್ನು ಬೆಂಬಲಿಸುತ್ತಾ, ಎಲ್ಲರಿಗೂ ಸಹ ನನ್ನ ಶ್ರದ್ಧಾಪೂರ್ವಕ ನಮನವನ್ನು ಸಲ್ಲಿಸುತ್ತೇನೆ.

(ಮುಂದು)

**(671) 13.08.2026 12.40 ಎಸ್‌ವಿ-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಐವನ್ ಡಿ'ಸೋಜ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಈ ಮುಂಗಾರು ಅಧಿವೇಶನದ ಸಂದರ್ಭದಲ್ಲಿ ತಾವು ತಂದಿರುವ ಸಂತಾಪ ಸೂಚನೆಯಲ್ಲಿ ಸುಮಾರು 13 ಮಂದಿ ತಮ್ಮ ಸೇವೆಯನ್ನು ಸಲ್ಲಿಸಿ, ಇಹಲೋಕವನ್ನು ತ್ಯಜಿಸಿರುವ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತಾ, ಈ 13 ಜನರ ಆತ್ಮಚರಿತ್ರೆಗಳು ಮತ್ತು ಅವರು ಮಾಡಿದ್ದಂತಹ ಕೆಲಸಗಳನ್ನು ನೋಡಿದಾಗ, ಒಳ್ಳೆಯ ಕೆಲಸಗಳನ್ನು ಸಮಾಜವು ಯಾವಾಗಲೂ ಗುರುತಿಸುತ್ತದೆ ಮತ್ತು ಸಮಾಜದಲ್ಲಿ ಅವರು ಸಲ್ಲಿಸಿದ ಸೇವೆಗೆ ಒಂದು ಮನ್ನಣೆ ದೊರೆಯುತ್ತದೆ ಎಂಬುದನ್ನು ನಾವು ಅರಿತುಕೊಳ್ಳಬೇಕಾಗುತ್ತದೆ. 13 ಮಂದಿಯಲ್ಲಿ ದಿವಂಗತ ಶ್ರೀ ರಾಮಚಂದ್ರಗೌಡರನ್ನು ನಾನು ಹೆಚ್ಚು ಪ್ರೀತಿಸುತ್ತಿದ್ದೆನು. ನಾನು 2014ರಲ್ಲಿ ಈ ಸದನದ ಸದಸ್ಯನಾಗಿ ಬಂದಾಗ ಅವರು ಈ ಸದನದ ಅತ್ಯಂತ ಹಿರಿಯ ಸದಸ್ಯರಾಗಿದ್ದರು. ನಾನು ಇದೇ Treasury Bench ನಲ್ಲಿ ಕುಳಿತಿದ್ದೆನು, ಅವರು ವಿರೋಧ ಪಕ್ಷದ ಭಾಗದ ಮೊದಲನೆಯ ಸಾಲಿನಲ್ಲಿ ಕುಳಿತಿದ್ದರು. ಸದನದಲ್ಲಿ ಯಾರಾದರೂ ಯಾವುದೇ ವಿಚಾರ ಮಂಡನೆ ಮಾಡುವ ಸಂದರ್ಭದಲ್ಲಿ ಅವರು ತಮ್ಮ ಮಾರ್ಗದರ್ಶನವನ್ನು ಮಾಡುವುದರ ಜೊತೆಗೆ, ನಾವು ಏನಾದರೂ ತಪ್ಪಾದ ರೀತಿಯಲ್ಲಿ ವಿಚಾರಗಳನ್ನು ಮಂಡನೆ ಮಾಡಿದರೆ, ಅಲ್ಲಿಯೇ ನಿಂತು ಅದನ್ನು ಸರಿಪಡಿಸುವ ಪ್ರಯತ್ನವನ್ನು ದಿವಂಗತ ರಾಮಚಂದ್ರಗೌಡರು ಮಾಡುತ್ತಿದ್ದರು.

ದಿವಂಗತ ರಾಮಚಂದ್ರಗೌಡರು ಹೇಳುತ್ತಿದ್ದಂಥ ಒಂದು quote ನನಗೆ ಈಗ ನೆನಪಾಗುತ್ತಿದೆ. ಪ್ರತಿ ಬಾರಿಯೂ ಸದನದಲ್ಲಿ ಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ "ಅದನ್ನು ನಾನು ಗಮನಿಸಿದ್ದೇನೆ, ನಾನು ಅದನ್ನು ನೋಡಿದ್ದೇನೆ, ಅದರ ಬಗ್ಗೆ ಪರಿಶೀಲಿಸುತ್ತೇನೆ" ಎಂದು ಹೇಳುವಾಗ ಅವರು ಎದ್ದು ನಿಂತು, "knowing is not doing, doing is doing" ಎಂದು ಹೇಳುತ್ತಿದ್ದರು. ಕೇವಲ "ನನಗೆ ಗೊತ್ತುಂಟು" ಎಂದು ಹೇಳಿದರೆ ಅದು ಕೆಲಸವನ್ನು ಮಾಡಿದಂತೆ ಆಗುವುದಿಲ್ಲ, ಮಾಡುವ ಕೆಲಸವನ್ನು ನಾನು ಮಾಡುತ್ತೇನೆ ಎಂದು ಹೇಳಿದರೆ ಅದು ಮಾಡಿದಂತೆ ಆಗುತ್ತದೆ ಎಂದು ಅವರು ಹೇಳುತ್ತಿದ್ದರು. That was the quote which I took for me. ಈ quote ಅನ್ನು ನಾನು ನನ್ನ ವೃತ್ತಿ ಜೀವನದಲ್ಲಿ ಹಾಗೂ ಬೇರೆ ಬೇರೆ ಸಂದರ್ಭಗಳಲ್ಲಿ ಬಳಸಿಕೊಳ್ಳುತ್ತಿದ್ದೇನೆ. ಓರ್ವ prudent citizen ಆಗಿ, ಬೆಂಗಳೂರಿನಲ್ಲಿ ಆರು ಬಾರಿ ಪದವೀಧರ ಕ್ಷೇತ್ರದಿಂದ ಆಯ್ಕೆಯಾಗಿ ಶಾಸಕರಾಗಿದ್ದರು. ಅವರಿಗೆ ಸಮಾಜಮುಖಿ ಆಸಕ್ತಿಗಳಿದ್ದುದು ಅತ್ಯಂತ ಶ್ಲಾಘನೀಯ. ಅವರ ನಿಧನದಿಂದಾಗಿ ನಮ್ಮ ಬಳಗವು, ಸಮುದಾಯವು ಮತ್ತು ಸಮಾಜವು ಓರ್ವ ಹಿರಿಯ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ ಎಂದು ಹೇಳುವ ಮೂಲಕ ದಿವಂಗತರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತೇನೆ.

ದಿವಂಗತ ಡಿ.ಸುಧಾಕರ್ ಅವರು ಕಳೆದ ಅಧಿವೇಶನದಲ್ಲಿ ನಮ್ಮೊಡನೆ ಇಲ್ಲಿಯೇ ಕುಳಿತಿದ್ದರು. ವಿಧಾನ ಪರಿಷತ್ ಶಾಸಕರಿಗೆ ಯೋಜನಾ ಮಂಡಳಿಗಳಲ್ಲಿ ಅಥವಾ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಸೇರಿದಂತೆ ಬೇರೆ ಬೇರೆ ಮಂಡಳಿಗಳಲ್ಲಿ ಆಹ್ವಾನವಿರುತ್ತಿರಲಿಲ್ಲ ಮತ್ತು ವಿಧಾನ ಪರಿಷತ್ ಸದಸ್ಯರಿಗೆ ಬೇಕಾದಂಥ ಅನುದಾನ ಕೊಡುತ್ತಿರಲಿಲ್ಲ. ಅವರು ಯೋಜನಾ ಮತ್ತು ಸಾಂಖ್ಯಿಕ ಸಚಿವರಾಗಿದ್ದು, ಈ ಸದನದಲ್ಲಿ ಒಂದು ನಿರ್ಣಯವನ್ನು ತಂದಾಗ, ಅದನ್ನು ಖಂಡಿತವಾಗಿಯೂ ಮಾಡಿಕೊಡುತ್ತೇನೆಂದು ಹೇಳಿ, ಅದನ್ನು ಮಾಡಿದರು. ಕರಾವಳಿ ಅಭಿವೃದ್ಧಿ ಪ್ರಾಧಿಕಾರದಲ್ಲಿ ನನ್ನನ್ನು, ಶ್ರೀ ಪ್ರತಾಪಸಿಂಹ ನಾಯಕರನ್ನು, ಮಾನ್ಯ ಮಂಜುನಾಥ ಭಂಡಾರಿಯವರನ್ನು ಸದಸ್ಯರನ್ನಾಗಿ ಮಾಡಿದ್ದು ಮಾತ್ರವಲ್ಲದೆ, ಆ ವರ್ಷದಲ್ಲಿ ಕೊಡಬೇಕಾದ ಅನುದಾನದಲ್ಲಿ ವಿಧಾನ ಸಭೆಯ ಶಾಸಕರಿಗೆ ಕೊಡುವಷ್ಟೇ ಅನುದಾನವನ್ನು ವಿಧಾನ ಪರಿಷತ್ತಿನ ಶಾಸಕರಿಗೂ ಕೊಡುವುದಾಗಿ ತೀರ್ಮಾನವನ್ನು ಇದೇ ಸದನದಲ್ಲಿ ಪ್ರಕಟ ಮಾಡಿದ್ದರು. ಅವರ ಬಳಿ ಯಾರೇ ಹೋದರೂ ಸುಲಭವಾಗಿ ಮಾತನಾಡಬಹುದಿತ್ತು. ನಮ್ಮ ಭಾಗಕ್ಕೆ ಸಂಬಂಧಿಸಿದಂತೆ ಕರಾವಳಿ ಅಭಿವೃದ್ಧಿ ಪ್ರಾಧಿಕಾರವನ್ನು ಮಂಡಳಿಯಾಗಿ upgrade ಮಾಡಿ, ಅದಕ್ಕೆ ಬೇಕಾದಂಥ ಅನುದಾನವನ್ನು ಕೊಟ್ಟು ನಮ್ಮನ್ನೆಲ್ಲಾ ಸದಸ್ಯರಾಗಿ ಮಾಡಿದ ಕೀರ್ತಿ ದಿವಂಗತ ಡಿ.ಸುಧಾಕರ್ ಅವರಿಗೆ ಸಲ್ಲುತ್ತದೆ. ಅವರು ನಮ್ಮನ್ನು ಬಿಟ್ಟು ಇಷ್ಟು ಬೇಗ ಅಗಲುತ್ತಾರೆ ಎಂದು ನಾವು ಎಣಿಸಿರಲಿಲ್ಲ. ಅವರು ಅನಾರೋಗ್ಯದಿಂದ ಬಳಲಿ, ತಮ್ಮ ಜೀವನದ ಕೊನೆಯನ್ನು ಕಂಡುಕೊಂಡಿದ್ದಾರೆ. ಇಂಥ ಒಬ್ಬ ಹಿರಿಯ ರಾಜಕಾರಣಿಗೆ ನಾನು ನಮನವನ್ನು ಸಲ್ಲಿಸಬಯಸುತ್ತೇನೆ.

ಮಾಜಿ ಸಚಿವರಾದ ದಿವಂಗತ ವೆಂಕಟರಮಣಪ್ಪ ಅವರು ಒಬ್ಬ ಮಂಡಲ ಪಂಚಾಯಿತಿ ಸದಸ್ಯರಾಗಿ ಬಂದವರು ಎಂಬುದನ್ನು ನಾವು ಗಮನಿಸಬೇಕು. 1986ನೇ ಇಸವಿಯಲ್ಲಿ ಮಂಡಲ ಪಂಚಾಯಿತಿ ವಿಕೇಂದ್ರಿಕರಣ ಬಂದಾಗ ನಾನು ಕೂಡ ಮಂಡಲ ಪ್ರಧಾನ್ ಆಗಿ ಕೆಲಸ ಮಾಡಿದವನು. ಮಂಡಲ ಪಂಚಾಯಿತಿಯಿಂದ ಪ್ರಾರಂಭಿಸಿ, ಅವರು ತಮ್ಮ ಜೀವನವನ್ನು ಬಹಳ ಎತ್ತರದವರೆಗೆ ಕೊಂಡೊಯ್ದರು. ಅವರು ಒಬ್ಬ ಮಂಡಲ ಪಂಚಾಯಿತಿ ಸದಸ್ಯರಾಗಿದ್ದ ಕಾರಣ, ಅವರ ಹೋರಾಟವು ಗ್ರಾಮೀಣ ನೀರಿನ ವ್ಯವಸ್ಥೆಗೆ ಚೆಕ್‌ಡ್ಯಾಂಗಳನ್ನು ಕಟ್ಟುವ ಮೂಲಕ ಗ್ರಾಮೀಣ ಭಾಗದ ಜನರ ಜೀವನ ವ್ಯವಸ್ಥೆಯನ್ನು ಹಸನುಗೊಳಿಸುವ ಕೆಲಸ ಮಾಡಿದ್ದಾರೆ. ದೀರ್ಘಕಾಲ ರಾಜಕೀಯ ಜೀವನದಲ್ಲಿದ್ದು, ಅತ್ಯಂತ ಸರಳ ಮತ್ತು ಸಜ್ಜನ ಜನಸ್ನೇಹಿ ನಾಯಕರೆಂದೇ ಗುರುತಿಸಲ್ಪಟ್ಟ ದಿವಂಗತ ವೆಂಕಟರಮಣಪ್ಪನವರಿಗೆ ನನ್ನ ನಮನಗಳನ್ನು ಸಲ್ಲಿಸುತ್ತೇನೆ.

ದಿವಂಗತ ಸಿ. ವೀರಣ್ಣನವರು ಮಾಜಿ ಸಚಿವರಾಗಿದ್ದವರು. ದಿವಂಗತ ರಾಮಕೃಷ್ಣ ಹೆಗಡೆಯವರು, ದಿವಂಗತ ಎಸ್. ಆರ್. ಬೊಮ್ಮಾಯಿಯವರು ಮುಖ್ಯಮಂತ್ರಿಗಳಾಗಿದ್ದಾಗ ಅವರು ಮಂತ್ರಿಯಾಗಿದ್ದರು. ನಾನೂ ಕೂಡ 1994ರಲ್ಲಿ ಕಾಪು ವಿಧಾನಸಭಾ ಕ್ಷೇತ್ರದಿಂದ ಜನತಾ ದಳದ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡಿದ್ದಾಗ, ನನ್ನ ಚುನಾವಣಾ ಪ್ರಚಾರಕ್ಕಾಗಿ ಅವರು ಬಂದಿದ್ದರು. ಮಾತ್ರವಲ್ಲ, ಆಗ ನಾವು ಅವರನ್ನು ಲಾಟರಿ ಮಿನಿಸ್ಟರ್ ಎಂದು ಕರೆಯುತ್ತಿದ್ದೆವು. ಆಗ ಲಾಟರಿ ಊರ್ಜಿತದಲ್ಲಿತ್ತು. ಒಂದಂಕಿ ಲಾಟರಿಯನ್ನು ನಿಲ್ಲಿಸಬೇಕು, ಹೊರ ರಾಜ್ಯದ ಲಾಟರಿಗಳು ನಮ್ಮ

ರಾಜ್ಯಕ್ಕೆ ಬರಬಾರದು ಎಂದು ತಮ್ಮ ಖಾತೆಯ ವಿರುದ್ಧವಾಗಿ ಮಾತನಾಡಿದ್ದ ಅವರನ್ನು ನಾನು ಸ್ಮರಿಸುತ್ತೇನೆ. ಅವರಿಗೆ ನನ್ನ ಸಂತಾಪವನ್ನು ವ್ಯಕ್ತಪಡಿಸುತ್ತೇನೆ.

ಅದೇ ರೀತಿ ಹೆಚ್. ಹನುಮಂತಪ್ಪನವರು ಮತ್ತು ಡಾ: ಎಸ್.ಆರ್.ರಾಮಸ್ವಾಮಿಯವರು ಉತ್ತಮ ಸೇವೆಯನ್ನು ಸಲ್ಲಿಸಿದರು. ಶ್ರೀಮತಿ ಆಶಾ ಭೋಂಸ್ಲೆಯವರು ಸಂಗೀತ ಗಾಯಕರಾಗಿದ್ದು ನಾವೆಲ್ಲ ಸಂಗೀತ ಪ್ರೇಮಿಗಳು. ಮಾನ್ಯ ಭೋಜೇಗೌಡರೂ ಸಹ ಸಂಗೀತಪ್ರೇಮಿಗಳೇ ಆಗಿದ್ದು, ಸಂಗೀತಕ್ಕೆ ಸಾವಿಲ್ಲವೆಂದು ನಾವು ಹೇಳುತ್ತೇವೆ. ಆಶಾ ಭೋಂಸ್ಲೆಯವರು ಸುಮಾರು 12,000ಕ್ಕಿಂತಲೂ ಹೆಚ್ಚು ಹಾಡುಗಳನ್ನು ಹಾಡಿದ್ದಾರೆ. ಇಂದು ಆಶಾ ಭೋಂಸ್ಲೆಯವರು ದೈಹಿಕವಾಗಿ ನಮ್ಮ ಮುಂದೆ ಇಲ್ಲದಿರಬಹುದು, ಅವರ ಕಂಠಸಿರಿಯ ಮೂಲಕ ಜನರಿಗೆ ಕೊಟ್ಟಿರುವ ದೊಡ್ಡ ಕೊಡುಗೆ ಈ ಪ್ರಪಂಚದಲ್ಲಿ ಉಳಿದಿದೆ ಎಂದು ಹೇಳಬಯಸುತ್ತೇನೆ.

ದಿವಂಗತ ರಾಮಚಂದ್ರ ಬೈಕಂಪಾಡಿಯವರು ನನ್ನ ಊರಿನವರೇ ಆಗಿದ್ದು, ಅವರು ನಮ್ಮ ಜೊತೆ ಸಾಹಿತಿಯಾಗಿ ಕೆಲಸ ಮಾಡಿದವರು. ಮಂಗಳೂರು ನಗರಕ್ಕೆ ಎಂ.ಆರ್.ಪಿ.ಎಲ್. ಎನ್ನುವ ದೊಡ್ಡ ಉದ್ದಿಮೆ ಬಂದಾಗ, ನಾವು ಪರಸ್ಪರ ಒಟ್ಟಾಗಿ ಹೋರಾಟವನ್ನು ಮಾಡಿದವರು. ಅಲ್ಲಿರುವಂಥ ಕೊಳಕು ನೀರನ್ನು ಸಮುದ್ರಕ್ಕೆ ಬಿಟ್ಟರೆ ಮೀನುಗಾರಿಕೆಗೆ ತೊಂದರೆಯಾಗುತ್ತದೆ. ಅದರಿಂದ ಮೀನುಗಳು ಸತ್ತು, ಮೀನುಗಾರಿಕೆ ಉದ್ಯಮವೇ ನಶಿಸಿ ಹೋಗುತ್ತದೆ ಎಂದು ಅತ್ಯಂತ ದೊಡ್ಡ ಹೋರಾಟವನ್ನು ಮಾಡಿ, ಅದರಲ್ಲಿ ಸಫಲರಾಗಿ ದೊಡ್ಡ ಪೈಪ್‌ಲೈನ್‌ಗಳನ್ನು ಹಾಕಿದಂಥ ಕೆಲಸವನ್ನು ಮಾಡಿದವರು. ಅವರು ಮೀನುಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿದ್ದರು. ಮೀನುಗಾರಿಕೆಯು ಕರಾವಳಿ ಭಾಗದ ಜೀವನಾಡಿ. ಏಕೆಂದರೆ ಅದು ಆರ್ಥಿಕ ವ್ಯವಸ್ಥೆಯಲ್ಲಿ ಒಂದು ದೊಡ್ಡ ಸಂಚಲನವನ್ನೇ ಮೂಡಿಸುತ್ತದೆ. ಒಂದು ದಿನ ಮೀನುಗಾರಿಕೆ ಇಲ್ಲವೆಂದರೆ, ಕರಾವಳಿ ಭಾಗದ ಜನರ ಜೀವನದಲ್ಲಿ bread of the day ಅವರಿಗೆ ಇರುವುದಿಲ್ಲ. ಅಂಥ ಸಂದರ್ಭದಲ್ಲಿ ಆ ಒಂದು ವಿಚಾರಗಳನ್ನು ತೆಗೆದುಕೊಂಡು ಹೋರಾಟ ಮಾಡಿದ್ದರು. ಅವರು ನಿಗಮದ ಅಧ್ಯಕ್ಷರಾಗಿದ್ದಾಗ ಕರಾವಳಿ ಭಾಗದ ಉದ್ದಕ್ಕೂ ಮೀನುಗಳನ್ನು ಮಾರುಕಟ್ಟೆಯಲ್ಲಿ ಮಾರುವುದು ಮಾತ್ರವಲ್ಲದೆ, ಮೀನುಗಾರಿಕೆ ಅಂಗಡಿಗಳನ್ನು ತೆರೆದು, ರಸ್ತೆಗಳಲ್ಲಿ ಅಥವಾ commercial complex ಗಳಲ್ಲಿ ಮೀನು ಉತ್ತಮ ಧಾರಣೆಗೆ ಹೋಗುವಂತೆ ಅವರು ಕೆಲಸ ಮಾಡಿರುವಂಥದ್ದು ಅತ್ಯಂತ ದೊಡ್ಡ ಕೆಲಸ.

ಅದೇ ರೀತಿ, ಡಾ: ಎಸ್. ಜಾನಕಿಯವರು. ಸಂಗೀತದ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಅನೇಕ ಗೀತೆಗಳನ್ನು ಹಾಡಿದ ಡಾ: ಎಸ್. ಜಾನಕಿಯವರ ಹೆಸರು ಅಜರಾಮರವಾಗಿ ಉಳಿಯುತ್ತದೆ.

ಡಾ: ಗಿರೀಶ್ ಭಾರದ್ವಾಜ್, ಶ್ರೀಮತಿ ಸಿ.ಎನ್.ಮುಕ್ತಾ, ಪ್ರೊ. ಎ.ವಿ.ನರಸಿಂಹಮೂರ್ತಿ ಮತ್ತು ಶ್ರೀಮತಿ ಚೆನ್ನಮ್ಮ ದೇವೇಗೌಡ ಅವರು ನಮ್ಮನ್ನಗಲಿದ್ದಾರೆ. ನಾವು ಕೂಡ ದೇವೇಗೌಡರ ಕುಟುಂಬದೊಂದಿಗೆ ಸಂಬಂಧವನ್ನಿಟ್ಟುಕೊಂಡಿರುವವರು. ನಮ್ಮ ರಾಜಕೀಯ ಜೀವನದಲ್ಲಿ ನಾವು ಅನೇಕ ಬಾರಿ ಮಾನ್ಯ ದೇವೇಗೌಡರಿರಬಹುದು, ಶ್ರೀ ಕುಮಾರಣ್ಣ ಇರಬಹುದು ಅಥವಾ ಶ್ರೀ ರೇವಣ್ಣ ಇರಬಹುದು, ಅವರ ಮನೆಗೆ

ಸತತವಾಗಿ ಹೋಗುತ್ತಿದ್ದೆವು. ಪ್ರತಿ ಬಾರಿಯೂ ದಿವಂಗತ ಚೆನ್ನಮ್ಮನವರು ತಮ್ಮ ಆದರಾತಿಥ್ಯಗಳಿಂದ ನಮ್ಮನ್ನು ಕಾಣುತ್ತಿದ್ದರು. ರಾಜಕಾರಣಿಗಳ ಹಿಂದೆ ಯಶಸ್ವಿಯಾಗಿ ಕೆಲಸ ಮಾಡಿದ್ದಾರೆ. "ಅನ್ನಪೂರ್ಣೆ" ಎನ್ನುವ ಹೆಸರನ್ನು ಅವರು ಪಡೆದುಕೊಂಡಿದ್ದಾರೆ. ಅವರು ಯಾವಾಗಲೂ ಮಾಧ್ಯಮಗಳ ಮುಂದೆ ಕಾಣಿಸಿಕೊಳ್ಳುತ್ತಿರಲಿಲ್ಲ. ಮಾನ್ಯ ಸಿದ್ಧರಾಮಯ್ಯನವರ ಧರ್ಮಪತ್ನಿ ಹಾಗೂ ಡಾ: ಯತೀಂದ್ರ ಸಿದ್ಧರಾಮಯ್ಯನವರ ತಾಯಿಯವರು ಕೂಡ ಸಮಾಜದಲ್ಲಿ ಎಲ್ಲಿಯೂ ಕಾಣಿಸಿಕೊಳ್ಳುವುದಿಲ್ಲ.

(ಮುಂದು)

(672) 13-08-2026 (12.50) ಕೆಜಿ-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಐವನ್ ಡಿ'ಸೋಜಾ (ಮುಂದು):**

ಅದೇ ರೀತಿ ಶ್ರೀಮತಿ ಚೆನ್ನಮ್ಮನವರು ಸಹ ಸಮಾಜದಲ್ಲಿ ಕಾಣಿಸಿಕೊಳ್ಳುತ್ತಿರಲಿಲ್ಲ. ಆದರೆ, ಅವರು ಅವರ ಸೇವೆಯನ್ನು ಮನೆಯಲ್ಲಿದ್ದುಕೊಂಡೇ ತಮ್ಮ ಗಂಡನಿಗೆ ಕೊಟ್ಟು ಅವರು ಸಮಾಜದಲ್ಲಿ ಉತ್ತಮ ಸೇವೆ ಸಲ್ಲಿಸುವಂತೆ ಮಾಡಿ ಸಮಾಜಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡಿದ್ದಾರೆ. ಶ್ರೀಮತಿ ಚೆನ್ನಮ್ಮನವರ ನಿಧನಕ್ಕೂ ಸಹ ನಾನು ಸಂತಾಪವನ್ನು ವ್ಯಕ್ತಪಡಿಸುತ್ತೇನೆ. ಈಗಾಗಲೇ ಅವರ ಹೆಸರಿನಲ್ಲಿ ಸ್ಮಾರಕವನ್ನು ಮಾಡಬೇಕೆಂದು ಎಲ್ಲರೂ ಹೇಳಿದ್ದಾರೆ. ಅದಕ್ಕೆ ನಾನು ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಈ 13 ಜನ ಮೃತರಿಗೆ ಹಾಗೂ ಶ್ರೀಮತಿ ಬಲ್ಕೀಸ್ ಬಾನು ಮೇಡಂ ಅವರು ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ತಾಲ್ಲೂಕಿನ ಮಾಜಿ ಶಾಸಕರಾದ ಶ್ರೀ ಚಂದ್ರಶೇಖರ್‌ರವರ ಹೆಸರು ಈ ಸಂತಾಪ ಸೂಚನೆಯಲ್ಲಿ ಬಿಟ್ಟುಹೋಗಿರುವುದರಿಂದ ಅವರ ಹೆಸರನ್ನು ಸಹ ಸೇರಿಸಿಕೊಳ್ಳಬೇಕೆಂದು ಹೇಳಿದ್ದಾರೆ. ಹೀಗಾಗಿ ಒಟ್ಟು 14 ಜನ ಮೃತರಿಗೆ ಸಂತಾಪವನ್ನು ವ್ಯಕ್ತಪಡಿಸುತ್ತಾ ತಾವು ತಂದಿರುವಂತಹ ಸಂತಾಪ ಸೂಚಕ ನಿರ್ಣಯವನ್ನು ಸಂಪೂರ್ಣವಾಗಿ ಬೆಂಬಲಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:-** ಶ್ರೀ ಎಸ್.ಎಲ್.ಬೋಜೇಗೌಡರವರೇ, ಇನ್ನು ಹೆಚ್ಚು ಸದಸ್ಯರು ಮಾತನಾಡುವವರಿದ್ದಾರೆ. ಅದಕ್ಕೆ ದಯವಿಟ್ಟು ಎಲ್ಲರೂ 5 ನಿಮಿಷಗಳಲ್ಲಿ ಮಾತನಾಡಿ ಮುಗಿಸಿ. ಏಕೆಂದರೆ, ಎಲ್ಲಾ repetition ಆಗುತ್ತದೆ. Repetition ಆದರೆ ಅದು ಕೇಳುವವರಿಗೆ.,

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ತಮಗೆ ಧನ್ಯವಾದಗಳು. ತಾವು ಸೂಕ್ಷ್ಮವಾಗಿ ಹೇಳಿದ್ದೀರಿ. ಅದನ್ನು ನಾವು ಅರ್ಥ ಮಾಡಿಕೊಳ್ಳಬೇಕು.

**ಸಭಾಪತಿಯವರು:-** ಶ್ರೀ ಎಸ್.ಎಲ್. ಭೋಜೇಗೌಡರವರೇ, ತಾವು ಅರ್ಥ ಮಾಡಿಕೊಳ್ಳುತ್ತೀರಿ. ಆದರೆ, ಬೇಗ ಮಾತನಾಡಿ ಮುಗಿಸಬೇಕು ಅಷ್ಟೇ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ, ಸಂತಾಪ ಸೂಚಕ ನಿರ್ಣಯಕ್ಕೆ ಸಹಮತವನ್ನು ವ್ಯಕ್ತಪಡಿಸುವ ಮೊದಲು, ಸಭಾಪತಿಗಳಾದ ತಾವು ಇದು ಕಛೇರಿಯಿಂದ ತಪ್ಪಾಗಿದೆಯೋ ಅಥವಾ ಏನಾಗಿದೆ ಎಂದು ನನಗೆ ಗೊತ್ತಿಲ್ಲ. ಸದನಕ್ಕೆ ಹೊಸದಾಗಿ ಬಂದ ಸದಸ್ಯರನ್ನು ಪರಿಚಯ ಮಾಡಿದ ನಂತರ ಈ ನಿರ್ಣಯವನ್ನು ತೆಗೆದುಕೊಳ್ಳಬೇಕಾಗಿತ್ತು. ಎರಡನೆಯದಾಗಿ, ಹೊಸದಾಗಿ ಸದನಕ್ಕೆ ಯಾವ ಸದಸ್ಯರು ಬಂದಿದ್ದಾರೆಂದು ನಮಗೆ ಗೊತ್ತಿಲ್ಲ. ಹಾಗಾಗಿ, ಅವರ ಪರಿಚಯವನ್ನು ಮಾಡಬೇಕಾಗಿದ್ದು, it is the bounden duty of the Legislative Council. ತಾವು ಸಭಾಪತಿಯ ಸ್ಥಾನದಲ್ಲಿ ಅದನ್ನು ಮಾಡಬೇಕಾಗಿತ್ತು. ಆದರೆ, ಅದನ್ನು ಮಾಡಿಲ್ಲ. ಇಲ್ಲಿ 13 ಜನ ದಿಗ್ಗಜರು ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡಿರುವಂತಹವರಾಗಿದ್ದಾರೆ. ಅವರಿಗೆ ಇಂದು ಇಲ್ಲಿ ಸಂತಾಪ ಸೂಚಕ ನಿರ್ಣಯವನ್ನು ಮಂಡಿಸಿದ್ದೀರಿ. ಎಲ್ಲಾ ಸಂತಾಪ ಸೂಚಕದಲ್ಲಿಯೂ ಸಹ ಅವರ ಕುಟುಂಬದಲ್ಲಿ ಎಷ್ಟು ಜನ ಮಕ್ಕಳು ಇದ್ದರು, ಅವರ ಕುಟುಂಬ ಹೇಗೆ ಇತ್ತು ಎಂಬ ಈ ಎಲ್ಲಾ ವಿವರಗಳು ಸಂತಾಪ ಸೂಚಕದಲ್ಲಿಯೂ ಬರುತ್ತವೆ. ಆದರೆ, ಇಲ್ಲಿ ಅದನ್ನು ಕೈಬಿಟ್ಟಿದ್ದೀರಿ. ದಯವಿಟ್ಟು ಆ ಕುಟುಂಬ ವರ್ಗದವರನ್ನು ಇದರೊಳಗೆ ತೋರಿಸಬೇಕಾಗಿತ್ತು. ಆದರೆ ತೋರಿಸಿಲ್ಲ. ಅದನ್ನು ತೋರಿಸಬೇಕಾಗಿತ್ತು ಎನ್ನುವ ವಿಚಾರವನ್ನು ಹೇಳುವುದಕ್ಕೆ ಬಯಸುತ್ತೇನೆ. ಅವರ ಕುಟುಂಬದಲ್ಲಿ ಅವರಿಗೆ ಎಷ್ಟು ಜನ ಹೆಣ್ಣು ಮಕ್ಕಳು, ಎಷ್ಟು ಜನ ಗಂಡು ಮಕ್ಕಳು ಇದ್ದರು ಎಂಬುದು ತಾವು ನಮಗೆ ನೀಡಿರುವಂತಹ ಸಂತಾಪ ಸೂಚಕ ನಿರ್ಣಯದ ಪ್ರತಿಯಲ್ಲಿ ಇಲ್ಲ. ಒಬ್ಬರದ್ದು ಇದ್ದರೆ ಸಾಕೇ? ನಾನು ಇರುವ ವಿಚಾರವನ್ನು ಹೇಳಿದ್ದೇನೆ.

**ಸಭಾಪತಿಯವರು:-** ಶ್ರೀ ಎಸ್.ಎಲ್.ಭೋಜೇಗೌಡರವರೇ, ಆಯಿತು ನೋಡೋಣ ಬಿಡಿ. ತಾವು ನನ್ನ ಕಡೆ ನೋಡಿಕೊಂಡು ಮಾತನಾಡಿ. ಆ ಕಡೆ ನೋಡಿಕೊಂಡು ಮಾತನಾಡಬೇಡಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು ತಮಗೆ ಸಲಹೆ ನೀಡಿದೆ. ತಾವು ಆ ಸಲಹೆಯನ್ನು ಸ್ವೀಕರಿಸಬಹುದು ಅಥವಾ ಬಿಟ್ಟರೆ ಬಿಡಬಹುದು. ಅದರಲ್ಲಿ ನನ್ನದು ಏನಿಲ್ಲ. ನಾನು ಇರುವ ವಿಚಾರದ ಬಗ್ಗೆ ಸಲಹೆ ಕೊಟ್ಟಿದ್ದೇನೆ. ಆ ವಿಚಾರ ಬರಬೇಕು. ಇದು ವಾಡಿಕೆ. ಶ್ರೀ ರಾಮಚಂದ್ರಗೌಡರವರು, ಶ್ರೀ ಡಿ.ಸುಧಾಕರ್‌ರವರು, ಶ್ರೀ ವೆಂಕಟರಮಣಪ್ಪನವರು, ಶ್ರೀ ಸಿ.ವೀರಣ್ಣನವರು, ಶ್ರೀ ಎಚ್.ಹನುಮಂತಪ್ಪನವರು, ಡಾ॥ ಎಸ್.ಆರ್.ರಾಮಸ್ವಾಮಿರವರು, ಶ್ರೀ ಆಶಾ

ಬೋಂಸ್ಲೆರವರು, ಶ್ರೀ ರಾಮಚಂದರ್ ಬೈಕಂಪಾಡಿರವರು, ಡಾ॥ ಗಿರೀಶ್ ಭಾರದ್ವಾಜ್‌ರವರು, ಡಾ॥ ಎಸ್.ಜಾನಕಿರವರು, ಶ್ರೀಮತಿ ಸಿ.ಎನ್.ಮುಕ್ತಾರವರು, ಪ್ರೊ.ಎ.ವಿ.ನರಸಿಂಹಮೂರ್ತಿ ಹಾಗೂ ಶ್ರೀಮತಿ ಚೆನ್ನಮ್ಮರವರು. ಈ 13 ಜನ ದಿಗ್ಗಜರು ಸಮಾಜದ ಮುಖ್ಯವಾಹಿನಿಯಲ್ಲಿ ಕೆಲಸ ಮಾಡಿರುವಂತಹ ರಾಜಕಾರಣಿಗಳು, ಸಾಹಿತಿಗಳು, ಹಿರಿಯ ಕಲಾವಿದರು, ಸಹಕಾರಿ ಕ್ಷೇತ್ರದಲ್ಲಿ, ಎಲ್ಲಾ ಕ್ಷೇತ್ರಗಳಲ್ಲಿ ಕೆಲಸ ಮಾಡಿರುವಂತಹ ಈ 13 ಜನ ದಿಗ್ಗಜರಿಗೆ ತಂದಿರುವ ಸಂತಾಪ ಸೂಚಕ ನಿರ್ಣಯಕ್ಕೆ ಸಹಮತವನ್ನು ವ್ಯಕ್ತಪಡಿಸುತ್ತೇನೆ. ತಾವು ಈಗಾಗಲೇ ಹೇಳಿದಂತೆ, ಮಾನ್ಯ ಸಭಾನಾಯಕರು, ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಅನೇಕ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ಹಾಗಾಗಿ, ಈ ಸಂದರ್ಭದಲ್ಲಿ ನಾನು ಅದನ್ನು ಮತ್ತೊಮ್ಮೆ ಪುನರುಚ್ಚಾರ ಮಾಡದೆ, ನಮ್ಮ ಶ್ರೀಮತಿ ಚೆನ್ನಮ್ಮನವರನ್ನು ತಾವೆಲ್ಲರೂ ಸಹ ಬಲ್ಲವರಾಗಿದ್ದೀರಿ. ವಿವಿಧ ರಾಜಕೀಯ ಪಕ್ಷಗಳಲ್ಲಿ ಕೆಲಸ ಮಾಡಿರುವಂತಹ ತಾವೆಲ್ಲರೂ ಸಹ ಆ ಮನೆಯ ನಂಟನ್ನು, ನಮ್ಮ ಸಭಾಪತಿಯವರು ಒಳಗೊಂಡಂತೆ ಎಲ್ಲರೂ ಹೊಂದಿರುವಂತಹರಾಗಿದ್ದೀರಿ.

ಮಾನ್ಯ ಸಭಾಪತಿಯವರೇ, “ವೇದ ಸುಳ್ಳಾದರೂ, ಗಾದೆ ಸುಳ್ಳಾಗುವುದಿಲ್ಲ” ಎಂಬ ಗಾದೆ ಮಾತಿದೆ. ಒಬ್ಬ ಯಶಸ್ವಿ ಪುರುಷನ ಹಿಂದೆ ಒಬ್ಬ ಮಹಿಳೆ ಯಾವ ರೀತಿ ಕೆಲಸ ಮಾಡಿದ್ದಾಳೆ ಮತ್ತು ಅಡುಗೆ ಮನೆಗೆ ಸೀಮಿತವಾಗಿದ್ದ ಶ್ರೀಮತಿ ಚೆನ್ನಮ್ಮನವರು ಒಬ್ಬ ಆದರ್ಶ ಮಹಿಳೆಯಾಗಿ, ಆದರ್ಶ ದಂಪತಿಗಳು ಮತ್ತು ಒಟ್ಟು ಕುಟುಂಬವನ್ನು ಯಾವ ರೀತಿ ಮುಂದೆ ತೆಗೆದುಕೊಂಡು ಹೋಗಬೇಕು ಎನ್ನುವ ವಿಚಾರದ ನಿದರ್ಶನದ ಇನ್ನೊಂದು ಹೆಸರೆ ‘ಶ್ರೀಮತಿ ಚೆನ್ನಮ್ಮನವರು’. ಈಗಾಗಲೇ ತಾವೆಲ್ಲರೂ ಅವರನ್ನು ‘ಅನ್ನಪೂರ್ಣೇಶ್ವರಿ’ ಎಂದು ಇದರಲ್ಲಿ ಕರೆದಿದ್ದೀರಿ. ಒಂದು ಅಡಿಗೆ ಮನೆಗೆ ಸೀಮಿತವಾದಂತಹ ಮಹಿಳೆ ನಾಡಿನ ಎಲ್ಲಾ ಜನರ ಪ್ರೀತಿಗೆ ಪಾತ್ರರಾಗುವಂತಹದ್ದು ಬಹಳ ವಿಶೇಷ. ಇಂತಹ ವಿಶೇಷ ಸಂದರ್ಭದಲ್ಲಿ ಶ್ರೀಮತಿ ಚೆನ್ನಮ್ಮನವರ ಹೆಸರನ್ನು ಮಾಡಿರುವಂತಹ ಸಂದರ್ಭದಲ್ಲಿ ಆ ಕುಟುಂಬಕ್ಕೆ ಸಾಕಷ್ಟು ರಾಜಕೀಯ ಹಿನ್ನೆಲೆ ಇರುವಂತಹ ಸಂದರ್ಭದಲ್ಲಿ ಆ ರಾಜಕೀಯದ ನಂಟನ್ನೇ ತಮಗೆ ಅಂಟಿಸಿಕೊಳ್ಳದೇ ಇಡೀ ಕುಟುಂಬವನ್ನು ಒಟ್ಟಾಗಿ ತೆಗೆದುಕೊಂಡು ಹೋಗುವಂತಹ ವ್ಯವಸ್ಥೆಯಲ್ಲಿ ಬಹು ದೊಡ್ಡ ಕೆಲಸವನ್ನು ಮಾಡಿದ್ದಾರೆ. ಅದು ಸಮಾಜದ ಮುಖ್ಯವಾಹಿನಿಯಲ್ಲಿ ಕೆಲಸ ಮಾಡಿರುವುದಕ್ಕಿಂತ ಮಿಗಿಲಾದುದು ಎಂದು ನಾನು ಅಭಿಪ್ರಾಯ ಪಡುತ್ತೇನೆ.

ಮಾನ್ಯ ಸಭಾಪತಿಯವರೇ, ಈ ಸಂದರ್ಭದಲ್ಲಿ ಈ ನಾಡಿನ ಎಲ್ಲಾ ಮಹಿಳೆಯರಿಗೆ role model ಶ್ರೀಮತಿ ಚೆನ್ನಮ್ಮನವರು. ಒಂದು ಅಡಿಗೆ ಮನೆಯಲ್ಲಿ ಸೀಮತವಾಗಿ ಕೆಲಸ ಮಾಡಿರುವಂತಹವರು role model

ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಹಾಗಾಗಿ, ಅವರ ಆದರ್ಶ, ತತ್ವ ಸಿದ್ಧಾಂತಗಳು ಮುಖ್ಯ. ಅಡಿಗೆ ಮನೆಯಲ್ಲಿ ಕುಳಿತುಕೊಂಡು ನಾಡಿನ ಸೇವೆ ಮಾಡಿ ನಾಡಿನ ಎಲ್ಲಾ ಜನರ ಪ್ರೀತಿಗೆ ಪಾತ್ರರಾಗಬಹುದು ಎನ್ನುವುದನ್ನು ತೋರಿಸಿಕೊಟ್ಟಿದ್ದಾರೆ. ಅದು ನಮ್ಮ ನಾಡಿನ ಎಲ್ಲಾ ಮಹಿಳೆಯರಿಗೆ ಆದರ್ಶವಾಗಲಿ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ತಾವು ಇಂದು ತಂದಿರುವಂತಹ ಸಂತಾಪ ಸೂಚಕ ನಿರ್ಣಯಕ್ಕೆ ನನ್ನ ಸಹಮತವನ್ನು ವ್ಯಕ್ತ ಪಡಿಸುತ್ತಾ, ಭಗವಂತ ಈ 13 ಜನ ಮೃತರ ಕುಟುಂಬಗಳಿಗೆ ಆಗಿರುವಂತಹ ನೋವನ್ನು ಭರಿಸುವಂತಹ ಶಕ್ತಿಯನ್ನು ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥನೆ ಮಾಡಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಂದು ನಮ್ಮನ್ನು ಆಗಲಿದ 13 ಜನ ಮಹಾನೀಯರ ಬದುಕು, ಸಾಧನೆ ಹಾಗೂ ಸಮಾಜದೊಂದಿಗಿನ ಅವರ ಒಡನಾಟವನ್ನು ಸ್ಮರಿಸುತ್ತಾ ಅವರಿಗೆ ಸಂತಾಪ ಸೂಚಿಸುವುದು ನಮ್ಮ ಕರ್ತವ್ಯವಾಗಿದೆ. ಶ್ರೀ ರಾಮಚಂದ್ರಗೌಡರವರು ಕೇವಲ ರಾಜಕಾರಣಿಯಾಗಿರದೆ, ಅವರು ವೃತ್ತಿಪರ ಇಂಜಿನೀಯರ್ ಆಗಿ ತಾಂತ್ರಿಕ ಜ್ಞಾನ ಹೊಂದಿದ ಮುತ್ಸದ್ದಿಯಾಗಿದ್ದರು. ಅವರು ಸತತ 30 ವರ್ಷಗಳ ಕಾಲ ಪದವೀಧರರ ಕ್ಷೇತ್ರವನ್ನು ಪ್ರತಿನಿಧಿಸಿ ಪ್ರಬುದ್ಧ ಸಂಸಂದೀಯ ಪಟುವಾಗಿ ಸದನದ ಗೌರವವನ್ನು ಹೆಚ್ಚಿಸಿದರು. ಶ್ರೀ ಡಿ.ಸುಧಾಕರ್‌ರವರು ಸದಾ ಸಾರ್ವಜನಿಕರ ಸಂಕಷ್ಟಗಳಿಗೆ ಮಿಡಿಯುತ್ತಿದ್ದ ಜನಸ್ನೇಹಿ ನಾಯಕರಾಗಿದ್ದರು. ಬರಗಾಲದಲ್ಲಿ ಮೂಕ ಪ್ರಾಣಿಗಳಿಗೆ ಮೇವನ್ನು ಒದಗಿಸಿ ಇವರ ಕಾಳಜಿ ಮತ್ತು ಗ್ರಾಮೀಣ ಭಾಗಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದ ಇವರ ಒಡನಾಟ ಜನಸಾಮಾನ್ಯರಲ್ಲಿ ಹಸಿರಾಗಿದೆ.

ಮಾನ್ಯ ಸಭಾಪತಿಯವರೇ, ಶ್ರೀ ವೆಂಕಟರಮಣಪ್ಪನವರು ತಳಮಟ್ಟದ ಪಂಚಾಯಿತಿ ವ್ಯವಸ್ಥೆಯಿಂದ ಸಚಿವ ಸ್ಥಾನದವರೆಗೆ ಬೆಳೆದು ಬಂದವರು. ಅವರು ಭ್ರಷ್ಟಾಚಾರದ ಒಂದು ಕಪ್ಪು ಚುಕ್ಕೆ ಇಲ್ಲದ ಅಪರೂಪದ ನಾಯಕರಾಗಿದ್ದಾರೆ. ಇವರು ಪಾವಗಡದ ಭಗೀರಥ ಎಂದೇ ಖ್ಯಾತರಾಗಿರುವ ಇವರು ಜನಸಾಮಾನ್ಯರ ಕುಡಿಯುವ ನೀರಿನ ದಾಹವನ್ನು ನೀಗಿಸಿದ ಮಹಾತ್ಮರಾಗಿದ್ದಾರೆ. ಶ್ರೀ ಸಿ.ವೀರಣ್ಣನವರು ವಕೀಲರಾಗಿದ್ದು ಇವರು ಶೋಷಿತರು, ಅದರಲ್ಲಿ ವಾಲ್ಮೀಕಿ ಸಮುದಾಯದ ಹಕ್ಕುಗಳಿಗಾಗಿ ನಿರಂತರವಾಗಿ ಧ್ವನಿ ಎತ್ತಿದ ಸಮುದಾಯದ ನಾಯಕರಾಗಿದ್ದರು. ಇವರು ಉಪ ಸಭಾಧ್ಯಕ್ಷರಾಗಿ ಸದನವನ್ನು ಮುನ್ನಡೆಸಿದ್ದಾರೆ. ಇವರ ನಿಸ್ವಾರ್ಥ ಸೇವೆ ಎಲ್ಲರಿಗೂ ಮಾದರಿ.

ಮಾನ್ಯ ಸಭಾಪತಿಯವರೇ, ಶ್ರೀ ಹೆಚ್.ಹನುಮಂತಪ್ಪನವರು ದಲಿತರು ಮತ್ತು ಹಿಂದುಳಿದ ವರ್ಗಗಳ ಪರವಾಗಿ ರಾಷ್ಟ್ರ ಮಟ್ಟದಲ್ಲಿ ಧ್ವನಿ ಎತ್ತಿದ ಧೀಮಂತ ನಾಯಕರಾಗಿದ್ದರು. ಇವರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಬದುಕಿಗೆ ಬೆಳಕಾದ ಒಡನಾಟ ಇವರದ್ದಾಗಿತ್ತು. ಡಾ॥

ಎಸ್.ಆರ್.ರಾಮಸ್ವಾಮಿರವರು ಸುಮಾರು 5 ದಶಕಗಳ ಕಾಲ ಪತ್ರಿಕೋದ್ಯಮ ಮತ್ತು ಸಾಹಿತ್ಯದ ಮೂಲಕ ಸಮಾಜವನ್ನು ಜಾಗೃತಗೊಳಿಸಿದ ಮಹಾನ್ ಚಿಂತಕರಾಗಿದ್ದರು. ಬಹು ಭಾಷಾ ಪಂಡಿತರಾಗಿದ್ದ ಇವರು ಗಾಂಧಿ ತತ್ವಗಳು ಮತ್ತು ಸ್ವದೇಶಿ ವಿಚಾರಗಳ ಮೂಲಕ ಯುವ ಪೀಳಿಗೆಯೊಂದಿಗೆ ಆಳವಾದ ಒಡನಾಟವನ್ನು ಹೊಂದಿದವರಾಗಿದ್ದರು.

ಮಾನ್ಯ ಸಭಾಪತಿಯವರೇ, ಶ್ರೀ ಸಿ.ಎನ್.ಮುಕ್ತಾರವರು ಕನ್ನಡ ಸಾಹಿತ್ಯ ಲೋಕಕ್ಕೆ 75 ಕ್ಕೂ ಹೆಚ್ಚು ಕಾದಂಬರಿಗಳನ್ನು ನೀಡಿದ್ದಾರೆ. ತಾಯಿತನದ ಸಹಜ ಸರಳತೆಯಿಂದ ಕಥೆಗಳ ಮೂಲಕ ಪ್ರತಿ ಮನೆಯ ಹೆಣ್ಣುಮಕ್ಕಳ ಮನಸ್ಸಿನೊಂದಿಗೆ ಭಾವನ್ಮಾತಕ ಒಡನಾಟ ಬೆಳೆಸಿದ್ದರು. ಪ್ರೊ. ಎ.ವಿ.ನರಸಿಂಹಮೂರ್ತಿಯವರು ಕರ್ನಾಟಕದ ಇತಿಹಾಸ ಮತ್ತು ನಾಣ್ಯ ಶಾಸ್ತ್ರಕ್ಕೆ ವೈಜ್ಞಾನಿಕ ಆಯಾಮ ನೀಡಿದ ಮಹಾನ್ ಸಂಶೋಧಕರಾಗಿದ್ದರು. ಇವರು ಮೈಸೂರು ವಿಶ್ವವಿದ್ಯಾಲಯದಲ್ಲಿ ಸಾವಿರಾರು ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ಜ್ಞಾನದ ಒಡನಾಟವನ್ನು ಮೂಡಿಸಿದ್ದರು. ಶ್ರೀ ಆಶಾ ಬೋಂಸ್ಲೆರವರು ದೇಶದ ಅತ್ಯುನ್ನತ ಪದ್ಮವಿಭೂಷಣ ಪುರಸ್ಕೃತರಾದ ಇವರು ಭಾರತೀಯ ಚಿತ್ರರಂಗದ ಧ್ವನಿಯಾಗಿದ್ದರು. 12,000 ಕ್ಕೂ ಹೆಚ್ಚು ಹಾಡುಗಳ ಮೂಲಕ ಕೋಟ್ಯಾಂತರ ಸಂಗೀತ ಪ್ರೇಮಿಗಳ ಹೃದಯದ ಒಡನಾಡಿಯಾಗಿದ್ದರು.

ಮಾನ್ಯ ಸಭಾಪತಿಯವರೇ, ಡಾ|| ಎಸ್.ಜಾನಕಿಯವರು 'ದಕ್ಷಿಣ ಭಾರತದ ಗಾನಕೋಗಿಲೆ ಜಾನಕಮ್ಮ' ಎಂದೇ ಕರೆಯಲ್ಪಡುವ ಇವರು ಭಾಷೆಯ ಗಡಿ ದಾಟಿ 48,000 ಕ್ಕೂ ಹೆಚ್ಚು ಹಾಡುಗಳನ್ನು ಹಾಡಿದ ಸರಸ್ವತಿ. ಕನ್ನಡ ನಾಡಿನ ಪ್ರತಿಯೊಬ್ಬರ ಸುಖ ದುಃಖದ ಭಾವನೆಗಳೊಂದಿಗೆ ಇವರ ಧ್ವನಿ ಬೆರೆತು ಹೋಗಿದೆ. ಶ್ರೀ ರಾಮಚಂದ್ರ ಬೈಕಂಪಾಡಿರವರು ನಮ್ಮ ಸಮಾಜದವರು. ಮೊಗವೀರ ಸಮಾಜದವರು ಮತ್ತು ನಮ್ಮ ಕಡೆ "ಕೋಲಿ, ಕಬ್ಬಲಿಗ" ಎಂದು ಕರೆಯುತ್ತೇವೆ. ಶ್ರೀ ರಾಮಚಂದ್ರ ಬೈಕಂಪಾಡಿರವರು ಇಡೀ ಕರ್ನಾಟಕ ರಾಜ್ಯದಲ್ಲಿ ಸಮುದಾಯದ ಸಂಘಟನೆಗಾಗಿ ತಮ್ಮ ಜೀವನವನ್ನೇ ಮುಡುಪಾಗಿ ಇಟ್ಟಂತಹ ಏಕೈಕ ನಾಯಕರಾಗಿದ್ದರು.

(ಮುಂದು)

**(673) 13.08.2026/1.00/ಎಂವಿ-ಕೆಎಸ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ಮುಂದು):**

ಕರಾವಳಿಯ ರಂಗಭೂಮಿ ಮತ್ತು ಸಿನಿಮಾ ಕಲಾವಿದರಾಗಿದ್ದ ಇವರು ಮೀನುಗಾರರು ಹಾಗೂ ಶ್ರಮಿಕ ವರ್ಗದವರ ಹಕ್ಕುಗಳಿಗಾಗಿ ನಿರಂತರವಾಗಿ ಹೋರಾಡಿದಂತಹ ಮಹಾನ್ ನಾಯಕರು. ಇವರ ನಿಧನದಿಂದ ನಮ್ಮ ಸಮುದಾಯಕ್ಕೆ ಅತ್ಯಂತ ನಷ್ಟವಾಗಿದೆ ಎಂಬ ಮಾತನ್ನು ಕೂಡ ಈ ಸದನದ ಗಮನಕ್ಕೆ ತರುತ್ತೇನೆ.

ಡಾ: ಗಿರೀಶ್ ಭಾರದ್ವಾಜ್ ರವರು "ತೂಗು ಸೇತುವೆಗಳ ಸರದಾರ" ಎಂದು ಪ್ರಸಿದ್ಧರಾದ ಇವರು ಆಧುನಿಕ ತಂತ್ರಜ್ಞಾನವನ್ನು ಬಳಸಿ, ದುರ್ಗಮ ಹಳ್ಳಿಗಳನ್ನು ಸಂಪರ್ಕಿಸುವ ಮೂಲಕ ಗ್ರಾಮೀಣ ಭಾಗದೊಂದಿಗೆ ಅಪೂರ್ವ ಒಡನಾಟ ಹೊಂದಿದ್ದ ಇವರು ನಿಜವಾದ ದೇಶಪ್ರೇಮಿ.

ಶ್ರೀಮತಿ ಚೆನ್ನಮ್ಮನವರು ಮಾಜಿ ಪ್ರಧಾನಿಗಳಾದ ಶ್ರೀ ಹೆಚ್.ಡಿ. ದೇವೇಗೌಡ ರವರ ಧರ್ಮ ಪತ್ನಿಯಾಗಿ ಅವರ 72 ವರ್ಷಗಳ ರಾಜಕೀಯ ಏಳುಬೀಳುಗಳ ಬದುಕಿನಲ್ಲಿ ಬೆನ್ನೆಲುಬಾಗಿ ನಿಂತು, ಸಾತ್ವಿಕ ಶಕ್ತಿಯಾಗಿದ್ದರು. ಮನೆಗೆ ಬಂದ ಪ್ರತಿಯೊಬ್ಬ ಸಾಮಾನ್ಯ ಕಾರ್ಯಕರ್ತನಿಗೂ ಪ್ರೀತಿಯಿಂದ ಉಣಬಡಿಸಿದ ಅನ್ನಪೂರ್ಣೇಶ್ವರಿ ರೂಪದ ಒಡನಾಟ ಸದಾ ಸ್ಮರಣೀಯ.

ಮಾನ್ಯ ಸಭಾಪತಿಯವರೇ, ಈ 13 ಜನ ಗಣ್ಯರು ವಿವಿಧ ಕ್ಷೇತ್ರಗಳಲ್ಲಿ ಸಲ್ಲಿಸಿದ ನಿಸ್ವಾರ್ಥ ಸೇವೆ ಹಾಗೂ ಸಮಾಜದೊಂದಿಗೆ ಅವರು ಹೊಂದಿದ್ದ ನಿಕಟ ಒಡನಾಟವು ಸದಾಕಾಲ ಹೆಸರಾಗಿರುತ್ತದೆ. ಈ ಮಹನೀಯರ ಅಗಲಿಕೆಯಿಂದ ನಮ್ಮ ನಾಡಿಗೆ ತುಂಬಲಾರದ ನಷ್ಟವಾಗಿದೆ. ಭಗವಂತನು ಇವರ ಆತ್ಮಕ್ಕೆ ಸದ್ಗತಿಯನ್ನು ನೀಡಲಿ ಮತ್ತೆ ಅವರ ಕುಟುಂಬ ವರ್ಗದವರಿಗೆ ಈ ದುಃಖವನ್ನು ಭರಿಸುವಂತಹ ಶಕ್ತಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಕೆ.ಎಸ್. ನವೀನ್ ರವರೆ, ತಾವು ತಮ್ಮ ಮಾತನ್ನು ಕೇವಲ ಐದು ನಿಮಿಷದೊಳಗೆ ಮುಗಿಸಬೇಕು. ಏಕೆಂದರೆ, ಎಲ್ಲಾ repeat ಆಗುತ್ತದೆ ಅಷ್ಟೆ. ಮತ್ತೇನು ಇಲ್ಲ.

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ನನ್ನ ಮಾತನ್ನು ಕೇವಲ ಮೂರು ನಿಮಿಷದಲ್ಲಿ ಮುಗಿಸುತ್ತೇನೆ.

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ನನ್ನ ಮಾತನ್ನು ಕೇವಲ ಎರಡು ನಿಮಿಷದಲ್ಲಿ ಮುಗಿಸಿದ್ದೇನೆ.

**ಸಭಾಪತಿಯವರು:–** ಈಗ ಅವರೆಲ್ಲರೂ ಸಹ ಹೊಸಬರು ಮಾತನಾಡುತ್ತೇನೆಂದು ಹೇಳುತ್ತಾರೆ. ಅವರು ಮಾತನಾಡಲಿ ಬಿಡಿ. ಇವತ್ತು ಬೇರೆ ಏನೂ ಕಲಾಪವಿಲ್ಲ.

**ಶ್ರೀ ಗೋವಿಂದ ರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾವು ಅವರ ಬಗ್ಗೆ ಹೇಳಿದ್ದು ಅಷ್ಟೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಈಗ ತಮ್ಮ ಕಡೆಯಿಂದ ಎರಡು-ಮೂರು smile ಬಂದಿದೆ. ತಾವು ಪೀಠಕ್ಕೆ ಬಂದು ಕುಳಿತುಕೊಂಡಾಗ ಏಕೆ ಇಷ್ಟು ದಪ್ಪ ಮುಖ ಮಾಡಿಕೊಂಡು ಕುಳಿತುಕೊಂಡಿದ್ದಾರೆಂದು ಗೊತ್ತಾಗಿರಲಿಲ್ಲ. ತಾವು ತಮ್ಮ ಮುಖವನ್ನು ಬಹಳ ದಪ್ಪ ಮಾಡಿಕೊಂಡು ಕುಳಿತುಕೊಂಡಿದ್ದೀರಿ. ನಾನು ಅದನ್ನು ಹೇಳಬೇಕೆಂದು ಇದ್ದೆ. ಆದರೆ, ತಾವು ಸಿಟ್ಟಿನಲ್ಲಿ ಕುಳಿತುಕೊಂಡಿದ್ದೀರಿ.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೇ, ತಾವು ಕೋಪ ಮಾಡಿಕೊಂಡು ಕುಳಿತುಕೊಂಡಿದ್ದೀರಿ.

**ಸಭಾಪತಿಯವರು:-** ಮಾನ್ಯ ಭೋಜೇಗೌಡರೆ, ಒಂದು ನಿಮಿಷ. ಈಗ ಬೇರೆ ಏನೂ ಕಲಾಪವಿಲ್ಲ. ಅದಕ್ಕೆ ಅವರು ಐದೈದು ನಿಮಿಷ ಮಾತನಾಡಲಿ ಎಂದು ಹೇಳುತ್ತೇನೆ. ಅವರು ಐದು-ಹತ್ತು ನಿಮಿಷದಲ್ಲಿ ತಮ್ಮ ಮಾತನ್ನು ಮುಗಿಸಿಬಿಡಲಿ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನನಗೆ ಗೊತ್ತಾಯಿತು. ತಾವು ಅವಕಾಶ ಮಾಡಿಕೊಟ್ಟಿದ್ದೀರಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುತ್ತಿರುವುದು ಏನೆಂದರೆ, ತಾವು ಏಕೆ ಬಹಳ serious ಆಗಿ ಇದ್ದೀರಿ ಎಂದು ಕೇಳುತ್ತಿದ್ದಾರೆ.

**ಸಭಾಪತಿಯವರು:-** ನನಗೆ ಅವರ ಮೇಲೆ ಕೋಪ ಇತ್ತು, ಅದಕ್ಕೆ ಆ ರೀತಿ ಇದ್ದೆ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಮಗೆ ಜವಾಬ್ದಾರಿ ಜಾಸ್ತಿಯಾಗಿದೆ.

**ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಇದು ಸಂತಾಪ ಸೂಚನಾ ನಿರ್ಣಯ ಅಲ್ಲವೇ?

**ಸಭಾಪತಿಯವರು:-** ಹೌದು ಇದು ಸಂತಾಪ ಸೂಚನಾ ನಿರ್ಣಯ. ಈಗ ಒಬ್ಬೊಬ್ಬರು ಒಬ್ಬೊಬ್ಬರಿಗೆ ಹತ್ತಿರ ಇರುತ್ತಾರೆ ಮತ್ತೆ ಅವರಿಗೆ close ಇರುತ್ತಾರೆ. ಹಾಗಾಗಿ, ಅವರು ಎರಡು ನಿಮಿಷ ಮಾತನಾಡಲಿ ಎಂದಷ್ಟೆ, ಬೇರೆ ಏನೂ ಇಲ್ಲ. ಈಗ ಎಲ್ಲರೂ ಎಲ್ಲರಿಗೂ ಸಹ ಗೊತ್ತಿರುವುದಿಲ್ಲ. ಅವರ ಹತ್ತಿರದಲ್ಲಿ ಗೊತ್ತಿರುವುದರಿಂದ ನಾನು ಮಾತನಾಡಬೇಕಿತ್ತು ಎಂದು ಅವರ mind ನಲ್ಲಿ ಅನ್ನಿಸುತ್ತದೆ. ಆ ಕಾರಣಕ್ಕಾಗಿ ಅವರು ಮಾತನಾಡಲಿ ಎಂದು ಹೇಳಿದ್ದೇನೆ ಅಷ್ಟೆ. ಈಗ ಒಬ್ಬರ ಬಗ್ಗೆ ಮಾತನಾಡುವುದಕ್ಕೆ ಹೋದಾಗ ಎಲ್ಲರ ಬಗ್ಗೆಯೂ ಸಹ ಮಾತನಾಡಬೇಕಾಗುತ್ತದೆ. ಅದಕ್ಕೆ repeat ಮಾಡಬೇಡಿ ಎಂದು ಹೇಳುತ್ತಿದ್ದೇನೆ. ನಾವು ಎಲ್ಲರ ಪರವಾಗಿಯೂ ಸೇರಿಸಿ ಓದಿದ್ದೇವೆ.

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅಗಲಿದ ಗಣ್ಯರಿಗೆ ಸಂತಾಪವನ್ನು ವ್ಯಕ್ತಪಡಿಸುತ್ತಾ, ಇವತ್ತಿನ ಈ ಒಂದು ಸಂತಾಪ ಸೂಚನೆಯಲ್ಲಿ 13 ಜನ ಗಣ್ಯರಿಗೆ ನಾವು ಸಂತಾಪವನ್ನು ವ್ಯಕ್ತಪಡಿಸುತ್ತಿದ್ದೇವೆ. ಅದರಲ್ಲಿ ಶ್ರೀ ಹೆಚ್. ಹನುಮಂತಪ್ಪ, ಶ್ರೀ ಡಿ. ಸುಧಾಕರ್ ಮತ್ತು ಶ್ರೀಮತಿ ಸಿ.ಎನ್. ಮುಕ್ತಾ ರವರು ಈ ಮೂರು ಜನರು ನಮ್ಮ ಜಿಲ್ಲೆಯವರು. ನನಗೆ ಶ್ರೀ ಹೆಚ್. ಹನುಮಂತಪ್ಪನವರ ಜೊತೆ ಕೆಲಸ ಮಾಡುವಂತಹ ಅವಕಾಶ ಸಿಕ್ಕಿತ್ತು. ಮಾಜಿ ಮುಖ್ಯಮಂತ್ರಿಗಳಾದಂತಹ ಶ್ರೀ ಎಸ್.ನಿಜಲಿಂಗಪ್ಪ ಮೆಮೋರಿಯಲ್ ಟ್ರಸ್ಟ್‌ನಲ್ಲಿ ಶ್ರೀ ಹೆಚ್. ಹನುಮಂತಪ್ಪನವರು ಆ ಟ್ರಸ್ಟ್‌ನ ಅಧ್ಯಕ್ಷರಾಗಿದ್ದರು. ನಾನು ಅದರಲ್ಲಿ ಟ್ರಸ್ಟಿಯಾಗಿ ಅವರ ಜೊತೆಯಲ್ಲಿ ಕೆಲಸ ಮಾಡುತ್ತಿದ್ದೆ. ಒಂದು ಸಾಮಾನ್ಯ ಕುಟುಂಬದಿಂದ ಬಂದಂತಹ ಶ್ರೀ ಹೆಚ್. ಹನುಮಂತಪ್ಪನವರು Physical Education (P.E.) Teacher ಆಗಿ ತಮ್ಮ ವೃತ್ತಿ ಜೀವನವನ್ನು ಪ್ರಾರಂಭ ಮಾಡಿದ್ದರು. ಅಂದರೆ, ಅವರು P.E. Teacher ಆಗಿದ್ದರು. ತದನಂತರ ಅವರಿಗೆ ಈ ರೀತಿಯ ಸಾಮಾಜಿಕ ಚಟುವಟಿಕೆಯಲ್ಲಿ ಅವತ್ತಿನ ರಾಜಕಾರಣಿಗಳ ಜೊತೆಯಲ್ಲಿ ಒಡನಾಟ ಪ್ರಾರಂಭವಾಗಿ ಅದರಲ್ಲೂ ವಿಶೇಷವಾಗಿ ಶ್ರೀ ಜಾಫರ್ ಷರೀಫ್ ಮತ್ತು ಶ್ರೀ ಎಸ್. ನಿಜಲಿಂಗಪ್ಪನವರಿಗೆ ಹತ್ತಿರವಾಗುತ್ತಾ, ಕೊನೆಗೆ ಅವರು ಕಾಂಗ್ರೆಸ್ ಪಕ್ಷದಿಂದ ರಾಜ್ಯಸಭಾ ಸದಸ್ಯರಾಗಿ ಮತ್ತು Central Silk Board ನ ಅಧ್ಯಕ್ಷರಾಗಿ ಬಹಳ ವರ್ಷಗಳ ಕಾಲ ಕೆಲಸ ಮಾಡಿದ್ದರು. ಅವರು ನಿಧನರಾಗುವುದಕ್ಕಿಂತ ನಾಲ್ಕು ದಿನಗಳ ಮುಂಚೆ ಟ್ರಸ್ಟ್ ಮೀಟಿಂಗ್ ಇತ್ತು. ಆ ಟ್ರಸ್ಟ್‌ನ ಮೀಟಿಂಗ್‌ನಲ್ಲಿ ನಾವೆಲ್ಲಾ ಟ್ರಸ್ಟಿಗಳು ಕುಳಿತುಕೊಂಡಿದ್ದಾಗ, ಇನ್ನೇನು ಸಭೆ ಮುಕ್ತಾಯವಾಗಬೇಕು ಮತ್ತು ಅಧ್ಯಕ್ಷರು ಮಾತನಾಡಬೇಕು ಎಂದಾಗ, ಅವರು ಆಗ ಹೇಳಿದ್ದು ಏನೆಂದರೆ, ನಾನು ಹೊರಡುವ ಸಮಯ ಬಂದು ಬಿಟ್ಟಿದೆಯಪ್ಪ, ನಾನು ಹೊರಟುಬಿಡುತ್ತೇನೆ. ಇನ್ನು ಈ ಟ್ರಸ್ಟ್ ಅನ್ನು ಮುಂದುವರೆಸಿಕೊಂಡು ಹೋಗಿ ಎಂದರು. ಆಗ ಅಲ್ಲಿಂದತಹ ನಾವೆಲ್ಲರೂ ಅವರಿಗೆ ಏನು ಸರ್ ಈ ರೀತಿ ಹೇಳುತ್ತಿದ್ದೀರಿ? ನೀವು ಇನ್ನು ಬಹಳ ವರ್ಷಗಳ ಕಾಲ ಇರಬೇಕು ಎಂದು ಹೇಳಿದೆವು. ಅದಕ್ಕೆ ಅವರು ನಾನು ಇನ್ನೇನು ಕೆಲವೇ ದಿವಸಗಳಲ್ಲಿ ಹೊರಡುತ್ತೇನೆಂದು ಹೇಳಿದರು. ಅವರ ಕೊನೆಯ ಎರಡು ಆಸೆಗಳು ಏನಿತ್ತು ಎಂದರೆ, ಮೌಲ್ಯಾಧಾರಿತ ರಾಜಕಾರಣ ಮಾಡಬೇಕು. ಅದರಲ್ಲೂ ವಿಶೇಷವಾಗಿ ಶ್ರೀ ಎಸ್. ನಿಜಲಿಂಗಪ್ಪನವರ ಹೆಸರಿನಲ್ಲಿ value based politics ಕರ್ನಾಟಕದಲ್ಲಿ ಆಗುವಂತಹ ರೀತಿಯಲ್ಲಿ ಎರಡೂ ಸದನಗಳ ಶಾಸಕರು ಪ್ರಾರಂಭದಲ್ಲಿ ಗೆದ್ದು ಬಂದ ತಕ್ಷಣ, ಒಂದಿಷ್ಟು ಹಿಂದಿನ ಕರ್ನಾಟಕದ ರಾಜಕೀಯ ಯಾವ ರೀತಿ ನಡೆಯುತ್ತಿತ್ತು ಮತ್ತು ಎಂತೆಂತ ಮಹಾನೀಯರು ಕರ್ನಾಟಕ ರಾಜಕೀಯ ಕ್ಷೇತ್ರಕ್ಕೆ ಕೊಡುಗೆಯನ್ನು ಕೊಟ್ಟಿದ್ದಾರೆ ಎಂದು ಅವರಿಗೆ ತರಬೇತಿ ನೀಡುವಂಥದ್ದು ಆಗಬೇಕು. ಅಲ್ಲಿಂದ ಹಿಡಿದು ಗ್ರಾಮ ಪಂಚಾಯಿತಿ

ಸದಸ್ಯರವರೆಗೆ ತರಬೇತಿಯನ್ನು ಕೊಡುವಂತಹ ಕೆಲವು ಕೋರ್ಸ್‌ಗಳನ್ನು ಮಾಡಿಸಬೇಕೆಂದು ಅವರ ಚಿಂತನೆಯಲ್ಲಿ ಇತ್ತು. ಬಹುಶಃ ಆ ರೀತಿಯಾದಂತಹ ಚಿಂತನೆಗಳು ನಮ್ಮ ಕರ್ನಾಟಕ ರಾಜ್ಯದಲ್ಲಿ ಅನೇಕ ರಾಜಕಾರಣಿಗಳಿಗೆ ಇದ್ದಂತಹ ಕಾರಣದಿಂದ ಮೌಲ್ಯಾಧಾರಿತ ರಾಜಕಾರಣ ಕರ್ನಾಟಕದಲ್ಲಿ ಬಹಳ ಎತ್ತರಕ್ಕೆ ಇತ್ತು. ನಾನು ಈ ಸದನದ ಮೂಲಕ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ಶ್ರೀ ಎಸ್. ನಿಜಲಿಂಗಪ್ಪನಂತಹ ಮಹನೀಯರ ಹೆಸರಿನಲ್ಲಿ ಆಗಿರಬಹುದು, ನಮ್ಮ ರಾಜ್ಯನ್ನು ಆಳಿರುವಂತಹ ಇನ್ನು ಅನೇಕ ಜನ ಮುಖ್ಯಮಂತ್ರಿಗಳ ಹೆಸರಿನಲ್ಲಿ ರಾಜಕಾರಣ ಕ್ಷೇತ್ರಕ್ಕೆ ಬರುವಂತಹವರಿಗೆ ಒಂದಷ್ಟು ತರಬೇತಿಗಳನ್ನು ನೀಡುವಂತಹ ಕಾರ್ಯಾಗಾರಗಳನ್ನು ಮಾಡುವಂತಹ ಅವರ ಆಸೆ ಏನಿತ್ತು, ಅದನ್ನು ಸಾಕಾರಗೊಳಿಸುವಂತಹ ನಿಟ್ಟಿನಲ್ಲಿ ನಾವೆಲ್ಲರೂ ಕೂಡ ಪ್ರಯತ್ನ ಮಾಡಿದರೆ, ಅವರಿಗೆ ನಿಜವಾಗಿಯೂ ಕೂಡ ಶ್ರದ್ಧಾಂಜಲಿಯನ್ನು ಸಲ್ಲಿಸಿದ ಹಾಗೆ ಆಗುತ್ತದೆ.

ಮತ್ತೊಬ್ಬರು ನನಗೆ ಬಹಳ ಆತ್ಮೀಯರಾಗಿದ್ದಂತಹವರು ಎಂದರೆ, ಸಚಿವರಾಗಿದ್ದಂತಹ ಶ್ರೀ ಡಿ. ಸುಧಾಕರ್‌ರವರು. ಸದನದಲ್ಲಿ ಬಜೆಟ್ ಅಧಿವೇಶನದ ಕೊನೆಯ ದಿವಸ ನನ್ನನ್ನು ಕರೆದು, ನೋಡೋ ನಾನು ಕಾಲನ್ನು ಆಪರೇಷನ್ ಮಾಡಿಸಿಕೊಳ್ಳುತ್ತಿದ್ದೇನೆ. ನಾನು ಮಗನ ಮದುವೆಗೆ ಬಹಳ ಓಡಾಟ ಮಾಡಿರುವುದರಿಂದ ನನಗೆ ಕಾಲು ನಡೆಯುವುದಕ್ಕೆ ಕಷ್ಟವಾಗಿದೆ. ಅದು ಅಷ್ಟು ನೋವಾಗಿಬಿಟ್ಟಿದೆ. ಕಾಲು ಆಪರೇಷನ್ ಮಾಡಿಸಿಕೊಳ್ಳಬೇಕೆಂದು decide ಮಾಡಿಬಿಟ್ಟು, ನಾಳೆ ಅಥವಾ ನಾಡಿದ್ದು ಆಸ್ಪತ್ರೆಗೆ ಅಡ್ಮಿಷನ್ ಆಗುತ್ತಿದ್ದೇನೆಂದು ಹೇಳಿದರು. ಸಹಜವಾಗಿ ಒಂದು ಮಂಡಿ ನೋವಿನ ಸರ್ಜರಿಗೆ ಹೋದಂತಹವರಿಗೆ ಎರಡೆರಡು ತಿಂಗಳುಗಳ ಕಾಲ ಐ.ಸಿ.ಯು. ನಲ್ಲಿ ಇರುವಂತಹ ರೀತಿಯಲ್ಲಿ ಅವರಿಗೆ ಆರೋಗ್ಯದಲ್ಲಿ ಏರುಪೇರಾಯಿತು ಎಂದರೆ, ಯಾರಿಗಾದರೂ ಕೂಡ ಒಂದು ರೀತಿಯ ಆಶ್ಚರ್ಯವಾಗುತ್ತದೆ. ಏಕೆಂದರೆ, ಸಂಪೂರ್ಣವಾಗಿ ಆರೋಗ್ಯವಾಗಿದ್ದಂತಹವರು, ಯಾವುದೇ ರೀತಿಯಾದಂತಹ ಆರೋಗ್ಯದ ಬೇರೆ ಗಂಭೀರವಾದಂತಹ ಸಮಸ್ಯೆ ಇಲ್ಲ. ಅವರು ಹೋಗಿದ್ದು ಮಂಡಿ ನೋವಿನ ಸರ್ಜರಿಗೋಸ್ಕರ, ಆದರೆ ಅವರಿಗೆ ಬೇರೆ ದೊಡ್ಡ infection ಗಳಾಗಿ ಕೊನೆಗೆ ಅವರು ಎರಡು ತಿಂಗಳುಗಳ ಕಾಲ ಐ.ಸಿ.ಯು.ನಲ್ಲಿ ಇದ್ದುದ್ದನ್ನು ಈ ರಾಜ್ಯದ ಜನರು ನೋಡಿದ್ದಾರೆ. ಬಹುಶಃ ಅದು ಎಷ್ಟು ಜನರಿಗೆ ಗೊತ್ತಿದೆಯೋ ಏನೋ ನನಗೆ ಗೊತ್ತಿಲ್ಲ. ಸರ್ಕಾರದಲ್ಲಿ ಇದ್ದಂತಹವರಿಗೆ ಅದರ ಬಗ್ಗೆ ಮಾಹಿತಿ ಇರಬಹುದು. ಅವರಿಗೆ embolism ಎಂದು ಒಂದು very rare incidence. ಅದು Orthopaedic Surgery ಆಗಬೇಕಾದರೆ ಆಗುವಂತಹ ಒಂದು ಅತೀ ಅಪರೂಪದ ಸಮಸ್ಯೆ ಆ ಸರ್ಜರಿ ಆದಂತಹ ಸಂದರ್ಭದಲ್ಲಿ ಆಗಿದೆ ಎಂಬುದು ಇರುವಂತಹ ಮಾಹಿತಿಯಾಗಿದೆ. ನಾನು ಸರ್ಕಾರ ಮತ್ತು ಸದನಕ್ಕೆ ವಿನಂತಿ ಮಾಡುವುದೇನೆಂದರೆ, ವಿಶೇಷವಾಗಿ ಈ

ರೀತಿಯ ಸಾಂವಿಧಾನಿಕ ಹುದ್ದೆಯಲ್ಲಿರುವಂತಹವರು ಅಥವಾ ಗಣ್ಯ ಜವಾಬ್ದಾರಿಗಳನ್ನು ಸ್ವೀಕಾರ ಮಾಡಿರುವಂತಹವರು ಈ ರೀತಿಯ ಬಹುಮುಖ್ಯವಾದ ಸರ್ಜರಿಯಾಗಿ, ಈ ರೀತಿಯ ಸಮಸ್ಯೆಯಿಂದ ದೀರ್ಘಕಾಲ ಆಸ್ಪತ್ರೆಯಲ್ಲಿ ಇದ್ದಾರೆಂದರೆ, ನಮ್ಮ ಒಬ್ಬರೊ ಇಬ್ಬರೊ expert ಅನ್ನು ನೇಮಕ ಮಾಡಿ, ಸ್ವಲ್ಪ ಆ ಕುಟುಂಬದವರ ಜೊತೆ ಮತ್ತು ಆಸ್ಪತ್ರೆಯವರ ಜೊತೆ ಚರ್ಚೆ ಮಾಡುವಂಥದ್ದಕ್ಕೆ ಏನಾದರೂ ಒಂದು ಸೂತ್ರವನ್ನು ಕಂಡುಹಿಡಿದರೆ ಒಳ್ಳೆಯದಾಗುತ್ತಿತ್ತು. ಏಕೆಂದರೆ, ಕುಟುಂಬದವರಿಗೆ ಒತ್ತಡ ಇರುತ್ತದೆ. ಅಂದರೆ, ಏನಾದರೂ ಮಾಡಿ ಅವರನ್ನು ಉಳಿಸಿಕೊಳ್ಳಬೇಕೆಂದು, ಅವರು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುತ್ತಾರೆ. ಆದರೆ, ಯಾವುದು ಯಶಸ್ವಿಯಾಗುತ್ತದೆ, ಯಾವುದು ಯಶಸ್ವಿಯಾಗುವುದಿಲ್ಲ ಎನ್ನುವಂಥದ್ದನು ಆಲೋಚನೆ ಮಾಡುವುದಕ್ಕೆ ಕಷ್ಟವಾಗುತ್ತದೆ. ಏಕೆಂದರೆ, ಶ್ರೀ ಡಿ. ಸುಧಾಕರ್‌ರವರು ಜೈನ ಸಮುದಾಯದಿಂದ ಬಂದಿದ್ದರೂ ಕೂಡ ಎಲ್ಲರ ಜೊತೆಗೆ ಮತ್ತು ನಮ್ಮ ಭಾರತೀಯ ಜನತಾ ಪಕ್ಷದ ಸರ್ಕಾರ ಬರುವಂತಹ ಸಂದರ್ಭದಲ್ಲೂ ಕೂಡ ಅವರು 2008ರಲ್ಲಿ ಸಚಿವರಾಗಿದ್ದರು. ಅವರು ಒಳ್ಳೆಯ ಜನಾನುರಾಗಿಯಾದಂತಹ ವ್ಯಕ್ತಿ. ಅವರು ಪರಿಚಯವಿಲ್ಲದ ನೂರಾರು ಜನರಿಗೆ ಶಿಕ್ಷಣ ಕೊಡಿಸಿ, ಅವರೆಲ್ಲರೂ ಕೂಡ ತಮ್ಮ ಜೀವನದಲ್ಲಿ ತಮ್ಮ ಕಾಲ ಮೇಲೆ ನಿಲ್ಲುವಂತೆ ಮಾಡಿದ್ದಾರೆ. ಹಾಗಾಗಿ, ನಾನು ಇವತ್ತು 13 ಜನ ಗಣ್ಯರು ಏನು ನಮ್ಮನ್ನು ಅಗಲಿದ್ದಾರೆ, ಅವರ ಆತ್ಮಕ್ಕೆ ಚಿರಶಾಂತಿಯನ್ನು ಭಗವಂತ ನೀಡಲಿ. ಅವರ ಕುಟುಂಬದ ಸದಸ್ಯರಿಗೆ ಅವರನ್ನು ಕಳೆದುಕೊಂಡಿರುವ ಸಂದರ್ಭದಲ್ಲಿ ಅವರಿಗೆ ಶಕ್ತಿ ಭರಿಸುವಂಥದ್ದನ್ನು ದೇವರು ಕರುಣಿಸಲಿ ಎಂದು ಹೇಳುತ್ತಾ, ನಾನು ಈ ಸಂತಾಪ ಸೂಚನೆಯನ್ನು ಬೆಂಬಲಿಸುತ್ತೇನೆ.

(ಮುಂದು)

(674) 13.08.2026 ವೈಎಲ್-ಕೆಎಸ್ 1.10 (ಸಭಾಪತಿಯವರ ಉಪಸ್ಥಿತಿ)

**ಡಾ|| ಉಮಾಶ್ರೀ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಇಂದು ತಾವು ಮಂಡಿಸಿರುವಂಥ ಸಂತಾಪ ಸೂಚನೆಯನ್ನು ಸಂಪೂರ್ಣವಾಗಿ ಬೆಂಬಲಿಸುತ್ತಾ, ಈ ಒಂದು ಸದನದಲ್ಲಿ ಮತ್ತು ವಿಧಾನಸಭೆಯಲ್ಲಿ ಕೆಲಸ ಮಾಡಿದಂಥ ನಾಯಕರನ್ನು, ಸಾಂಸ್ಕೃತಿಕ ಕ್ಷೇತ್ರದಲ್ಲಿ ದುಡಿದವರನ್ನು ಹಾಗೂ ಸಂಸದರಾಗಿ ದುಡಿದ ಅನೇಕ ಜನರನ್ನು ಕಳೆದುಕೊಂಡಿದ್ದೇವೆ. ಅದರಲ್ಲಿ ಬಹಳ ಹಿರಿಯ ರಾಜಕಾರಣಿಯಾದ ಶ್ರೀಯುತ ರಾಮಚಂದ್ರೇಗೌಡರು ಬಗ್ಗೆ ಹೇಳುವುದಾದರೆ, ನಾನು 2000 ದಿಂದ 2006ನೇ ಸಾಲಿನವರೆಗೂ ಒಬ್ಬ ಸದಸ್ಯೆಯಾಗಿ ಕೆಲಸ ಮಾಡಿದಂಥ ಸಂದರ್ಭದಲ್ಲಿ, ಸದರಿಯವರನ್ನು ಬಹಳ ಹತ್ತಿರದಿಂದ ನೋಡಿದ್ದೇನೆ. ಈ ಸದನದಲ್ಲಿ ಬಹಳಷ್ಟು ಜನ ಹಿರಿಯ ನಾಯಕರಾದ ಶ್ರೀಯುತರುಗಳಾದ ನಾಣಯ್ಯ, ಹೆಚ್.ಕೆ.ಪಾಟೀಲ್, ಬಸವರಾಜ ಶಿವಲಿಂಗಪ್ಪ ಹೊರಟ್ಟಿ, ಎಸ್.ಆರ್.ಬೊಮ್ಮಾಯಿ, ಕೆ.ಬಿ.ಶಾಣಪ್ಪನವರಂತಹ ಹೀಗೆ ಬಹಳಷ್ಟು ಹಿರಿಯ ಸದಸ್ಯರ ಸಾಲಿನಲ್ಲಿ ಬಂದವರಲ್ಲಿ

ರಾಮಚಂದ್ರೇಗೌಡರು ಒಬ್ಬರು. ಯಾವುದೇ ಪಕ್ಷದಲ್ಲಿದ್ದರೂ, ಯಾವುದೇ ಪಕ್ಷದಲ್ಲಿರುವವರನ್ನು ಬಹಳ ಹತ್ತಿರದಿಂದ ತಮ್ಮವರಾಗಿಸಿಕೊಳ್ಳುವ ಶಕ್ತಿ ಅವರಿಗೆ ಇತ್ತು. ಕಾಂಗ್ರೆಸ್ ಪಕ್ಷವಿರಲಿ, ಯಾವುದೇ ಪಕ್ಷವಿರಲಿ, ಎಲ್ಲರಿಗೂ ಮಾರ್ಗದರ್ಶನ ನೀಡುತ್ತಿದ್ದರು. ಯಾವುದಾದರೂ ವಿಚಾರವಾಗಿ ನಮಗೆ ಗೊತ್ತಾಗಲಿಲ್ಲವೆಂದರೆ, ಇಂತಹ ಹಿರಿಯ ಸದಸ್ಯರು ಆ ಕಾಲದಲ್ಲಿ ನಮಗೆ ಮಾರ್ಗದರ್ಶನ ನೀಡುತ್ತಿದ್ದರು, ಬಹಳ ಸಜ್ಜನರಾಗಿದ್ದರು. ಇವತ್ತಿನ ದಿವಸ ಅವರನ್ನು ಅಗಲಿದ್ದೇವೆ. ಕಾರ್ಪೋರೇಟರ್‌ರಾಗಿ ಆಯ್ಕೆಗೊಂಡು, ನಂತರ ಶಾಸಕರಾಗಿ ಹಾಗೂ ಸಚಿವರಾಗಿ ಕೆಲಸವನ್ನು ನಿರ್ವಹಿಸಿರುವುದು ನಿಜಕ್ಕೂ ಹೆಮ್ಮೆ ಪಡುವಂಥ ವಿಚಾರವಾಗಿದ್ದು, ಅನೇಕ ರಾಜಕಾರಣಿಗಳು ಹಾಗೆಯೇ ಬೆಳೆದು ಬಂದಿದ್ದಾರೆ. ಶ್ರೀಯುತರ ನಿಧನವು ರಾಜಕೀಯ ಕ್ಷೇತ್ರಕ್ಕೆ ತುಂಬಾಲಾಗದಷ್ಟು ನಷ್ಟವಾಗಿದೆ ಎಂದು ಭಾವಿಸುತ್ತೇನೆ.

ಶ್ರೀಯುತ ಡಿ.ಸುಧಾಕರ್‌ರವರು ಸಹ ಸಣ್ಣ ವಯಸ್ಸಿನಲ್ಲಿಯೇ ನಮ್ಮನ್ನೆಲ್ಲಾ ಅಗಲಿ ಹೋಗಿದ್ದಾರೆ. ಸಚಿವರಾಗಿ, ಜನಾನುರಾಗಿಯಾಗಿ ಕೆಲಸ ಮಾಡಿದ್ದಾರೆ. ಒಂದು ಸಣ್ಣ ಆಪರೇಷನ್ ಮಾಡಿಸಲು ಹೋಗಿ, ತಮ್ಮ ಜೀವವನ್ನೇ ಕಳೆದುಕೊಂಡಿರುವುದು ಬಹಳ ದುಃಖದ ಸಂಗತಿಯಾಗಿದೆ.

ಶ್ರೀಯುತರಾದ ವೆಂಕಟರಮಣಪ್ಪನವರು ಸಹ ಸಣ್ಣ ಸಮಾಜದಿಂದ ಬೆಳೆದು ಬಂದು ಬಹಳಷ್ಟು ದೊಡ್ಡ ಸಾಧನೆಯನ್ನು ಮಾಡಿ, ಜನಾನುರಾಗಿಯಾಗಿ, ಸಮಾಜದ ಒಬ್ಬ ನಾಯಕರಾಗಿ, ಕ್ಷೇತ್ರ ಮತ್ತು ಸಮಾಜದ ಉನ್ನತಿಗಾಗಿ ಶ್ರಮಿಸಿದ್ದಾರೆ. ಶ್ರೀಯುತರು ತುಮಕೂರು ಜಿಲ್ಲೆಯವರಾಗಿದ್ದು, ನಾವು ಅವರನ್ನು ಬಹಳ ಅಭಿಮಾನದಿಂದ ಕಾಣುತ್ತೇವೆ.

ಶ್ರೀಯುತರಾದ ಸಿ.ವೀರಣ್ಣನವರು ತುಂಬಾ ಒಳ್ಳೆಯ ಕೆಲಸಗಳನ್ನು ಮಾಡಿ, ಅವರ ಹೆಸರನ್ನು ಉಳಿಸಿ ಹೋಗಿದ್ದಾರೆ.

ಹಾಗೆಯೇ ಶ್ರೀಯುತರಾದ ಹೆಚ್.ಹನುಮಂತಪ್ಪನವರು ಚಿತ್ರದುರ್ಗ ಜಿಲ್ಲೆಯವರಾಗಿದ್ದು, ನಮ್ಮ ಕಾಂಗ್ರೆಸ್ ಪಕ್ಷದಲ್ಲಿ ಬಹಳ ಹಿರಿಯ ನಾಯಕರಾಗಿದ್ದು, ಸುಮಾರು ೯೦ ವರ್ಷಗಳನ್ನು ದಾಟಿದವರು. ಮಾಗಿದಂಥ ಮನಸ್ಸು, ಅನುಭವದ ಕಣಿ. ಕಾಂಗ್ರೆಸ್ ಪಕ್ಷದಲ್ಲಿ ಜಾತ್ಯಾತೀತ ಸಿದ್ಧಾಂತದಲ್ಲಿ ಬಹಳ ಖಡಕ್ ಆಗಿ, ನೇರವಾಗಿ ಮತ್ತು ನಿಷ್ಠುರವಾಗಿ ಮಾತನಾಡುತ್ತಿದ್ದ ನಾಯಕರು. ಸಂಸದರಾಗಿ, ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ನಿಗಮ-ಮಂಡಳಿಗಳ ಅನೇಕ ಹುದ್ದೆಗಳಲ್ಲಿ ತಮ್ಮದೇ ಆದ ಸೇವೆಯನ್ನು ಸಲ್ಲಿಸಿದ್ದಾರೆ. ನಾನು ಸಚಿವೆಯಾಗಿದ್ದಾಗ ಶ್ರೀ ಎಸ್. ನಿಜಲಿಂಗಪ್ಪನವರ ಮೆಮೋರಿಯಲ್ ಟ್ರಸ್ಟ್‌ಗೆ ಸಂಬಂಧಿಸಿದಂತೆ ಕಾರ್ಯಕ್ರಮಗಳನ್ನು ರೂಪಿಸುವುದು ಮತ್ತು ಆ ಟ್ರಸ್ಟ್‌ಗೆ ಸಂಬಂಧಪಟ್ಟ ಅನುದಾನವನ್ನು ಕೇಳುವ ಕೆಲಸ ನಿರ್ವಹಿಸಿಕೊಂಡು, ಆ ಒಂದು ಹಣ್ಣು ವಯಸ್ಸಿನಲ್ಲಿಯೂ ಸಮಾಜ ಸೇವೆ ಸಲ್ಲಿಸಿಕೊಂಡು ಬಂದವರಾಗಿದ್ದಾರೆ. ಅವರ ಬಗ್ಗೆ ಬಹಳ ಹೆಮ್ಮೆಯ ವಿಚಾರವೇನೆಂದರೆ, ನಾವು ಇನ್ನೂ ಕೂಡ ಎಂ.ಎಲ್.ಸಿ., ಆಗದೇ ಪಕ್ಷದಲ್ಲಿ ದುಡಿಯುವಂಥ ಸಂದರ್ಭದಲ್ಲಿ ನಾವು ಏನು ಮಾತನಾಡಿದರೆ ತಪ್ಪಾಗುತ್ತದೆಯೋ, ಹೇಗೋ, ಏನೋ ಎಂದು ಮುಜುಗರ ಮತ್ತು ಸಂಕೋಚಕ್ಕೊಳಪಡುವಾಗ, ಬೆನ್ನು ತಟ್ಟಿ,

ಧೈರ್ಯ ಹೇಳುವ ಮೂಲಕ ನಮ್ಮನ್ನೆಲ್ಲಾ ಮುಂದಕ್ಕೆ ತೆಗೆದುಕೊಂಡು ಹೋಗುವುದರಲ್ಲಿ ಶ್ರೀಯುತರನ್ನು ಬಹಳ ನೆನಪಿಸಿಕೊಳ್ಳುತ್ತೇನೆ. ಅಂದಿನ ದಿವಸ ಬಹಳ ಸಹಕಾರಿಯಾಗಿ ಮಾರ್ಗದರ್ಶನ ನೀಡುತ್ತಿದ್ದರು.

ಡಾ॥ ಎಸ್.ಆರ್.ರಾಮಸ್ವಾಮಿಯವರು ಪತ್ರಕರ್ತರಾಗಿ, ಜೀವನ ಚರಿತ್ರೆಕಾರರಾಗಿ, ಸಾಮಾಜಿಕ ಕಾರ್ಯಕರ್ತರಾಗಿ ಬಹಳಷ್ಟು ದುಡಿದಿದ್ದಾರೆ ಮತ್ತು ಈ ನಾಡಿಗೆ ಕೊಡುಗೆಯನ್ನು ಕೊಟ್ಟಿದ್ದಾರೆ. ಶ್ರೀಯುತರ ಬಗ್ಗೆ ನಮ್ಮ ನಾಡು ಬಹಳ ಹೆಮ್ಮೆ ಪಡುತ್ತದೆ. ಹಾಗೆಯೇ ಶ್ರೀಮತಿ ಆಶಾ ಬೋಂಸ್ಲೆರವರು ಬಹಳ ಹಿರಿಯ ಜೀವವಾಗಿದ್ದು, ಸಿನಿಮಾ ಕ್ಷೇತ್ರದಲ್ಲಿ, ಸಂಗೀತದ ವಿಭಾಗದಲ್ಲಿ ಗಾಯಕಿಯಾಗಿ ತಮ್ಮದೇ ಆದ ಕೊಡುಗೆಯನ್ನು ಕೊಟ್ಟಿದ್ದಾರೆ. 'Nightingale of India' ಎಂದೇ ಕರೆಸಿಕೊಳ್ಳುವಂಥ ಶ್ರೀಮತಿ ಲತಾ ಮಂಗೇಶ್ಕರ್‌ರವರ ಸಹೋದರಿಯಾಗಿದ್ದರು. ಅವರ ತಂದೆಯವರಾದ ಶ್ರೀ ಪಂಡಿತ್ ದೀನನಾಥ್ ಮಂಗೇಶ್ಕರ್‌ರವರ ಕುಟುಂಬವು ಸಂಗೀತದಿಂದಲೇ ಬೆಳೆದು ಬಂದವರಾಗಿದ್ದಾರೆ. ಆ ಒಂದು ಸಂಗೀತದ ಕುಟುಂಬದಲ್ಲಿ ಬೆಳೆದಂಥ ಶ್ರೀಮತಿ ಆಶಾ ಬೋಂಸ್ಲೆರವರು ಬಹಳ ಸಣ್ಣ ವಯಸ್ಸಿನಲ್ಲಿ ಪೂನಾಕ್ಕೆ ಬಂದು, ಅಲ್ಲಿ ತಂದೆ ಮತ್ತು ಅಕ್ಕನ ಸಹವಾಸದಲ್ಲಿ ಅಥವಾ ಆ ಒಂದು ವಾತಾವರಣದಲ್ಲಿ ಗಾಯನವನ್ನು ಕಲಿತು, ಒಬ್ಬ ನಟಿಯಾಗಿ, ಗಾಯಕಿಯಾಗಿ ಈ ನಾಡಿಗೆ ದೇಶಕ್ಕೆ ಕೊಟ್ಟ ಕೊಡುಗೆ ಬಹಳ ವಿಶಿಷ್ಟವಾಗಿದೆ, ವಿಶೇಷವಾಗಿದೆ ಮತ್ತು ಪದ್ಮಭೂಷಣ ಪ್ರಶಸ್ತಿಯ ವಿಜೇತರಾಗಿ ದೇಶದಲ್ಲಿಯೇ ಬಹಳ ಎತ್ತರದ ಗಾಯಕಿಯಾಗಿದ್ದಾರೆ.

ಡಾ॥ ಗಿರೀಶ್ ಭಾರದ್ವಾಜ್‌ರವರು ಒಬ್ಬ ಇಂಜಿನಿಯರ್ ಆಗಿ, ತಾಂತ್ರಿಕ ಉನ್ನತಿಯಾಗಿ ತಮ್ಮ ಗ್ರಾಮದಲ್ಲಿ ಗ್ರಾಮೀಣ ಜನರಿಗೆ ಅನುಕೂಲವಾಗುವಂಥ ನದಿಗಳ ಮೇಲೆ ಸೇತುವೆಯನ್ನು ನಿರ್ಮಿಸಿರುವಂಥ ವಿಚಾರದಲ್ಲಿ ಬಹಳಷ್ಟು ಸಂಶೋಧನೆ ಮಾಡಿ, ಕೃಷಿ ಮಾಡಿ, ರಾಷ್ಟ್ರಮಟ್ಟದಲ್ಲಿ ತಮ್ಮನ್ನು ತಾವು ಗುರುತಿಸಿಕೊಂಡಿದ್ದಾರೆ. ಮತ್ತು ರಾಜ್ಯ ಸರ್ಕಾರದಲ್ಲಿಯೂ ಬಹಳಷ್ಟು ಬಾರಿ ಅವರ ಸಲಹೆ-ಸೂಚನೆಗಳನ್ನು ತೆಗೆದುಕೊಂಡಿರುವುದನ್ನು ಕಾಣುತ್ತೇವೆ.

ಡಾ॥ ಎಸ್.ಜಾನಕಿಯವರು ದಕ್ಷಿಣ ಭಾರತದಲ್ಲಿ ಗಾನಕೋಗಿಲೆ, ಗಾನ ಸಾಮ್ರಾಜ್ಯದ ಸಾಮ್ರಾಜ್ಞಿ ಎನ್ನುವಂಥ ಹೆಸರನ್ನು ಪಡೆದುಕೊಂಡಿದ್ದಾರೆ. ಶ್ರೀಯುತರು ನಿಧನರಾದ ಸಂದರ್ಭದಲ್ಲಿ ಬಹಳಷ್ಟು ನೋವಾಗಿತ್ತು. ನಾವೆಲ್ಲರೂ ತಾಯಿಗಿಂತ ಹೆಚ್ಚಾಗಿ ಅವರಲ್ಲಿ ಪ್ರೀತಿಯನ್ನು ಕಾಣುತ್ತಿದ್ದೆವು. ಅವರ ನಿಧನ ಎಂದಾಕ್ಷಣ ನಿಜವಾಗಿಯು ನಮ್ಮ ಕುಟುಂಬದಲ್ಲಿಯೇ ಯಾರೊಬ್ಬರನ್ನು ಕಳೆದುಕೊಂಡಿದ್ದೆವೆಯೋ ಎನ್ನುವಷ್ಟರ ಮಟ್ಟಿಗೆ ನೋವಾಗಿತ್ತು. ಬಹಳ ಸಜ್ಜನರು ಮತ್ತು ದೈವ ಭಕ್ತಿಯನ್ನು ಹೊಂದಿದ್ದರು. ಅವರ ಪತಿಯವರಾದ ಶ್ರೀ ರಾಮಪ್ರಸಾದ್‌ರವರು ಆ ತಾಯಿಯ ಏಳಿಗೆಗಾಗಿ ನಿರಂತರವಾಗಿ ಅವರ ಜೊತೆಯಲ್ಲಿಯೇ ಇದ್ದು, ಅವರ ಏಳಿಗೆಯನ್ನು ಬಯಸಿದರು. ಶ್ರೀ ರಾಮಪ್ರಸಾದ್‌ರವರು ತೀರಿಕೊಂಡ ನಂತರ ಎಸ್.ಜಾನಕಿಯವರು ಬಹಳಷ್ಟು ನೊಂದುಕೊಂಡು ಗಾಯನ ಕ್ಷೇತ್ರವೇ ಬೇಡ, ನನ್ನ ಗಂಡ ಇಲ್ಲದ ನಂತರದಲ್ಲಿ ಈ ಕ್ಷೇತ್ರದಲ್ಲಿ ನನಗೆ ಬದುಕು ಅಗತ್ಯವೇ ಇಲ್ಲ ಎಂದು 'ನಾನು ಇನ್ನೂ ಮುಂದೆ ಹಾಡುವುದಿಲ್ಲ' ಎನ್ನುವಂಥ ತೀರ್ಮಾನವನ್ನು ಕೈಗೊಳ್ಳುತ್ತಾರೆ. ಆಗ ಅವರ ಸಹೋದ್ಯೋಗಿಗಳು ಗಾಯಕಿಯರು, ಗಾಯಕರೆಲ್ಲರೂ ಸೇರಿಕೊಂಡು, ಅವರಿಗೆ ಸಾಂತ್ವಾನವನ್ನು ಕೊಟ್ಟು, ಮತ್ತೆ ಹಾಡಲೇಬೇಕೆಂಬ

ವಿನಂತಿಯನ್ನು ಮಾಡಿದಾಗ, ಪುನಃ ಹಾಡಲು ಒಪ್ಪಿಕೊಂಡು, ಸುಮಾರು 48,000 ಹಾಡುಗಳನ್ನು ಸುಮಾರು 20 ಕ್ಕೂ ಹೆಚ್ಚು ಭಾಷೆಗಳಲ್ಲಿ ಹಾಡುತ್ತಾರೆ. ಆದರೆ, ಗಂಡನನ್ನು ಕಳೆದುಕೊಂಡ ಮೇಲೆ ಮಗನನ್ನು ಕಳೆದುಕೊಂಡಾಗ ಅವರಿಗೆ ಮತ್ತಷ್ಟು ಹೆಚ್ಚು ನೋವಾಗುತ್ತದೆ. ಶ್ರೀಯುತರು ಸಾಯುವ ಮುನ್ನ ಸುಮಾರು ಆರೆಂಟು ತಿಂಗಳ ಹಿಂದೆ ಮಗನನ್ನು ಕಳೆದುಕೊಳ್ಳುತ್ತಾರೆ. ಇದು ಯಾವುದೇ ತಾಯಿಗೂ ಕೂಡ ಬಹಳ ನೋವಿನ ಸಂಗತಿಯಾಗಿದೆ. ಅವರ ಸೊಸೆ ಶ್ರೀಮತಿ ಉಮಾ ಮುರುಳಿ ಕೃಷ್ಣ ಮತ್ತು ಇಬ್ಬರು ಮೊಮ್ಮಕ್ಕಳಾದ ಅಪ್ಸರಾ ಮತ್ತು ವರ್ಷಾರವರುಗಳು ಇದ್ದರೂ, ಎಲ್ಲರನ್ನೂ ಬಿಟ್ಟು ಮೈಸೂರಿನಲ್ಲಿ ಮಗನ ಜೊತೆ ನೆಲೆಸುತ್ತಾರೆ. ಮೈಸೂರಿನಲ್ಲಿ ಮಗನ ಜೊತೆ ನೆಲೆಸಿದಾಗ ಮಗನನ್ನು ಕಳೆದುಕೊಂಡು, ಆ ತಾಯಿ ಬದುಕಲಿಕ್ಕೆ ಸಾಧ್ಯವಾಗದೇ, ತಮ್ಮ ಜೀವವನ್ನು ಕಳೆದುಕೊಳ್ಳುತ್ತಾರೆ. ನಾನು ಸಚಿವೆಯಾಗಿದ್ದ ಸಂದರ್ಭದಲ್ಲಿ ಅವರಿಗೆ ರಾಜ್ಯ ಪ್ರಶಸ್ತಿಯನ್ನು ನಮ್ಮ ರಾಜ್ಯ ಸರ್ಕಾರ ಕೊಟ್ಟಿದೆ ಎಂಬುದು ಬಹಳ ಹೆಮ್ಮೆಯ ಸಂಗತಿ. ಏಕೆಂದರೆ, ರಾಷ್ಟ್ರ ಪ್ರಶಸ್ತಿಯನ್ನು ಕೂಡಾ ನಿರಾಕರಣೆ ಮಾಡಿದವರಾಗಿದ್ದು, ನಮ್ಮ ರಾಜ್ಯದಲ್ಲಿ ರಾಜ್ಯ ಪ್ರಶಸ್ತಿಯನ್ನು ಗಾಯಕರಿಗೆ ಕೊಡಲಿಲ್ಲವೆಂಬ ಧ್ವನಿ ಎತ್ತಿದ್ದರಿಂದ, ಎಸ್.ಜಾನಕಿಯವರಿಂದಲೇ ರಾಜ್ಯ ಪ್ರಶಸ್ತಿಯನ್ನು ಕೊಡಲಿಕ್ಕೆ ಪ್ರಾರಂಭ ಮಾಡಿದ್ದರು. ನಮ್ಮ ಮೈಸೂರಿನ ಮಣ್ಣಿನಲ್ಲಿ ಅವರು ಲೀನವಾಗಿರುವುದರಿಂದ, ರಾಜ್ಯ ಸರ್ಕಾರವು ಅವರಿಗೊಂದು ಸ್ಮಾರಕವನ್ನು ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

(ಮುಂದು)

**(675) 13.08.2026/1.20/ಎಸ್‌ಕೆ-ಎಂಡಿ** **(ಸಭಾಪತಿಯವರ ಉಪಸ್ಥಿತಿ)**

**ಡಾ॥ ಉಮಾಶ್ರೀ (ಮುಂದು):**

ಶ್ರೀಮತಿ ಮುಕ್ತಾ, ಪ್ರೊ॥ ಎ.ವಿ. ನರಸಿಂಹಮೂರ್ತಿ, ಚೆನ್ನಮ್ಮನವರು ಕೂಡ ಅಗಲಿದ್ದಾರೆ. ಶ್ರೀಮತಿ ಚೆನ್ನಮ್ಮನವರ ಬಗ್ಗೆ ಇಲ್ಲಿ ಎಲ್ಲರಿಗೂ ಗೊತ್ತಿರುವಂತಹ ವಿಚಾರ. ಸಾಮಾನ್ಯವಾಗಿ ಸಾಕಷ್ಟು ಜನರು ಇಲ್ಲಿ ಪುರುಷ ರಾಜಕಾರಣಿಗಳಾಗಿದ್ದು, ನಿಮ್ಮೆಲ್ಲರ ಮನೆಯಲ್ಲಿ ದುಡಿಯುವಂತಹವರು ಮತ್ತು ನಿಮ್ಮ ಜೊತೆಯಲ್ಲಿ ಬರುವಂತಹವರೆಲ್ಲರನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ನಿರ್ವಹಿಸಿದಂಥ ಹೆಣ್ಣುಮಗಳು ಎಂದರೆ, ಅದು ಹೆಂಡತಿ. ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ಹೆಚ್.ಡಿ. ದೇವೇಗೌಡರವರ ಪತ್ನಿಯಾಗಿ ಆ ಒಂದು ಕಾರ್ಯವನ್ನು ಶ್ರೀಮತಿ ಚೆನ್ನಮ್ಮನವರು ನಿಂತು ನಿರ್ವಹಿಸಿ ಎಷ್ಟೊಂದು ಪ್ರಸಿದ್ಧಿಯನ್ನು ಪಡೆದಿದ್ದಾರೆ. ಅದಕ್ಕೆ ಕಾರಣವೆಂದರೆ, ಅವರ ಮನೆಗೆ ಹೋಗಿ ಬರುವಂತಹ ರಾಜಕಾರಣಿಗಳು, ಕುಟುಂಬದವರಿಗೂ ಮತ್ತು ಪ್ರತಿಯೊಬ್ಬರಿಗೂ ಕೂಡ ಅವರು ತಾಯಿಯಂತೆ ಪಾಲನೆ ಪೋಷಣೆ ಮಾಡಿದ್ದಾರೆ. ಅದು ಬಹಳ ವಿಶೇಷವಾದಂತಹದ್ದು ಮತ್ತು ವಿಶಿಷ್ಟವಾದಂತಹದ್ದು. ಎಲ್ಲಾ ರಾಜಕಾರಣಿಗಳ ಮನೆಯಲ್ಲಿ ಇರುವಂತಹ ಹೆಂಡತಿಯರು ಹಾಗೇ, ಅವರು ಯಾರೂ ಹೊರಗಡೆ ಬರುವುದಿಲ್ಲ. ಬದಲಿಗೆ ಅವರು ತಮ್ಮ ಪತಿಯ ಬೆಳವಣಿಗೆಗೆ ಪೂರಕವಾಗಿ ಕೆಲಸ ನಿರ್ವಹಿಸುತ್ತಾರೆ. ಅದು ನಿಜಕ್ಕೂ ಕೂಡ ನಾವು ಬಹಳ ಗೌರವದಿಂದ ಕಾಣುವಂತಹ ವಿಷಯವಾಗಿದೆ.

**ಸಭಾಪತಿಯವರು:-** ಮಾನ್ಯ ಪೂಜಾರ್‌ರವರೇ, ತಮ್ಮ ಮಾತನ್ನು ಪ್ರಾರಂಭಿಸಿ.

**ಡಾ॥ ಉಮಾಶ್ರೀ:–** ಮಾನ್ಯ ಸಭಾಪತಿಯವರೇ, ನಾನು ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ತಾವು ತಮ್ಮ ಮಾತನ್ನು ಮುಗಿಸಿ ಎಂದು ನಾನು ಹೇಳಿದ್ದೇನೆ. ತಾವು ಐದು ನಿಮಿಷದಲ್ಲಿ ಎಲ್ಲವನ್ನು ಹೇಳಿ ಮುಗಿಸಬೇಕು.

**ಡಾ॥ ಉಮಾಶ್ರೀ:–** ತಾಯಿಯಾದ ಶ್ರೀಮತಿ ಚೆನ್ನಮ್ಮನವರು ತಮ್ಮ ಪತಿ, ಮಕ್ಕಳು, ಸೊಸೆಯರು, ಮೊಮ್ಮಕ್ಕಳು ಮತ್ತು ಎಲ್ಲರ ಅಭಿವೃದ್ಧಿಗೆ ಕಾರಣರಾದಂತಹವರು. ಅವರ ಆತ್ಮಕ್ಕೆ ಶಾಂತಿ ಸಿಗಲಿ ಮತ್ತು ದಿವಂಗತರಾದ ಮಹನೀಯರ ಆತ್ಮಕ್ಕೆ ಶಾಂತಿ ಸಿಗಲಿ ಕೋರುತ್ತಾ, ಈ ಒಂದು ಸಂತಾಪ ಸೂಚನೆಗೆ ತಂದಿರುವಂತಹ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ, ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರು ಯಾರು ಇದೇ ವಿಷಯವನ್ನು ಮಾತನಾಡಿದರೂ ಶೇಕಡಾ 90 ರಷ್ಟು ಪುನರಾವರ್ತನೆಯಾಗುತ್ತಿರುತ್ತದೆ.

**ಡಾ॥ ಉಮಾಶ್ರೀ:–** ನಾನು ಹೊಸ ವಿಷಯವನ್ನು ಮಾತನಾಡಿದ್ದೇನೆ.

**ಸಭಾಪತಿಯವರು:–** ನಾನು ಮಾನ್ಯ ಸದಸ್ಯರೆಲ್ಲರ ಮುಖವನ್ನು ನೋಡುತ್ತಿರುತ್ತೇನೆ. ಎಲ್ಲರಿಗೂ ಕಾಣುತ್ತಿದೆಯಲ್ಲವೇ. ಐದು ನಿಮಿಷದಲ್ಲಿ ಮಾತನ್ನು ಮುಗಿಸಿ ಎಂದು ಅದಕ್ಕೆ ನಾನು ಹೇಳಿದ್ದು. ಯಾರ ಬಗ್ಗೆ ಚೆನ್ನಾಗಿ ಗೊತ್ತಿರುತ್ತದೆಯೋ, ಅವರ ಬಗ್ಗೆ ಒಂದೆರಡು ನಿಮಿಷ ಮಾತನಾಡಿ. ಇಲ್ಲಿ ಹದಿಮೂರು ಜನರ ಬಗ್ಗೆ ಮಾತನಾಡಬೇಕೆಂಬುದೇನಿಲ್ಲ. ನಿಮ್ಮೆಲ್ಲರ ಪರವಾಗಿ ಹದಿಮೂರು ಜನರ ಬಗ್ಗೆ ನಾನು ಈಗಾಗಲೇ ಮಾತನಾಡಿದ್ದೇನೆ. ಈಗಾಗಲೇ ಅವರ ಬಗ್ಗೆ express ಮಾಡಿ ಹೇಳಿದ್ದೇನೆ. ನಾನು ಹೇಳವುದೇನೆಂದರೆ, ಹೇಳಿದ್ದನ್ನೇ ಹೇಳಿಸುತ್ತಾರೆ ಎಂದು ಯಾರಿಗೂ ಅನ್ನಿಸಬಾರದು ಮತ್ತು ಹೇಳಿದ್ದನ್ನೇ ಹೇಳಿಸುತ್ತಾರೆ ಎಂದು ನನ್ನ ಮೇಲೆ ಅಂದುಕೊಳ್ಳುತ್ತಾರೆ. ಹಾಗಾಗಿ, ಇನ್ನೇನೂ ಇಲ್ಲ. ನಾನು ನೇರವಾಗಿ ಹೇಳುತ್ತೇನೆ.

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮೊದಲೇ ದಿನನೇ ತಾರತಮ್ಯವಾಗಿದೆ.

**ಸಭಾಪತಿಯವರು:–** ಮಾನ್ಯ ಭೋಜೇಗೌಡರೇ, ನಾನು ಏನು ತಾರತಮ್ಯ ಮಾಡಿದ್ದೇನೆ. ಸ್ವಾಮಿ, ನಿಮಗೂ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇನೆ. ಈಗ ಮಾನ್ಯ ಪಿ.ಹೆಚ್. ಪೂಜಾರಿಯವರು ಹಿರಿಯರು. ಅವರು ಐದು ನಿಮಿಷದಲ್ಲಿ ಮಾತನಾಡಿ ಮುಗಿಸುತ್ತಾರೆ. ಮಾನ್ಯ ಪಿ.ಹೆಚ್. ಪೂಜಾರೆಯವರೇ, ತಾವು ಮಾತನಾಡಿ.

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಎರಡು ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ. ಮಾನ್ಯ ಸಭಾಪತಿಯವರು ತಂದಿರುವಂತಹ ಹದಿಮೂರು ಜನರು ರಾಜ್ಯದ ಗೌರವ ಸನ್ಮಾನಕ್ಕೆ ಪಾತ್ರರಾದಂತಹದ್ದು. ಅವರ ಅಗಲಿಕೆಯ ಒಂದು ನೋವಿನಲ್ಲಿ ನಾವೆಲ್ಲರೂ ಭಾಗಿಯಾಗಿದ್ದೇವೆ

ಎನ್ನುವಂತಹ ಸಂದೇಶದ ಹಿನ್ನೆಲೆಯಲ್ಲಿ ತಂದಿರುವಂತಹ ಈ ಸಂತಾಪ ಸೂಚನೆಗೆ ಕೃತಜ್ಞತೆಯನ್ನು ಸಲ್ಲಿಸುವಂತಹದ್ದರ ಬಗ್ಗೆ ಮಾತನಾಡುವಂತಹದ್ದು.

ವಿಶೇಷವಾಗಿ, ಶ್ರೀ ರಾಮಚಂದ್ರ ಗೌಡರು ನಮ್ಮೆಲ್ಲರಗಿಂತ ಹಿರಿಯರು. ಭಾರತೀಯ ಜನಸಂಘದಲ್ಲಿ ನಾನು ಅವರ ಜೊತೆಗಿದ್ದಂತಹ ಸಂದರ್ಭ ಇಂದು ಕೂಡ ನನಗೆ ಇನ್ನೂ ನೆನಪಿನಲ್ಲಿದೆ. ಭಾರತೀಯ ಜನತಾ ಪಕ್ಷ ಸ್ಥಾಪನೆಯಾದಗಿನಿಂದ ಅವರನ್ನು ನಾನು ಸಮೀಪದಿಂದ ನೋಡಿಕೊಂಡು ಬಂದಿದ್ದೇನೆ. ಒಬ್ಬ ಸಜ್ಜನಿಕೆಯ ರಾಜಕಾರಣಿ, ಜವಾಬ್ದಾರಿ ನಾಯಕರಾಗಿ ಪಕ್ಷದ ಕಾರ್ಯಕರ್ತರಿಗೆ ಪ್ರೇರಣೆ ನೀಡುವಂತಹ ವಿಚಾರವಾದಿಯಾಗಿದ್ದರು. ಅವರ ತತ್ವ ಸಿದ್ಧಾಂತಗಳ ಜೊತೆಗೆ ಎಂದಿಗೂ ಕೂಡ ರಾಜಿಯಾಗಲಾದಂತಹ ಮನೋಭಾವನೆ ನಮ್ಮೆಲ್ಲರಿಗೂ ಪ್ರೇರಣೆಯಾಗಿತ್ತು. ಅವರು ಬಾಗಲಕೋಟೆಗೆ ತುಂಬಾ ಸಲ ಬಂದಿದ್ದರು. ಮೊನ್ನೆ ಅವರು ಮಾನ್ಯ ಬಿ.ಎಸ್. ಯಡಿಯೂರಪ್ಪನವರ ಜೊತೆ ಬಾಗಲಕೋಟೆಗೆ ಬಂದಾಗ, ನಾನು ಜಿಲ್ಲಾಧ್ಯಕ್ಷನಾಗಿ ಕೆಲಸ ಮಾಡುವಂತಹ ಸಂದರ್ಭದಲ್ಲಿ ನಮ್ಮನ್ನು ಬೆನ್ನು ತಟ್ಟುವಂತಹ ಕೆಲಸವನ್ನು ಅವರು ಮಾಡುತ್ತಿದ್ದರು. ಎಲ್ಲರಿಗೂ ಪ್ರೇರಣೆ ನೀಡುವಂತಹ ವ್ಯಕ್ತಿತ್ವ ಒಬ್ಬ ರಾಜಕೀಯ ನಾಯಕ. ಯಾವ ರೀತಿ ಕಾರ್ಯಕರ್ತರನ್ನು ಬೆಳೆಸಬೇಕು ಎನ್ನುವುದರಲ್ಲಿ ಅಗ್ರಗಣ್ಯರು ಎಂದು ಹೇಳಿದರೆ ತಪ್ಪಾಗುವುದಕ್ಕಿಲ್ಲ. 2000ಕ್ಕಿಂತ ಪೂರ್ವದಲ್ಲಿ ನಾನು ಎರಡು ಬಾರಿ ವಿಧಾನಸಭೆಯ ಶಾಸಕನಾಗಿದ್ದಾಗ, ಅವರ ಮಾತುಗಾರಿಕೆ ಸ್ವಚ್ಛವಾದಂತಹ ವಿಚಾರ ಲಹರಿ ನಮಗೆಲ್ಲರಿಗೂ ಅನೇಕ ಸಂದರ್ಭಗಳಲ್ಲಿ ಹೋರಾಟಕ್ಕೆ ಪ್ರೇರಣೆ ಕೊಡುತ್ತಿದ್ದರು. 1992ನೇ ಇಸವಿಯಲ್ಲಿ "ಏಕತಾ ಯಾತ್ರೆ" ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಪಾದಯಾತ್ರೆಯನ್ನು ಕೈಗೊಂಡಂತಹ ಸಂದರ್ಭದಲ್ಲಿ ನಾನು ಕೂಡ ಅವರ ಜೊತೆ ಭಾಗವಹಿಸಿದ್ದೆನು. ಒಟ್ಟಾರೆ ಅವರು ಸಮಾಜ ಸೇವಕರಾಗಿ ಒಬ್ಬ ವಿಚಾರವಾದಿಯಾಗಿ ನಮ್ಮ ಸಂಸ್ಕೃತಿ ಪರಂಪರೆಗಳ ಮುಖಾಂತರವೇ ನಮ್ಮ ರಾಷ್ಟ್ರದ ಅಭಿವೃದ್ಧಿಯಾಗುವುದಕ್ಕೆ ಸಾಧ್ಯ ಎನ್ನುವ ವಿಚಾರವಾದಿಯಾಗಿದ್ದರು. ಅವರು ನಂಬಿದಂತಹ ಸಿದ್ಧಾಂತಗಳಿಗೆ ಬದ್ಧರಾಗಿ ನಡೆದುಕೊಂಡಂತಹ ರೀತಿ ಏನಿತ್ತು, ನಮ್ಮೆಗೆಲ್ಲರಿಗೂ ಕೂಡ ಪ್ರೇರಣೆ ತಂದುಕೊಟ್ಟಿದೆ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ವೆಂಕಟರಮಣಪ್ಪನವರು ಒಳ್ಳೆಯ ಸ್ನೇಹಜೀವಿಯಾಗಿದ್ದರು ಎಂದು ಮಾನ್ಯ ರವಿಯವರು ಹೇಳಿದರು. ಅವರು ಆತ್ಮೀಯತೆಯಿಂದ ನಮ್ಮ ಜೊತೆ ಮಾತನಾಡುತ್ತಿದ್ದರು. ಯಾವುದೇ ವೇದಿಕೆಗಳಾಗಿರಲಿ, ಅವರು ಒಬ್ಬ ಶಾಸಕರಾಗಿ ಧೈರ್ಯದಿಂದ ಯಾವುದೇ ವಿಚಾರವನ್ನು ಸ್ಪಷ್ಟವಾಗಿ ಯಾವ ರೀತಿ ಪ್ರತಿಪಾದನೆ ಮಾಡಬೇಕುಕೆಂಬುದರ ಬಗ್ಗೆ ನಾವು ಅವರಿಂದ ಕಲಿಯುವಂತಹದ್ದು ಕೂಡ ಆಗಿತ್ತು. ಉಳಿದವರ ಬಗ್ಗೆ ನಾನು ಹೇಳುವುದಕ್ಕೆ ಬಯಸುವುದಿಲ್ಲ.

ವಿಶೇಷವಾಗಿ, ಡಾ॥ ಎಸ್.ಆರ್. ರಾಮಸ್ವಾಮಿಯವರು ಒಳ್ಳೆಯ ಒಬ್ಬ ದಾರ್ಶನಿಕರು, ಲೇಖಕರು ಮತ್ತು ದೇಶದ ಉನ್ನತ ಪರಂಪರೆಯ ಗರಿಮೆಗಳ ಬಗ್ಗೆ ಅನೇಕ ಲೇಖನಗಳ ಬಗ್ಗೆ ಬರೆದಂತಹವರು. ಅವರು ಆಳವಾಗಿ ಅಧ್ಯಯನ ಮಾಡಿದಂತಹವರು. ಬೆಂಗಳೂರು ರಾಷ್ಟ್ರೋತ್ಥಾನ ಪರಿಷತ್ತಿನ ಸಂಪಾದಕರಾಗಿ ಮಾಡಿದಂತಹ ಸೇವೆ ಅವಿಸ್ಮರಣೀಯವಾಗಿದೆ ಎಂದು ನಾನು ಭಾವಿಸುತ್ತೇನೆ. ಸಂಸ್ಕೃತ, ಹಿಂದಿ, ಜರ್ಮನ್, ಫ್ರೆಂಚ್, ಕನ್ನಡ ಮತ್ತು

ತೆಲುಗು ಭಾಷೆಗಳಲ್ಲಿ ಜ್ಞಾನವುಳ್ಳವರಾಗಿದ್ದರು. ಒಳ್ಳೆಯ ಪುಸ್ತಕಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿದಂತಹವರು. ಇಂಗ್ಲೀಷ್‌ನಲ್ಲಿ ಕೂಡ ತರ್ಜುಮೆ ಮಾಡಿದಂತಹ ಹಿರಿಮೆಯನ್ನು ಹೊಂದಿದವರು. "ಗಾಂಧಿಯನ್ ಪರಿಸರ ವಿಜ್ಞಾನ ಪರಿಕಲ್ಪನೆ, ನೇತಾಜಿ ಸುಭಾಷ್ ಚಂದ್ರ ಬೋಸ್, ಸರ್ ಮಿರ್ಜಾ ಇಸ್ಮಾಯಿಲ್" ಮತ್ತು ಇನ್ನೂ ಅನೇಕ ಘಟಾನುಘಟಿ ನಮ್ಮ ದೇಶಕ್ಕೆ ಪ್ರೇರಣೆ ಕೊಟ್ಟಂತಹ ನಾಯಕರ ಬಗ್ಗೆ ಆಳವಾದಂತಹ ಅಧ್ಯಯನ ಮಾಡಿ, ಅವರ ಬಗ್ಗೆ ಲೇಖನ ಬರೆದಂತಹ ಹಿರಿಮೆಯನ್ನು ಅವರು ಗಳಿಸಿಕೊಂಡಿದ್ದರು. ಶ್ರೀಮತಿ ಆಶಾ ಭೋಂಸ್ಲೆ, ಶ್ರೀಮತಿ ಸಿ.ಎನ್. ಮುಕ್ತಾ, ಶ್ರೀಮತಿ ಎಸ್. ಜಾನಕಿ ಅವರೆಲ್ಲರೂ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಪರಿಣಿತಿ ಹೊಂದಿ ಮತ್ತು ಮಾದರಿಯಾದ ಸಮಾಜ ಸೇವಕಿಯರು, ಗಾಯಕರು, ಲೇಖಕರು. ಅವರೆಲ್ಲರೂ ನಮ್ಮ ಕಣ್ಮುಂದೆ ಇವತ್ತು ಕೂಡ ಅಜರಾಮರರಾಗಿ ಕಾಣುತ್ತಿದ್ದಾರೆ. ಅವರ ಅಗಲಿಕೆಯಿಂದ ನಮ್ಮ ರಾಜ್ಯ ಮತ್ತು ದೇಶ ಬಡವಾಗಿದೆ ಎಂಬ ವಿಚಾರವನ್ನು ಹೇಳುತ್ತೇನೆ. ಅವರೆಲ್ಲರಿಗೂ ಕೂಡ ನಾನು ಸಂತಾಪ ಸೂಚನೆಯನ್ನು ಸೂಚಿಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ವಂದಿಸುತ್ತೇನೆ. ಜಗದ್ಗುರು ಶ್ರೀ ಶಂಕರಾಚಾರ್ಯರವರು ಹೇಳಿರುವಂತೆ, "**ಪುನರಪಿ ಜನನಂ ಪುನರಪಿ ಮರಣಂ; ಪುನರಪಿ ಜನನೀ ಜಠರೇ ಶಯನಮ್ ॥**" ಎನ್ನುವಂತಹ ನಮ್ಮ ಜೀವನ ಚಕ್ರವನ್ನು ನಮಗೆ ತೋರಿಸಿದ್ದಾರೆ. ಇವತ್ತು ಆ ಜೀವನ ಚಕ್ರದಲ್ಲಿ, ಜನನ ಮರಣ ಮಧ್ಯೆದಲ್ಲಿ ಅವರು ಮಾಡಿದ ಸತ್ಕರ್ಮದ ಕಾರಣಕ್ಕೋಸ್ಕರ ಇವತ್ತು ಹದಿಮೂರು ಜನ ಮಹಾನ್‌ಚೇತನರಿಗೆ ನಾವು ಶ್ರದ್ಧಾಂಜಲಿಯನ್ನು ಕೊಡುವುದಕ್ಕೆ ನಿಂತಿದ್ದೇವೆ. ಆ ಮಹಾನ್ ಚೇತನರಿಗೆ ನಾನು ಭಕ್ತಿಪೂರ್ವಕವಾಗಿ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತೇನೆ. ನಾನು ದಕ್ಷಿಣ ಕನ್ನಡ ಜಿಲ್ಲೆಯವನಾಗಿರುವುದಕ್ಕೋಸ್ಕರ ಇಬ್ಬರು ಮಹಾನ್ ಚೇತನರಿಗೆ ಎರಡು ನಿಮಿಷಗಳ ಕಾಲ ಶ್ರದ್ಧಾಂಜಲಿಯನ್ನು ಸಲ್ಲಿಸಬಯಸುತ್ತೇನೆ. ಶ್ರೀ ರಾಮಚಂದರ್ ಬೈಕಂಪಾಡಿಯವರು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸ್ವಯಂ ಸೇವಕರಾಗಿ ಮತ್ತು ಬಿ.ಜೆ.ಪಿ.ಯ ಹಿರಿಯ ಧುರೀಣರಾಗಿದ್ದರು. ಅವರು ಸಂಘದ ಶಿಸ್ತಿನಂತೆ ನಡೆದುಕೊಂಡು ಸ್ವಂತಕ್ಕೆ ಸ್ವಲ್ಪ ಮತ್ತು ಸಮಾಜಕ್ಕೆ ಸರ್ವಸ್ವ ಎಂದು ಬದುಕಿದವರು. ಅದರ ಜೊತೆಗೆ ಮಹಾನ್ ಪುರುಷ ಪಂಡಿತ್ ದೀನದಯಾಳ್ ಉಪಾಧ್ಯಾಯರ ಏನು ಅಂತ್ಯೋದಯದ ಮುಖಾಂತರ ಕಟ್ಟಕಡೆ ವ್ಯಕ್ತಿಗೆ ನ್ಯಾಯ ಸಿಗಬೇಕು. ಈ ಸಮಾಜದ ಪ್ರತಿಯೊಬ್ಬ ದೀನದಲಿತರು, ಬಡವರು ಕೂಡ ಸಮಾಜದ ಮುಖ್ಯವಾಹಿನಿಗೆ ಬರಬೇಕೆಂದು ತಮ್ಮ ಜೀವನವನ್ನು ಪೂರ್ತಿಯಾಗಿ ಬಿ.ಜೆ.ಪಿ. ಪಕ್ಷಕ್ಕಾಗಿ ಕೆಲಸ ಮಾಡಿದಂತಹವರು. ಮೊಗವೀರ ಸಮಾಜ ಎಂದಾಕ್ಷಣ ಗಡಿಭಾಗದಲ್ಲಿ ಸೈನಿಕರು ತಮ್ಮ ದೇಶವನ್ನು ಯಾವ ರೀತಿ ರಕ್ಷಣೆ ಮಾಡುತ್ತಾರೋ, ಅದೇ ರೀತಿ ಮೊಗವೀರ ಸಮಾಜಕ್ಕೂ ಆ ಸಮುದ್ರದ ಗಡಿ ಭಾಗವನ್ನು ರಕ್ಷಣೆ ಮಾಡುವಂತಹ ಒಂದು ಉನ್ನತ ಸಮಾಜ ದೊಡ್ಡ ಮಟ್ಟದ ಕೊಡುಗೆ ಕೂಡ ಆ ಮೊಗವೀರ ಸಮಾಜ. ಶ್ರೀ ರಾಮಚಂದರ್ ಬೈಕಂಪಾಡಿಯವರು ಮೊಗವೀರ ಸಮಾಜವನ್ನು ಅತ್ಯಂತ ಎತ್ತರಕ್ಕೆ ಕೊಂಡು ಹೋಗುವ ಮುಖಾಂತರ ಅದರ ಜೊತೆ ಅದನ್ನು ಹಿಂದೂ ಸಮಾಜದ

ಮುಖ್ಯವಾಹಿನಿಗೆ ತರುವ ಮುಖಾಂತರ ಅವರು ಹಿಂದೂ ಸಮಾಜಕ್ಕೆ ದೊಡ್ಡ ಕೊಡುಗೆಯನ್ನು ಕೊಟ್ಟಿದ್ದಾರೆ. ಅವರ ಅಗಲಿಕೆ ಇಡೀ ಭಾರತೀಯ ಜನತಾ ಪಕ್ಷಕ್ಕೆ ದೊಡ್ಡ ದುಃಖವಾಗಿದೆ. ಅವರಿಗೆ ನಾನು ಶ್ರದ್ಧಾಂಜಲಿಯನ್ನು ಸಲ್ಲಿಸುತ್ತೇನೆ.

(ಮುಂದು)

(676) 13.08.2026 1.30 ಟಿಸಿಹೆಚ್-ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಮುಂದು):**

ಇನ್ನು ಡಾ: ಗಿರೀಶ್ ಭಾರದ್ವಾಜ್ ರವರ ಬಗ್ಗೆ ಹೇಳುವುದಾದರೆ, ಇಡೀ ದೇಶಕ್ಕೆ ಶಿಕ್ಷಣದಲ್ಲಿ ಮತ್ತು ಬ್ಯಾಂಕಿಂಗ್ ವ್ಯವಸ್ಥೆ ಎಲ್ಲದರಲ್ಲೂ ಕೂಡ ಮುಂಚೂಣಿಯಲ್ಲಿರತಕ್ಕಂಥದ್ದು ದಕ್ಷಿಣ ಕನ್ನಡ ಜಿಲ್ಲೆ. 'ಡಾ: ಗಿರೀಶ್ ಭಾರದ್ವಾಜ್‌ರವರು ಸುಳ್ಯದಲ್ಲಿ ಜನಿಸಿದರೂ ಕೂಡ 1989 ರಲ್ಲಿ ಅರಂತೂಡಿನ ಅರಂಬೂರು ಎಂಬ ಜಾಗದಲ್ಲಿ ಪಯಸ್ವಿನಿ ನದಿಯ ಆ ಕಡೆ ಮತ್ತು ಈ ಕಡೆ ಇರತಕ್ಕಂಥ ಜನರು ನದಿಯನ್ನು ದಾಟುವುದಕ್ಕೆ ಸಾಧ್ಯವಾಗದೇ ಇರತಕ್ಕಂಥ ಸಂದರ್ಭದಲ್ಲಿ, ಹಗ್ಗದ ಮುಖಾಂತರ, ನದಿ ಜೋಡಣೆ ಮಾಡುವ ಮುಖಾಂತರ, ಸೇತುವೆ ನಿರ್ಮಾಣ ಮಾಡುವ ಮುಖಾಂತರ ಆ ಭಾಗಕ್ಕೆ ಶಕ್ತಿಯನ್ನು ತುಂಬಿದ್ದರು. ಡಾ: ಗಿರೀಶ್ ಭಾರದ್ವಾಜ್ ರವರು ದೇಶಕ್ಕೆ ಅತ್ಯಂತ ಹೆಸರುವಾಸಿಯಾಗುವ ಮುಖಾಂತರ ಸುಮಾರು 140 ಈ ರೀತಿಯ ನದಿ ಜೋಡಣೆ ಮಾಡುವ ಮುಖಾಂತರ, ಸೇತುವೆ ನಿರ್ಮಾಣ ಮಾಡುವ ಮುಖಾಂತರ, ಉಕ್ಕಿನ ಹಗ್ಗದಲ್ಲಿ ಸೇತುವೆ ನಿರ್ಮಾಣ ಮಾಡುವಂಥದ್ದು. ಸರ್ಕಾರ ಕಾಂಕ್ರಿಟ್ ಸೇತುವೆ ನಿರ್ಮಾಣ ಮಾಡಬೇಕಾದರೆ ಕೋಟಿಗಟ್ಟಲೆ ಖರ್ಚಾಗುತ್ತದೆ. ಅದಕ್ಕೆ ಸಾಕಷ್ಟು ಸಮಯ ಕೂಡ ಬೇಕಾಗುತ್ತದೆ. ಆದರೆ ಅತ್ಯಂತ ಕಡಿಮೆ ಭಾರ ಇರತಕ್ಕಂಥ ಸೇತುವೆ ನಿರ್ಮಾಣ ಮಾಡುವ ಮುಖಾಂತರ ನದಿಯ ಆ ಭಾಗದ ಜನರು ಮತ್ತು ಈ ಭಾಗದ ಜನರ ಮನಸ್ಸನ್ನು ಬೆಸೆಯುವಂಥ ಕೆಲಸವನ್ನು ಮಾಡಿದ್ದಾರೆ. ಅಷ್ಟೇಅಲ್ಲದೇ ನಮ್ಮ ಪಕ್ಕದ ರಾಜ್ಯಗಳಾದ ಕೇರಳ ಇರಬಹುದು, ತಮಿಳುನಾಡು ಇರಬಹುದು ಮತ್ತು ಒಡಿಸ್ಸಾ ಇರಬಹುದು. ಅಲ್ಲಿಯೂ ಕೂಡ ನಕ್ಸಲ್ ಬಾಧಿತ ಕ್ಷೇತ್ರಕ್ಕೂ ಹೋಗಿ, ಅಲ್ಲಿರತಕ್ಕಂಥ ನಕ್ಸಲರ ಗುಂಡಿನ ಮಧ್ಯೆ ಅಧಿಕಾರಿಗಳು ಹೋಗುವುದಕ್ಕೆ ಸಾಧ್ಯವಾಗದ ಸಂದರ್ಭದಲ್ಲಿ; ಆ ಜಾಗದಲ್ಲೂ ಕೂಡ ಆ ಭಾಗದ ಜನರಿಗೆ ಸೇತುವೆ ನಿರ್ಮಾಣ ಮಾಡುವ ಮುಖಾಂತರ ಅವರಿಗೆ ಬದುಕನ್ನು ಕಟ್ಟಿಕೊಟ್ಟಿದ್ದಾರೆ. ಸನ್ಮಾನ್ಯ ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರ ಸರ್ಕಾರ 2017 ರಲ್ಲಿ ಅವರಿಗೆ ಪದ್ಮಶ್ರೀ ಪ್ರಶಸ್ತಿಯನ್ನು ಕೊಡುವ ಮುಖಾಂತರ ಅವರನ್ನು ಗೌರವಿಸಿದೆ. ಅವರು ಸರಳ ಸಜ್ಜನಿಕೆಯವರು. ತನ್ನ ಸ್ವಂತದ್ದು ಯಾವುದನ್ನೂ ಬಯಸದೇ ಸಮಾಜಕ್ಕೋಸ್ಕರವೇ ಬದುಕಿದ್ದರು. ಆ ಮುಖಾಂತರ ದೇಶಕ್ಕೆ ಅತ್ಯಂತ ದೊಡ್ಡ ಕೊಡುಗೆಯನ್ನು ಕೊಡುವ ಮುಖಾಂತರ ಜನರ ಮನಸ್ಸನ್ನು ಬೆಸೆಯುವ ಕೆಲಸವನ್ನು ಮಾಡಿದ್ದಾರೆ. ಅವರಿಗೆಲ್ಲರಿಗೂ ಕೂಡ ನಾನು ಅತ್ಯಂತ ಹೃದಯಪೂರ್ವಕ ಶ್ರದ್ಧಾಂಜಲಿಯನ್ನು ಸಮರ್ಪಿಸುತ್ತೇನೆ.

**ಶ್ರೀ ಶಿವಣ್ಣ ಬಿ.ಎಸ್. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಸಂತಾಪ ಸೂಚನೆ ಸಭೆಯಲ್ಲಿ ನಾನು ವಿಶೇಷವಾಗಿ ಶ್ರೀ ಡಿ.ಸುಧಾಕರ್‌ರವರ ಬಗ್ಗೆ ಹೇಳುವುದಾರೆ, ಅವರ ಮತ ಕ್ಷೇತ್ರದಲ್ಲಿ ಅವರ ಸಮುದಾಯದ ಜನಸಂಖ್ಯೆ 50,000-57,000 ಸಂಖ್ಯೆಯಷ್ಟು ಮತದಾರರಿದ್ದಾರೆ. ಚಳ್ಳಕರೆ ಮತ್ತು ಹಿರಿಯೂರು ಕ್ಷೇತ್ರದಲ್ಲಿ ಸತತವಾಗಿ ಮಾನ್ಯ ಶಾಸಕರಾಗಿ, ಮಾನ್ಯ ಸಚಿವರಾಗಿ ಮತ್ತು ಡಿ.ಸಿ.ಸಿ. ಬ್ಯಾಂಕಿನ ಅಧ್ಯಕ್ಷರಾಗಿ ತಮ್ಮ ಅಪೂರ್ವವಾದ ಸೇವೆಯನ್ನು ಸಲ್ಲಿಸಿರತಕ್ಕಂಥ ಶ್ರೀ ಡಿ.ಸುಧಾಕರ್ ರವರ ಕ್ಷೇತ್ರ general constituency which is not a reserved constituency. ಆ ಒಂದು ಸಾಮಾನ್ಯ ಕ್ಷೇತ್ರದಲ್ಲಿ ಅವರು ಸತತವಾಗಿ ಶಾಸಕರಾಗಿ ಆಯ್ಕೆಯಾಗುತ್ತಾರೆಂದರೆ ಇದು ಪ್ರಜಾಪ್ರಭುತ್ವದ ಸೌಂದರ್ಯದ ಡಾ.ಬಿ.ಆರ್.ಅಂಬೇಡ್ಕರ್ ರವರು ಕೊಟ್ಟಂತಹ ಪ್ರಜಾಪ್ರಭುತ್ವದ ಸಂವಿಧಾನದ ಲಕ್ಷಣ ಎಂದು ನಾನು ಬಹಳ ಹೆಮ್ಮೆಯಿಂದ ಹೇಳುತ್ತೇನೆ.

ಡಾ: ಶ್ರೀ ಸಿ. ವೀರಣ್ಣನವರು ಕೂಡ ಮಾನ್ಯ ಮುಖ್ಯಮಂತ್ರಿಯಾಗಿದ್ದಾಗ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರ ಸರ್ಕಾರದಲ್ಲಿ ಸಣ್ಣ ಉಳಿತಾಯ ಮತ್ತು ಲಾಟರಿ ಇಲಾಖೆ ಸಚಿವರಾಗಿ ಕೆಲಸ ಮಾಡಿದ್ದಾರೆ. ಇವತ್ತಿನ ದಿವಸ ಕೆಲವು ಮಾನ್ಯ ಶಾಸಕರು ನಮಗೆ ಇಂತಹ ಇಲಾಖೆಯ ಸಚಿವ ಸ್ಥಾನವೇ ಬೇಕು ಎಂದು ಕೇಳುವಂಥ ಸಂದರ್ಭದಲ್ಲಿ ಅವರು ಒಂದು ಸಣ್ಣ ಇಲಾಖೆಯಲ್ಲೂ ಕೂಡ ಒಂದು ಮಹತ್ತರವಾದ ಬದಲಾವಣೆಯನ್ನು ತರತಕ್ಕಂಥ ಒಂದು ದಕ್ಷ ಆಡಳಿತಗಾರರಾಗಿ ಕೆಲಸ ಮಾಡಿದಂತಹ ಮಾನ್ಯ ಸಿ.ವೀರಣ್ಣನವರಿಗೂ ಕೂಡ ದೇವರಾಜ್ ಅರಸು ಪ್ರಶಸ್ತಿಯನ್ನು ಸನ್ಮಾನ್ಯ ಸಿದ್ದರಾಮಯ್ಯನವರು ಸನ್ಮಾನ್ಯ ಮುಖ್ಯಮಂತ್ರಿಗಳಾಗಿದ್ದಾಗ ದಯಪಾಲಿಸಿದ್ದರು. ಅವರು ನಿಧನರಾಗಿರುವುದು ಕೂಡ ನಮ್ಮ ರಾಜ್ಯದ ಮೌಲ್ಯಧಾರಿತ ರಾಜಕಾರಣಕ್ಕೆ ತೊಂದರೆ ಎಂದು ನಾನಾದರೂ ಭಾವಿಸಿದ್ದೇನೆ. ಶ್ರೀ ಹೆಚ್. ಹನುಮಂತಪ್ಪನವರು ಕೂಡ ಚಿತ್ರದುರ್ಗ ಜಿಲ್ಲೆಯಿಂದ ಕಳೆದ 3 ಬಾರಿ ರಾಜ್ಯಸಭಾ ಸದಸ್ಯರಾಗಿ, ಕೇಂದ್ರ ರೇಷ್ಮೆ ಮಂಡಳಿಯ ಅಧ್ಯಕ್ಷರಾಗಿ ಅನೇಕ ಯುವಕರಿಗೆ ಉದ್ಯೋಗಗಳನ್ನು ಸೃಷ್ಟಿ ಮಾಡಿ, ಹೆಚ್ಚಿನ ಉದ್ಯೋಗಳ ಅವಕಾಶ ಕೊಡಿಸಿದಂಥ ಅನೇಕ ಯೋಜನೆಗಳನ್ನು ಕೂಡ ಮಾಡಿದ್ದಾರೆ. 13 ಜನರು ನಮ್ಮ ರಾಜ್ಯವನ್ನು ಅಗಲಿ ಹೋಗಿದ್ದಾರೆ ಅವರ ಆತ್ಮಕ್ಕೆ ಶಾಂತಿ ಸಿಗಲಿ. ಮತ್ತೆ ನಮ್ಮ ಸ್ನೇಹಿತರೊಬ್ಬರು ಸನ್ಮಾನ್ಯ ಚೆನ್ನಮ್ಮನವರಿಗೆ ಅನ್ನಭಾಗ್ಯ ಸ್ಕೀಂನಲ್ಲಿ ಅವರ ಹೆಸರು ಇಡಬೇಕೆಂದು ಹೇಳಿದರು. ನಾನು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಕೇಂದ್ರ ಸರ್ಕಾರ ಜಾರಿಗೆ ತಂದಿರತಕ್ಕಂಥ 'ಉಜ್ವಲ ಯೋಜನೆಯಲ್ಲಿ ಶ್ರೀ ಚೆನ್ನಮ್ಮನವರ ಹೆಸರನ್ನು ಸೇರಿಸಬೇಕು' ಎಂದು ನಾನು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಅವರೆಲ್ಲರಿಗೂ ಕೂಡ ನನ್ನ ಸಾಷ್ಟಾಂಗ ನಮಸ್ಕಾರವನ್ನು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೇ, ಕೊನೆಯದಾಗಿ ಮಾತನಾಡುವವರು ನೀವೇ. ಬೇಗ ಮಾತನಾಡಿ ಮುಗಿಸಿಬಿಡಿ.

**ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. 13 ಜನರು ದೈವಾಧೀನರಾಗಿದ್ದಾರೆ. ಅದರಲ್ಲಿ ಶ್ರೀ ಎಸ್.ಆರ್.ರಾಮಸ್ವಾಮಿಯವರು

ನಮ್ಮ ನಾಡಿನ ಹೆಸರಾಂತ ಸಾಹಿತಿಗಳು. ಅವರು ಸುಮಾರು 55 ಪುಸ್ತಕಗಳನ್ನು ಬರೆದಿದ್ದಾರೆ. ಸಾವಿರಾರು ಲೇಖನಗಳನ್ನು ಕೂಡ ಬರೆದಿದ್ದಾರೆ. ಅವರಿಗೆ ಸುಮಾರು 88 ವರ್ಷವಾಗಿತ್ತು. ಅವರ ಬಗ್ಗೆ ಹೇಳಬೇಕೆಂದರೆ ನಮ್ಮ ಕನ್ನಡದ ಭಗವದ್ಗೀತೆ ಮಂಕುತಿಮ್ಮನ ಕಗ್ಗ ಎಂದು ನಾವೇನು ಕರೆಯುತ್ತೇವೆ. ಆ ಒಂದು ಮಂಕುತಿಮ್ಮನ ಕಗ್ಗವನ್ನು ಬರೆದಿರತಕ್ಕಂಥ ಶ್ರೀ ಡಿ.ವಿ. ಗುಂಡಪ್ಪನವರ ಕಾರ್ಯದರ್ಶಿಯಾಗಿ ಕೂಡ ಕೆಲಸ ಮಾಡಿದ್ದಾರೆ. ಅಷ್ಟು ದೊಡ್ಡದೊಡ್ಡ ಸಾಹಿತಿಗಳ ಜೊತೆಯಲ್ಲಿ ಕೆಲಸ ಮಾಡಿರತಕ್ಕಂಥವರು ಶ್ರೀ ಎಸ್.ಆರ್.ರಾಮಸ್ವಾಮಿಯವರು. ಅವರು ಶ್ರೀ ಬೈರಪ್ಪನವರ ಜೊತೆಯಲ್ಲಿ ಕೆಲಸ ಮಾಡಿದ್ದಾರೆ. ಅವರ ಜೊತೆಯಲ್ಲಿ ಸೇರಿ ಪುಸ್ತಕಗಳನ್ನು ಬರೆದಿದ್ದಾರೆ. ರಾಷ್ಟ್ರೋತ್ಥಾನ ಪರಿಷತ್ತಿನ ಅಧ್ಯಕ್ಷರಾಗಿ ಅನೇಕ ವರ್ಷಗಳ ಕಾಲ ಕೆಲಸ ಮಾಡಿದ್ದಾರೆ. ರಾಷ್ಟ್ರೋತ್ಥಾನ ಪರಿಷತ್ ಸಾವಿರಾರು ಪುಸ್ತಕಗಳನ್ನು ತೆಗೆದುಕೊಂಡು ಬಂದಿದೆ. ಡಾ: ಎಸ್.ಆರ್. ರಾಮಸ್ವಾಮಿಯವರು ಬರೆದಿರತಕ್ಕಂಥ ಪುಸ್ತಕಗಳು ದೇಶದ ಹಿತದೃಷ್ಟಿಯಿಂದ, ಸಮಾಜದ ಹಿತದೃಷ್ಟಿಯಿಂದ ಮತ್ತು ಒಳ್ಳೆಯ ಸಾಹಿತ್ಯವನ್ನು ಸಮಾಜಕ್ಕೆ ಮತ್ತು ದೇಶಕ್ಕೆ ಕೊಟ್ಟಿದ್ದಾರೆ. ಅದರಿಂದ ಸಮಾಜದಲ್ಲಿ ಒಂದು ಒಳ್ಳೆಯ ಬದಲಾವಣೆ ತರಬೇಕೆಂದು ಪುಸ್ತಕಗಳನ್ನು ಮತ್ತು articles ಗಳನ್ನು ಬರೆದಿದ್ದಾರೆ. 'ವಿಕ್ರಮ ಪತ್ರಿಕೆ' ನಡೆಯುವುದಕ್ಕೂ ಕೂಡ ಅವರದು ಸಾಕಷ್ಟು ಕೊಡುಗೆ ಇದೆ. ಅಂಥವರು ನಮ್ಮನ್ನು ಅಗಲಿದ್ದಾರೆ. ಅವರ ಕುಟುಂಬಕ್ಕೆ ಭಗವಂತ ಶಕ್ತಿಯನ್ನು ಕೊಡಲಿ ಎಂದು ನಾನು ಎರಡು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಡಾ: ಎಸ್.ಜಾನಕಿಯವರು ಅವರು ಪಕ್ಕದ ಆಂಧ್ರ ಪ್ರದೇಶದವರಾದರೂ ಕೂಡ ನಾನು ಕೊನೆಯ ದಿನಗಳನ್ನು ಮೈಸೂರಿನಲ್ಲಿ ಕಳೆಯುತ್ತೇನೆಂದು ಇಷ್ಟಪಟ್ಟು ಮೈಸೂರಿನಲ್ಲಿಯೇ ಇದ್ದಂಥವರು. ಅವರು 48,000 ಹಾಡುಗಳನ್ನು ಹಾಡಿದ್ದಾರೆ. ಅದರಲ್ಲೂ ಕೂಡ ಜಪಾನ್ ಭಾಷೆಯಲ್ಲೂ ಕೂಡ ಅವರು ಹಾಡಿದ್ದಾರೆ. ಅದಕ್ಕಾಗಿ ನನಗೆ ಏನು ಅನಿಸುತ್ತದೆಯೆಂದರೆ, ಉದಾಹರಣೆಗೆ ಹೇಳುವುದಾದರೆ ಈ ರೀತಿಯ ಬಹಳ ದೊಡ್ಡ ಕೊಡುಗೆಯನ್ನು ಕೊಟ್ಟಿರುವ ಡಾ: ಎಸ್. ಜಾನಕಿ ಮತ್ತು ಎಸ್.ಪಿ. ಬಾಲಸುಬ್ರಮಣ್ಯಂ ಇವರ ಹೆಸರಿನಲ್ಲಿ, ಯಾರು ಬಡ ಸಂಗೀತ ವಿದ್ಯಾರ್ಥಿಗಳು ಇದ್ದಾರೋ ಅವರಿಗೆ; ಒಂದು ವರ್ಷಕ್ಕೆ 10 ವಿದ್ಯಾರ್ಥಿಗಳಿಗೆ ಡಾ: ಎಸ್.ಜಾನಕಿರವರ ಹೆಸರಿನಲ್ಲಿ ಮತ್ತು ಎಸ್.ಪಿ. ಬಾಲಸುಬ್ರಮಣ್ಯಂ ರವರ ಹೆಸರಿನಲ್ಲಿ ಒಳ್ಳೆಯ ಸ್ಕಾಲರ್‌ಶಿಪ್ ಅನ್ನು ಕೊಡಿ. ಆಗ ಡಾ.ಎಸ್.ಜಾನಕಿ ರವರ ಹೆಸರು ಅವರ ಮನೆಗೆ ತಲುಪುತ್ತದೆ ಮತ್ತು ಸಮಾಜಕ್ಕೆ ತಲುಪುತ್ತದೆ. ಎಸ್.ಪಿ. ಬಾಲಸುಬ್ರಮಣ್ಯಂರವರ ಹೆಸರು ಅವರ ಸಮಾಜಕ್ಕೆ ತಲುಪುತ್ತದೆ ಮತ್ತು ಅವರ ವಿಚಾರಗಳನ್ನು ಮುಂದಕ್ಕೆ ತೆಗೆದುಕೊಂಡು ಹೋದಂತಾಗುತ್ತದೆ. ನಾನು ಶ್ರೀಮತಿ ಚೆನ್ನಮ್ಮ ನವರ ವಿಚಾರದ ಬಗ್ಗೆ ಹೇಳುವುದೇನೆಂದರೆ, ಓಕೆ. ಹುಟ್ಟಿದವರು ಸಾಯಲೇಬೇಕು. ಅದರೊಳಗೆ ಬೇರೆ ದಾರಿಯೇ ಇಲ್ಲ. ಆದರೆ ಚೆನ್ನಮ್ಮನವರ ಬದುಕು ಇವತ್ತಿನ ಸಮಾಜಕ್ಕೆ ಹೇಗೆ ಮಾದರಿ? ಓದಿದ್ದರೆ 'ಬಿಡಪ್ಪಾ' ಅನ್ನಬಹುದಿತ್ತು. ಆದರೆ ಅವರೇನು ಯೂನಿವರ್ಸಿಟಿಗೆ ಹೋದವರಲ್ಲ. ಬಹಳಷ್ಟು ಡಿಗ್ರಿ ಮಾಡಿದವರಲ್ಲ. ಆದರೆ ಶ್ರೀಮತಿ ಚೆನ್ನಮ್ಮನವರು ಇವತ್ತಿನ ದಿವಸ ಮನೆಯಲ್ಲಿ ಅಡುಗೆ ಮಾಡದೇ ಇರತಕ್ಕಂಥ ಅನೇಕ ಸಾವಿರಾರು ಜನ ಯುವತಿಯವರು ಇದ್ದಾರೆ. ಆದರೆ ಶ್ರೀಮತಿ ಚೆನ್ನಮ್ಮನವರು ಯಾವುದೇ ಪಾರ್ಟಿಯವರು ಮನೆಗೆ ಬಂದರೂ ಕೂಡ . . . ಮಾನ್ಯ ಜಮೀರ್

ಅಹ್ಮದ್ ರವರು 'ನಾವು ಅವರ ಮನೆಗೆ ಹೋದಾಗೆಲ್ಲಾ ಊಟ ಹಾಕುತ್ತಿದ್ದರು' ಎಂದು ಹೇಳಿ ಕಣ್ಣೀರು ಹಾಕಿದರು. ಅವರಿಗೆ ಅಷ್ಟು ಶಿಕ್ಷಣ ಇಲ್ಲದಿದ್ದರೂ ಕೂಡ ಶ್ರೀಮತಿ ಚೆನ್ನಮ್ಮನವರು ಮನೆಗೆ ಬಂದಂತಹ ಅತಿಥಿಗಳಿಗೆ ಆತಿತ್ಯ ಮಾಡುವುದು ಕೂಡ ಒಂದು culture. ಆ ರೀತಿ ಮಾಡುವುದರಲ್ಲಿ ಇವತ್ತಿನ ಸಮಾಜಕ್ಕೆ ಖಂಡಿತವಾಗಿಯು ಕೂಡ ಒಂದು ಮಾದರಿಯನ್ನು ಶ್ರೀಮತಿ ಚೆನ್ನಮ್ಮನವರು ಬಿಟ್ಟು ಹೋಗಿದ್ದಾರೆ.

ಇನ್ನು ಶ್ರೀ ಹೆಚ್. ಹನುಮಂತಪ್ಪನವರು ನನಗೆ ಹೆಚ್ಚು ಪರಿಚಯ ಇಲ್ಲದಿದ್ದರೂ ಕೂಡ ನೀನು ನನ್ನ ಜಿಲ್ಲೆಯವನು, ನೀನು ನಮ್ಮ ಕಾಲೇಜಿಗೆ ಬರಬೇಕು ಎಂದು ಶ್ರೀ ಬಸವರಾಜ ಬೊಮ್ಮಾಯಿಯವರು ಮುಖ್ಯಮಂತ್ರಿಯಾಗಿದ್ದಾಗ ಅವರನ್ನು ಕಾಲೇಜಿಗೆ ಕರೆದಿದ್ದರು. ನೀನು ಕೂಡ ಬರಬೇಕು, ತಪ್ಪಿಸಬೇಡ ಎಂದು ನನ್ನನ್ನೂ ಕೂಡ ಕರೆದಿದ್ದರು. ಏಕೆಂದರೆ, ಬೆಂಗಳೂರಿನ Government Arts college ಬಹಳ ದಾರಿತಪ್ಪಿ ಹೋಗಿತ್ತು. ಅಲ್ಲಿಗೆ ಶ್ರೀ ಹೂವೇಗೌಡ್ರು ಎಂಬ ಪ್ರಾಂಶುಪಾಲರು ಬಂದಮೇಲೆ ನಾವೆಲ್ಲಾ ಒಂದು ದೊಡ್ಡ ಗುಂಪು ಸೇರಿ ಆ ಕಾಲೇಜನ್ನು ಸರಿದಾರಿಗೆ ತರುವುದಕ್ಕೆ ಪ್ರಯತ್ನ ಮಾಡಿದ್ದೆವು. ಅದಕ್ಕೆ ಆಗ ನಮಗೆ support ಮಾಡಿದವರು ಶ್ರೀ ಹೆಚ್.ಹನುಮಂತಪ್ಪನವರು. "ನೀವು ಒಳ್ಳೆಯ ಕೆಲಸ ಮಾಡುತ್ತಿದ್ದೀರಿ, ನೀವು ಪ್ರಾಂಶುಪಾಲರಿಗೆ support ಮಾಡಿ" ಎಂದು ಹೇಳಿದ್ದರು. ಆಮೇಲೆ ಶ್ರೀ ಹೆಚ್.ಹನುಮಂತಪ್ಪನವರು ಒಳ್ಳೆಯ Law Graduates ಬರಬೇಕೆಂದು ಚಿತ್ರದುರ್ಗದಲ್ಲಿ ಒಂದು ಉತ್ತಮವಾದ ಸರಸ್ವತಿ ಲಾ ಕಾಲೇಜ್ ಪ್ರಾರಂಭ ಮಾಡುವ ಮೂಲಕ ಒಂದು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ.

(ಮುಂದು)

(677)13.8.2026/1.40/ಎಂ.ಎಂ-ಎ.ಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎನ್. ರವಿಕುಮಾರ್ (ಮುಂದು):**

ಸರಸ್ವತಿ ಲಾ ಕಾಲೇಜ್‌ಗೆ ನನ್ನನ್ನೂ ಸಹ ಕರೆದಿದ್ದರು. ಹೀಗೆ ಸಮಾಜದಲ್ಲಿ ಒಳ್ಳೆಯ ಪರಂಪರೆಯನ್ನು, ಆದರ್ಶಗಳನ್ನು ಬಿಟ್ಟುಹೋಗಿರುವಂತಹ 13 ಜನರ ಕುಟುಂಬಕ್ಕೆ, ಅವರ ನೆರೆಹೊರೆಯವರಿಗೆ, ಅವರ ಸಂಬಂಧಿಕರಿಗೆ, ಈ ಅಗಲಿಕೆಯನ್ನು ತಡೆದುಕೊಳ್ಳುವಂತಹ ಶಕ್ತಿಯನ್ನು ಭಗವಂತ ಕರುಣಿಸಲಿ ಎಂದು ಹೇಳಿ, ಈ ಸಂದರ್ಭದಲ್ಲಿ ನನ್ನ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತೇನೆ.

**ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ವಂದಿಸುತ್ತೇನೆ. ಈ ಸದನದ ಸಂತಾಪ ಸೂಚನೆ ನಿಲುವಳಿಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತಾ, ಸಮಾಜದ ಮುಖ್ಯವಾಹಿನಿಯಲ್ಲಿ ಇದ್ದಂತಹ ಹದಿಮೂರು ಪ್ರಮುಖ ಜನರು ಈ ಪ್ರಪಂಚವನ್ನು ತೊರೆದಿದ್ದಾರೆ ಅದರಲ್ಲಿ ರಾಜಕೀಯ ಕ್ಷೇತ್ರ, ಸೇವಾಕ್ಷೇತ್ರ ಮತ್ತು ಸಂಗೀತ ಕ್ಷೇತ್ರದ ಜೊತೆಗೆ ಪರಿಸರವಾದಿಗಳು ಸೇರಿದಂತೆ ಹತ್ತು ಹಲವಾರು ಜನರು ತೊರೆದಿದ್ದಾರೆ. ಆದರೆ ಮೂರು ವ್ಯಕ್ತಿಗಳ ಜೊತೆಗಿನ ನನ್ನ ಒಡನಾಟದ ವಿಚಾರವನ್ನು ಇಲ್ಲಿ ಹೇಳಬಯಸುತ್ತೇನೆ.

ಮೊದಲನೆಯದಾಗಿ, ಶ್ರೀ ರಾಮಚಂದ್ರಗೌಡರ ಬಗ್ಗೆ ಹೇಳುವುದಾದರೆ, ನಾನು ಇಂಜಿನಿಯರಿಂಗ್ ಮುಗಿಸಿ ಮೊದಲ ಪದವೀಧರ ಕ್ಷೇತ್ರದ ಚುನಾವಣೆಗೆ ಮತದಾರನಾದಂತಹ ಸಂದರ್ಭದಲ್ಲಿ ಶ್ರೀ ರಾಮಚಂದ್ರಗೌಡರ ವಿರುದ್ಧ ಶ್ರೀ ಪಿ.ಬಿ. ಸುರೇಶ್‌ರವರು ಚುನಾವಣೆಗೆ ನಿಂತಿದ್ದರು. ಬಹುಶಃ ಮಾನ್ಯ ಸಭಾಪತಿಯವರಿಗೂ ಇದರ ಅನುಭವ ಇದೆ ಎಂದನಿಸುತ್ತದೆ. ಆಗ ಪಾವಗಡದವರೆಗೂ ಕ್ಷೇತ್ರದ ವ್ಯಾಪ್ತಿ ಇತ್ತು. ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಪಾವಗಡ ಎಂದರೆ ತುಮಕೂರು ಸಹ ಬರುತ್ತಿತ್ತು. ಅಂತಹ ಸಂದರ್ಭದಲ್ಲಿ ನಮ್ಮ ಮಾವನವರು ಅವರ ಜೊತೆ ಒಳ್ಳೆಯ ಒಡನಾಟ ಇಟ್ಟುಕೊಂಡಿದ್ದರು. ಏಕೆಂದರೆ ನಮ್ಮಲ್ಲಿ ಭಾರತೀಯ ವಿದ್ಯಾನಿಕೇತನ ಎಂಬ ವಿದ್ಯಾಸಂಸ್ಥೆ ಇತ್ತು. ಶ್ರೀ ಪಿ.ಬಿ. ಸುರೇಶ್‌ರವರಿಗೆ ನಾವು ಬೆಂಬಲ ಕೊಡಬೇಕೆನ್ನುವ ಸಂದರ್ಭದಲ್ಲಿ ನಮ್ಮ ಮಾವನವರು ರಾಜಕಾರಣಿಗಳಲ್ಲಿ ಮಾದರಿ ರಾಜಕಾರಣಿ ಎಂದರೆ ಶ್ರೀ ರಾಮಚಂದ್ರಗೌಡರು, ನೀವಿನ್ನೂ ಹುಡುಗರು ನಿಮಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಿದ್ದರು. ಆಗ ಯಾವುದೇ ಸಿಂಬಲ್ ಇರಲಿಲ್ಲ. ಆದರೆ ವಿದ್ಯಾಸಂಸ್ಥೆಗಳನ್ನು ಪೋಷಿಸುವುದರಲ್ಲಿ, ಅವರ ಸಮಸ್ಯೆಗಳಿಗೆ ಪರಿಹಾರ ಹುಡುಕುವುದರಲ್ಲಿ ಶ್ರೀ ರಾಮಚಂದ್ರಗೌಡರು ಮುಂಚೂಣಿಯಲ್ಲಿದ್ದರು. ಹಾಗಾಗಿ ವಿದ್ಯಾಸಂಸ್ಥೆಗಳನ್ನು ಹೊಂದಿದವರು ಯಾವುದೇ ಪಕ್ಷದವರಾದರೂ ಸಹ ಅವರನ್ನು ಒಪ್ಪಿ ಅವರ ರಾಜಕಾರಣವನ್ನು ಮತ್ತು ಅವರ ಸರಳತೆಯನ್ನು ಒಪ್ಪಿ ಅವರಿಗೆ ಅವಕಾಶವನ್ನು ಕಲ್ಪಿಸಿಕೊಡುತ್ತಿದ್ದರು. ಶಿಕ್ಷಣ ಕ್ಷೇತ್ರದ ಪ್ರತಿನಿಧಿಗಳಾದ ನಮಗೆ ಅವರು ಮಾದರಿ ರಾಜಕಾರಣಿಯಾಗಿ ನಿಂತಿದ್ದಾರೆ ಎಂದರೆ ತಪ್ಪಾಗಲಾರದು.

ಎರಡನೆಯದಾಗಿ, ಸಚಿವರಾಗಿದ್ದ ದಿವಂಗತ ಸುಧಾಕರ್‌ರವರ ಬಗ್ಗೆ ಹೇಳುವುದಾದರೆ ನಮ್ಮ ಮಾಜಿ ಸಭಾಪತಿಯವರು ಇಲ್ಲಿಯೇ ಕುಳಿತಿದ್ದಾರೆ. ಹಿಂದೆ ಇದೇ ಸಭೆಯಲ್ಲಿ ಸಚಿವರಾಗಿದ್ದ ದಿವಂಗತ ಡಿ. ಸುಧಾಕರ್‌ರವರು ಬೇರೆ ಜಾಗದಲ್ಲಿ ಕುಳಿತಿದ್ದಂತಹ ಸಂದರ್ಭದಲ್ಲಿ, ಅವರದ್ದೇ ಭಾಷೆಯಲ್ಲಿ ಅವರಾಡಿದಂತಹ ಮಾತು ಈಗಲೂ ಸಹ ನೆನಪಿಗೆ ಬರುತ್ತಿದೆ. ಸುಧಾಕರ್‌ರವರೇ, ''ಎಲ್ಲೆಂದರಲ್ಲಿ ನೀವು ಕೂರಬೇಡಿ, ಮೊದಲೇ ನೀವು ಕಾಣುವುದಿಲ್ಲ ನಿಮ್ಮ ಸ್ಥಾನದಲ್ಲಿ ನಿಮಗೆ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲವೇ'' ಎಂದು ಮಾನ್ಯ ಸಭಾಪತಿಯವರು ಚಟಾಕಿ ಹಾರಿಸಿದಂತಹ ಸಂದರ್ಭದಲ್ಲಿ ಇಡೀ ಸದನ ನಕ್ಕಿದ್ದು ಉಂಟು. ಏಕೆಂದರೆ ದಿವಂಗತ ಸುಧಾಕರ್‌ರವರು ಇಲ್ಲಿ ಕುಳಿತುಕೊಳ್ಳುತ್ತಿದ್ದರು, ಅವರು ಕಾಣುತ್ತಿರಲಿಲ್ಲ. ಅಂತಹ ಸಂದರ್ಭದಲ್ಲಿ ಹಿಂದಿನ ಸಭೆಯಲ್ಲಿ ನಾನು 'ಏಕೆ ಕುಂಟುತ್ತೀರಿ ಸರ್' ಎಂದು ಅವರನ್ನು ಕೇಳಿದಾಗ ಅವರು 'ಶ್ರೀನಿವಾಸ್ ಅವರೇ, ನನ್ನ ಮಂಡಿ ಸವೆದುಹೋಗಿದೆ ಆಪರೇಷನ್ ಮಾಡಿಸಬೇಕು. ಆದರೆ ಸ್ವಲ್ಪ ಜನ ಸ್ನೇಹಿತರು ನನಗೆ ಸಿಂಗಾಪುರ್‌ನಲ್ಲಿ ಆಪರೇಷನ್ ಮಾಡಿಸಲು ಹೇಳುತ್ತಿದ್ದಾರೆ ಇನ್ನು ಸ್ವಲ್ಪ ಜನ ಸ್ನೇಹಿತರು ಇಲ್ಲಿಯೇ ಮಾಡಿಸಿ ಎಂದು ಹೇಳುತ್ತಿದ್ದಾರೆ. ನೀನೇನು ಹೇಳುತ್ತೀಯ' ಎಂದರು. ನಾನು 'ಸಿಂಗಾಪುರ್‌ನಲ್ಲಿಯೇ ಮಾಡಿಸಿ ಸರ್ ಏನೂ ಆಗುವುದಿಲ್ಲ, ಒಳ್ಳೆಯ ಟೆಕ್ನಾಲಜಿ ಇರುತ್ತದೆ' ಎಂದು ಅವರಿಗೆ ಹೇಳಿದ್ದೆ. ಆದರೆ ರಾಜಕೀಯವಾಗಿ ನಾವು ವಿರುದ್ಧವಾಗಿಯೇ ಇದ್ದೆವು. ಆದರೆ ಪಕ್ಷಕ್ಕೆ ಬಂದ ಮೇಲೆ ನನ್ನ ಚುನಾವಣೆಯಲ್ಲಿ ಅವರು ಭಾಗವಹಿಸಿದಂತಹ ರೀತಿ, ಜೊತೆಗೆ ಆ ಕ್ಷೇತ್ರದಲ್ಲಿ ಅವರ ಒಡನಾಟ ಖಂಡಿತವಾಗಿಯೂ ಇತಿಹಾಸದಲ್ಲಿ ನಿಂತು ಹೋಗುವಂತಹದ್ದು.

ಇನ್ನು ಮೂರನೇ ವ್ಯಕ್ತಿ ಯಾರೆಂದರೆ ಶ್ರೀ ವೆಂಕಟರಮಣಪ್ಪನವರು. ಶ್ರೀ ವೆಂಕಟರಮಣಪ್ಪನವರ ಜೊತೆ ನನಗಿಂತಲೂ ಹೆಚ್ಚಿನ ಒಡನಾಟ ಇದ್ದುದು ನಮ್ಮ ಮಾವನವರ ಜೊತೆಯಲ್ಲಿ. ಅವರನ್ನು 'ಏನು ತಿರುಪತಿ ವೆಂಕಟರಮಣಸ್ವಾಮಿ' ಎಂದು ಕರೆಯುತ್ತಿದ್ದರು. ಅವರು ತೆಲುಗಿನಲ್ಲಿ ಮಾತನಾಡುತ್ತಿದ್ದರು. ಜೊತೆಯಲ್ಲಿ ಊಟಕ್ಕೆ ಸೇರಿದಂತಹ ಸಂದರ್ಭದಲ್ಲಿ ನಾವು ಅವರ ಸೇವೆ ಮಾಡುವುದಕ್ಕೆ ನಿಂತುಕೊಳ್ಳುತ್ತಿದ್ದೆವು. ಅವರು ನಮ್ಮ ಮಾವನವರಿಗಿಂತ ಸುಮಾರು 24 ವರ್ಷ ದೊಡ್ಡವರಾದರೂ ಸಹ ಅವರ ಮಾತು ಹೇಗಿತ್ತು ಎಂದರೆ 'ಉಂಡಪ್ಪ ಶ್ರೀನಿವಾಸ, ನೀಕು ಅರ್ಥಮಾಯಿಲೇದು, ವಾಳ್ಳು ಕುಕೋನ್ನಿ' ಎಂದು ಹೇಳುತ್ತಿದ್ದರು. ಈ ಮೂರು ಜನ ರಾಜಕೀಯ ವ್ಯಕ್ತಿಗಳು ಜೊತೆಯಲ್ಲಿ 'ಗಾನಕೋಗಿಲೆ' ಎಂದು ಹೆಸರು ಪಡೆದಂತಹವರು ಮತ್ತು ರಾಜಕೀಯವಾಗಿ ಚಿಂತನೆಯನ್ನು ಮಾಡಿ, ರಾಜಕೀಯ ದಾರ್ಶನಿಕರಾಗಿ ಈಗಿನ ಪೀಳಗೆಯ ರಾಜಕಾರಣಿಗಳಿಗೆ ಮಾದರಿಯಾಗಬೇಕು, ರಾಜಕೀಯ ಹಾದಿ ತಪ್ಪುತ್ತಿದೆ, ಅವರಿಗೆ ಒಂದು ದಾರಿದೀಪವಾಗಿ ಕೆಲಸ ಮಾಡಬೇಕೆಂದು ಕೊನೆಯಲ್ಲಿ ಸಂಸದರಾದ ದಿವಂಗತ ಹೆಚ್. ಹನುಮಂತಪ್ಪನವರು ಸೇರಿದಂತೆ ಆ ನಿಟ್ಟಿನಲ್ಲಿ ಇವತ್ತು ಹದಿಮೂರು ಜನರನ್ನು ನಾವು ಕಳೆದುಕೊಂಡಿದ್ದೇವೆ. ಈ ಸಂತಾಪ ಸೂಚನೆಯಲ್ಲಿ ಶ್ರೀಮತಿ ಚೆನ್ನಮ್ಮನವರು ಎಲ್ಲ ರಾಜಕೀಯ ಕುಟುಂಬದಲ್ಲಿರುವಂತಹ ಹೆಣ್ಣುಮಕ್ಕಳಿಗೆ ಅವರು ಮಾದರಿಯಾಗಿರುತ್ತಾರೆ. ಏಕೆಂದರೆ ರಾಜಕಾರಣದಲ್ಲಿ ಒಬ್ಬ ರಾಜಕೀಯ ವ್ಯಕ್ತಿ ಅಥವಾ ಒಬ್ಬ ರಾಜಕಾರಣಿ ನೆಮ್ಮದಿಯಾಗಿರಬೇಕೆಂದರೆ ಆ ಕುಟುಂಬದ ಸದಸ್ಯೆಯಾಗಿ ಅವರ ಸಹಕಾರ ಮತ್ತು ಅವರು ಕೊಡುವಂತಹ ಪ್ರೀತಿ, ವಿಶ್ವಾಸ ರಾಜಕಾರಣದಲ್ಲಿ ಮೈಲುಗಲ್ಲಾಗಿ ದೂರ ದೂರಕ್ಕೆ ಕೊಂಡೊಯ್ಯುತ್ತದೆ. ಆ ನಿಟ್ಟಿನಲ್ಲಿ ಶ್ರೀಮತಿ ಚೆನ್ನಮ್ಮನವರು ಮುಖ್ಯ ಪಾತ್ರವನ್ನು ವಹಿಸಿ ಕರ್ನಾಟಕದಿಂದ ಹಿಡಿದು ದೆಹಲಿಯ ರಾಜಕಾರಣದವರೆಗೂ ಶ್ರೀ ಹೆಚ್.ಡಿ. ದೇವೇಗೌಡರನ್ನು ಕೊಂಡೊಯ್ದು ಈ ರಾಷ್ಟ್ರದ ಕರ್ನಾಟಕದ ಪ್ರಥಮ ಪ್ರಧಾನಿಯನ್ನಾಗಿ ಮಾಡುವುದಕ್ಕೆ ಖಂಡಿತವಾಗಿಯೂ ಅವರು ಕಾರಣೀಭೂತರಾಗಿದ್ದಾರೆ. ಆ ನಿಟ್ಟಿನಲ್ಲಿ ಇವತ್ತಿನ ಈ ಸಂತಾಪ ಸೂಚನೆ ಸಮಾಜಕ್ಕೆ ಕೊಡುಗೆ ಏನೆಂದರೆ ಬರುವಂತಹ ಸಂದರ್ಭದಲ್ಲಿ ನಾವು ಏನೂ ತರುವುದಿಲ್ಲ, ಹೋಗುವಂತಹ ಸಂದರ್ಭದಲ್ಲಿ ಏನನ್ನೂ ತೆಗೆದುಕೊಂಡು ಹೋಗುವುದಿಲ್ಲ. ಬರಿಗೈಯಲ್ಲಿ ಬಂದು ಬರಿಗೈಯಲ್ಲಿ ಹೋಗುವಂತಹ ನಾವು ಒಮ್ಮೆ ಈ ಮನುಷ್ಯ ಜೀವನದಲ್ಲಿ ಹುಟ್ಟಿದ ಮೇಲೆ ನಾವು ಏನು ಕುರುಹುಗಳನ್ನು ಈ ಸಮಾಜಕ್ಕೆ ಬಿಟ್ಟು ಹೋಗಿದ್ದೇವೆ ಎನ್ನುವುದು ಶಾಶ್ವತವಾಗುತ್ತದೆ. ಆ ನಿಟ್ಟಿನಲ್ಲಿ ಇತಿಹಾಸದ ಪುಟಗಳಲ್ಲಿ ನಿಲ್ಲುವಂತಹ ರೀತಿಯಲ್ಲಿ ಈ ಸಮಾಜದಲ್ಲಿ ನಮ್ಮ ಬದುಕು ಇರಬೇಕು ಆ ಬದುಕು ಒಳ್ಳೆಯತನವನ್ನು ಮತ್ತು ಈಗಿನ ಪೀಳಗೆಗೆ ಮಾರ್ಗದರ್ಶಕರಾಗಿ ಒಂದಷ್ಟು ಇತಿಹಾಸವನ್ನು ಸೃಷ್ಠಿ ಮಾಡುವ ನಿಟ್ಟಿನಲ್ಲಿ ನಾವು ಬಿಟ್ಟು ಹೋದರೆ ಅದು ಶಾಶ್ವತ ಎನ್ನುವಂತಹ ಸಂದೇಶವನ್ನು ರವಾನೆ ಮಾಡುತ್ತಾ, ಈ ಸಂತಾಪ ಸೂಚನೆಯಲ್ಲಿ ಹದಿಮೂರು ವ್ಯಕ್ತಿಗಳ ಕುಟುಂಬಗಳಿಗೆ ಅವರ ಅಗಲಿಕೆಯಿಂದಾದ ದುಃಖವನ್ನು ಭರಿಸುವಂತಹ ಶಕ್ತಿ ಬರಲಿ ಜೊತೆಗೆ ಅವರು ಬಿಟ್ಟು ಹೋಗಿರುವಂತಹ ಸಂದೇಶಗಳು ಅಥವಾ ಇತಿಹಾಸದ ಪುಟಗಳಲ್ಲಿ ಸೇರುವುದಕ್ಕೆ ಕಾರಣೀಭೂತರಾದಂತಹ ಅವರ ವಿಚಾರಧಾರೆಗಳು ಈ ಸಮಾಜಕ್ಕೆ ದಾರಿದೀಪವಾಗಲಿ ಎಂದು ಹೇಳುತ್ತಾ ಮತ್ತೊಮ್ಮೆ ಅವರ ಕುಟುಂಬ ಸದಸ್ಯರಿಗೆ ದುಃಖ ಭರಿಸುವ ಶಕ್ತಿ ಸಿಗಲಿ ಎಂದು

ಹೇಳಿ ನನಗೆ ಮಾತನಾಡಲು ಕೊಟ್ಟಂತಹ ಕೊನೆಯ ಅವಕಾಶಕ್ಕೆ ಧನ್ಯವಾದಗಳನ್ನು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:-** ಮೃತರುಗಳ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ. ಮೃತರುಗಳ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಮೃತರ ಗೌರವಾರ್ಥ ಸದನದಲ್ಲಿ ಉಪಸ್ಥಿತರಿದ್ದವರೆಲ್ಲರೂ ಎದ್ದುನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)**

**ಸಭಾಪತಿಯವರು:-** ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತ ಗಣ್ಯರ ಕುಟುಂಬ ವರ್ಗದವರಿಗೆ ಕಳುಹಿಸಲಾಗುವುದು.

**ಶ್ರೀ ಕೆ. ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಹೊಸ ಸದಸ್ಯರುಗಳನ್ನು ಸದನಕ್ಕೆ ಪರಿಚಯ ಮಾಡಿಲ್ಲ.

**ಸಭಾಪತಿಯವರು:-** ಹೊಸ ಶಾಸಕರ ಪರಿಚಯವನ್ನು ನಾಳೆ ದಿವಸ ಮಾಡಿಕೊಡಲಾಗುತ್ತದೆ. ಇವತ್ತು ಸಂತಾಪ ಸೂಚನೆಗಳು ಮಾತ್ರ ಇದ್ದು, ನಾಳೆ ಸಚಿವರುಗಳನ್ನು ಮತ್ತು ಶಾಸಕರುಗಳ ಪರಿಚಯ ಮಾಡಿಕೊಡಲಾಗುತ್ತದೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ತಾವು ಹೊಸ ಸದಸ್ಯರುಗಳನ್ನು ಪರಿಚಯ ಮಾಡಿಕೊಡದೇ ಸದನದಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ.

**ಸಭಾಪತಿಯವರು:-** ಆಯಿತು, ಅವರಿಗೆ ಅವಕಾಶ ಕೊಟ್ಟಿದ್ದೇನೆ. ಅವರ ಹೆಸರುಗಳನ್ನು ಹೇಳಿದ್ದು ಅವೆಲ್ಲಾ ರೆಕಾರ್ಡ್‌ಗೆ ಹೋಗಿವೆ. ಇಲ್ಲಿ ಬಂದಿರುವಂತಹವರೆಲ್ಲಾ ಪರಿಚಯ ಇರುವವರೇ ಆಗಿದ್ದು, ಮಾನ್ಯ ಭೋಜೇಗೌಡರಿಗೆ ಇನ್ನೂ ಜಾಸ್ತಿ ಪರಿಚಯ ಬೇಕೆಂದರೆ ಸಂಜೆ ವೇಳೆಗೆ ಸೇರಬಹುದು.

**ಶ್ರೀ ಎಸ್.ಎಲ್. ಭೋಜೇಗೌಡ:-** ಅಲ್ಲೊಬ್ಬ ಹೆಣ್ಣುಮಗಳು ಕುಳಿತಿದ್ದಾರೆ. ಆ ಹೆಣ್ಣುಮಗಳು ಯಾರು ಎಂದು ಗೊತ್ತಾಗಲಿಲ್ಲ.

**ಸಭಾಪತಿಯವರು:-** ನಾಳೆ ದಿವಸ ಸಭಾನಾಯಕರು ಹೊಸ ಸದಸ್ಯರುಗಳನ್ನು ಸದನಕ್ಕೆ ಪರಿಚಯ ಮಾಡಿಕೊಡುತ್ತಾರೆ. ಈಗ ಸದನವನ್ನು ನಾಳೆ ಬೆಳಗ್ಗೆ 11.00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಮಧ್ಯಾಹ್ನ 1 ಗಂಟೆ 49 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ 14ನೇ ಆಗಸ್ಟ್ ಮಾಹೆ 2026ರಂದು ಶುಕ್ರವಾರ ಬೆಳಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)**